ರಂಜನೆ ಬೋಧನೆ ಪ್ರಚೋದನೆ

ಗೌರಿ


ಲಂಕೇಶ್

ಡಿಸೆಂಬರ್ 3, 2008 ರೂ. 12/-




ಟೆರರಿಸ್ಟ್ ಲಿಂಕ್

ನಕ್ಸಲ್ ಮನೋಹರ್




ವ್ಯರ್ಥ ಬಲಿದಾನ



ಮೈಸೂರು ಸೋಪ್ಸ್

ಯಡ್ಡಿ-ಅಡ್ವಾಣಿ ಜಂಟಿ ಡೀಲ್!



ಮೆಂಟಲ್ ಮಂತ್ರಿ ಬಚ್ಚೇಗೌಡ

ಕರಾವಳಿ ಅಲೆ' ಮೇಲೆ ಮತ್ತೆ ದಾಳಿ


ಭೀಮಸೇನ್ ಭಿನ್ನಮುಖ



ಹಿಂದೂತ್ವವಾದಿಗಳು ದೇಶದ್ರೋಹಿಗಳು

ಸ್ವಾಮಿ ಅಗ್ನಿವೇಶ್ ಅವರು ಪ್ರಗತಿಪರರು, ಕೋಮು ಸೌಹಾರ್ದದಲ್ಲಿ ನಂಬಿಕೆ ಇಟ್ಟಿರುವವರು ಮತ್ತು ಎಲ್ಲರಿಗೂ ಲೇಸನ್ನು ಬಯಸುವವರು. ಅವರು ಇತ್ತೀಚೆಗೆ ಯೋಗಿ ಸಿಕಂದ್ ಎಂಬ ಬರಹಗಾರರಿಗೆ ಒಂದು ಸಂದರ್ಶನ ನೀಡಿ, ಹಿಂದೂತ್ವವಾದದಿಂದಾಗಿ ಈ ದೇಶಕ್ಕೆ ಆಗಲಿರುವ ಅಪಾಯದ ಬಗ್ಗೆ ಎಚ್ಚರಿಸಿದ್ದಾರೆ. ಆ ಸಂದರ್ಶನದ ಆಯ್ದ ಭಾಗಗಳನ್ನು ಇಲ್ಲಿ ನಿಮಗಾಗಿ ಅನುವಾದಿಸಿ ಪ್ರಕಟಿಸಿದ್ದೇವೆ.

ಇತ್ತೀಚೆಗೆ ಸಾವಿರಾರು ಮುಸಲ್ಮಾನ ಮೌಲ್ವಿಗಳು, ಭಯೋತ್ಪಾದಕ ಕೃತ್ಯಗಳನ್ನು ಯಾರೇ ಎಸಗಿದ್ದರೂ ಅದನ್ನು ಖಂಡಿಸಬೇಕೆಂದು ಫತ್ವಾ ಹೊರಡಿಸಿದ್ದಾರೆ. ಅದೇ ರೀತಿ, ಮೊಡಸ್ಸಾ ಮತ್ತು ಮಾಲೆಗಾಂವ್‌ನಲ್ಲಿ ಹಿಂದೂತ್ವವಾದಿಗಳು ನಡೆಸಿರುವ ಭಯೋತ್ಪಾದಕ ಕೃತ್ಯಗಳನ್ನು ಹಿಂದೂ ಸ್ವಾಮಿಗಳು ಖಂಡಿಸಬೇಕಿದೆ. ಈ ಹಿಂದೂ ಭಯೋತ್ಪಾದಕರು ಹಿಂದೂ ಸಮಾಜಕ್ಕೆ ಕೆಟ್ಟ ಹೆಸರು ತರುತ್ತಿದ್ದಾರೆ. ಹಿಂದೂ ಧರ್ಮದ ಹೆಸರಲ್ಲಿ ಯಾರೇ ಧರ್ಮ ವಿರೋಧಿ, ಜನ ವಿರೋಧಿ, ಮಾನವೀಯತೆ ವಿರೋಧಿ ಕೃತ್ಯಗಳನ್ನು ನಡೆಸಿದರೆ ಅದನ್ನು ಖಂಡಿಸಿ ಎಂದು ಹೇಳಿದರೆ, ಅದ್ಯಾಕೋ ಹಿಂದೂ ಸ್ವಾಮಿಗಳು ಸುಮ್ಮನಿದ್ದಾರೆ. ಇಂತಹ ಅಮಾನುಷ ಕೃತ್ಯಗಳ ಬಗ್ಗೆ ಸುಮ್ಮನಿದ್ದರೆ ಅವುಗಳನ್ನು ನಾವು ಬೆಂಬಲಿಸುತ್ತೇವೆ ಎಂದೇ ಅರ್ಥ.



ಅಂದಹಾಗೆ ಸ್ವತಂತ್ರ ಭಾರತದಲ್ಲಿ ಮೊಟ್ಟ ಮೊದಲು ಭಯೋತ್ಪಾದಕ ಕೃತ್ಯಕ್ಕೆ ಬಲಿಯಾದವರು ಮಹಾತ್ಮಾ ಗಾಂಧಿ. ಅವರನ್ನು ಕೊಂದವನು ಮುಸಲ್ಮಾನನಲ್ಲ, ಬದಲಾಗಿ ಓರ್ವ ಹಿಂದೂ. ಹಾಗೆಯೇ ಇಂದಿರಾ ಗಾಂಧಿಯನ್ನಾಗಲಿ, ರಾಜೀವ್ ಗಾಂಧಿಯನ್ನಾಗಲಿ ಕೊಂದದ್ದು ಮುಸಲ್ಮಾನರಲ್ಲ, ಆದ್ದರಿಂದ ಬಿಜೆಪಿಯವರು ಪದೇಪದೇ "ಎಲ್ಲಾ ಮುಸಲ್ಮಾನರೂ ಭಯೋತ್ಪಾದಕರಲ್ಲದಿದ್ದರೂ ಎಲ್ಲಾ ಭಯೋತ್ಪಾದಕರು ಮುಸಲ್ಮಾನರೆ" ಎಂದು ಹೇಳುವುದು ಅಪ್ಪಟ ಸುಳ್ಳು.


ಸನ್ಯಾಸಿನಿಯ ವೇಷವನ್ನು ತೊಟ್ಟಿರುವ ಪ್ರಗ್ಯಾ ನಿಜವಾಗಲು ಅಪರಾಧಿ ಎಂದು ಸಾಬೀತಾದರೆ ಆಕೆಯನ್ನು ಹಿಂದೂ ಸಮಾಜ ಬಹಿಷ್ಕರಿಸಬೇಕು. ಯಾಕೆಂದರೆ ಆಕೆಯಂತಹವರು ಹಿಂದೂಧರ್ಮ ಮತ್ತು ಹಿಂದೂ ಸಮಾಜದ ದ್ರೋಹಿಗಳು.


ಹಿಂದೂತ್ವ ಸಿದ್ಧಾಂತವನ್ನು 1920 ರಲ್ಲಿ ಹುಟ್ಟುಹಾಕಿದ್ದು ಸಾವರ್ಕರ್. ಆತನ ಪ್ರಕಾರ ಈ ದೇಶದ ಮುಸಲ್ಮಾನ ಮತ್ತು ಕ್ರಿಶ್ಚಿಯನ್ನರು ನಿಜವಾದ ಭಾರತೀಯರಲ್ಲ, ಆದ್ದರಿಂದ ಅವರಿಗೆ ಹೆಚ್ಚೆಂದರೆ ಎರಡನೆ ದರ್ಜೆಯ ಸ್ಥಾನವನ್ನು ನೀಡಬೇಕು. ಆತನ ಇಂತಹ ವಿಷಕಾರುವ ನೀತಿಯಿಂದಾಗಿಯೇ ಮುಸಲ್ಮಾನರು ತಮಗೆ ಪ್ರತ್ಯೇಕ ದೇಶಬೇಕೆಂದು ಕೇಳಲಾರಂಭಿಸಿದರು. ಹಿಂದೂತ್ವವಾದ ಇಲ್ಲದಿದ್ದರೆ ದೇಶದ ವಿಭಜನೆ ಆಗುತ್ತಿರಲಿಲ್ಲ ಎಂದು ನಾನು ದೃಢವಾಗಿ ನಂಬಿದ್ದೇನೆ. ಅಷ್ಟೇ ಅಲ್ಲ, ದೇಶದ ವಿಭಜನೆಯ ನಂತರವೂ ಭಾರತದಲ್ಲೇ ಉಳಿದುಕೊಂಡ ಮುಸಲ್ಮಾನರು ಈ ಹಿಂದೂತ್ವವಾದಿಗಳಿಗಿಂತಲೂ ದೇಶಭಕ್ತರು. ಯಾಕೆಂದರೆ ಅವರೆಲ್ಲ ಈ ದೇಶ ಬಿಟ್ಟು ಹೋಗಲಿಲ್ಲ ಮಾತ್ರವಲ್ಲ ಅದೆಷ್ಟೇ ನೋವು, ಸಂಕಷ್ಟ ಮತ್ತು ದೌರ್ಜನ್ಯಗಳನ್ನು ಎದುರಿಸಬೇಕಾದರೂ ಅವರೆಲ್ಲ ದೃಢವಾಗಿ ಇಲ್ಲೇ ನಿಂತರು. ಅಂತಹವರ ದೇಶಭಕ್ತಿಯನ್ನು ಪ್ರಶ್ನಿಸುವ ಧೈರ್ಯ ಯಾರಿಗಿದೆ?


ಒಟ್ಟಾರೆಯಾಗಿ ಹಿಂದೂತ್ವವಾದವು ಸಿದ್ಧಾಂತದಲ್ಲೂ ಮತ್ತು ಕ್ರಿಯೆಯಲ್ಲೂ ಭಯೋತ್ಪಾದನೆಯೊಂದಿಗೆ ತಳುಕು ಹಾಕಿಕೊಂಡಿದೆ. ಅಪ್ಪಟ ಫ್ಯಾಸಿಸ್ಟ್ ಆದ ಹಿಂದೂತ್ವವಾದಕ್ಕೆ ಬರುವ ದಿನಗಳಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ತುತ್ತಾಗುವವರು ಮತ್ತು ಅದಕ್ಕೆ ಬಲಿಯಾಗುವವರು ಮುಸಲ್ಮಾನರೂ ಅಲ್ಲ, ಕ್ರಿಶ್ಚಿಯನ್ನರೂ ಅಲ್ಲ, ಬದಲಾಗಿ ಹಿಂದೂಗಳೇ.

ಇತಿಹಾಸ ಕೂಡ ಇದನ್ನೇ ಸ್ಪಷ್ಟಪಡಿಸುತ್ತದೆ. ಯಹೂದಿಯರನ್ನು ಅಪಾರ ಸಂಖ್ಯೆಯಲ್ಲಿ ಹಿಟ್ಲರ್ ಕೊಲ್ಲುತ್ತಿದ್ದಾಗ ಜರ್ಮನಿಯ ಕ್ರಿಶ್ಚಿಯನ್ನರು ಸುಮ್ಮನಿದ್ದರು. ಆದರೆ ಎರಡನೆ ಮಹಾಯುದ್ಧದಲ್ಲಿ ಜರ್ಮನಿಯ ಕ್ರಿಶ್ಚಿಯನ್ನರು ದೊಡ್ಡ ಸಂಖ್ಯೆಯಲ್ಲಿ ಬಲಿಯಾದರು. ಹಾಗೆಯೇ ಭಿಂದ್ರೇನ್‌ವಾಲೆ ಮತ್ತಾತನ ಅನುಯಾಯಿಗಳು ಹಿಂದೂಗಳನ್ನು ಕೊಲ್ಲುತ್ತಿದ್ದಾಗ ಸಿಖ್ಖರು ಸುಮ್ಮನಿದ್ದರು. ಆದರೆ ಆನಂತರ ಖಾಲಿಸ್ತಾನಿಗಳು ಹಿಂದೂಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಕೊಂದದ್ದು ಸಿಖ್ಖರನ್ನು. ಕಾಶ್ಮೀರದಲ್ಲಿ ಕೂಡ ಇಸ್ಲಾಮಿ ಭಯೋತ್ಪಾದಕರು ಹಿಂದೂಗಳಿಗಿಂತ ಹೆಚ್ಚು ಮುಸಲ್ಮಾನರನ್ನು ಕೊಂದಿದ್ದಾರೆ. ಪಾಕಿಸ್ತಾನ ಸರ್ಕಾರದ ನೆರವಿನೊಂದಿಗೆ ಬಲಿಷ್ಠಗೊಂಡ ಅಲ್ಲಿನ ಮೂಲಭೂತವಾದಿ ಮುಸಲ್ಮಾನರ ಕ್ರೌರ್ಯಕ್ಕೆ ಇವತ್ತು ಬಲಿಯಾಗುತ್ತಿರುವುದು ಬೇರೆ ಯಾರೂ ಅಲ್ಲ, ಪಾಕಿಸ್ತಾನದ ಮುಸಲ್ಮಾನರೆ. ಆದ್ದರಿಂದ ಭಾರತದ ಬಗ್ಗೆ ಕಾಳಜಿ ಹೊಂದಿರುವ ಎಲ್ಲರೂ ಇವತ್ತು ಹಿಂದೂತ್ವವಾದಿ ಫ್ಯಾಸಿಸ್ಟರ ವಿರುದ್ಧ ಗಟ್ಟಿಯಾಗಿ ದನಿ ಎತ್ತಬೇಕಿದೆ. ಇಲ್ಲವೆಂದರೆ ನಾಳೆ ಹಿಂದೂಗಳೇ ಅಪಾರ ನೋವನ್ನು ಅನುಭವಿಸಬೇಕಾಗುತ್ತದೆ. ■

ಕಾರ್ಟೂನ್ ಕಾರ್ನರ್







ನಂಬಿದ್ರೆ ನಂಬಿ ಬಿಟ್ರೆ ಬಿಡಿ



"ಜಯ ಕರ್ನಾಟಕವು ಬಡಜನರ ಪರವಾಗಿ ಶಾಂತಿಯುತ ಹೋರಾಟವನ್ನು ಮಾಡುತ್ತದೆ. ಆದರೆ ಅಂತಹ ಶಾಂತಿಯುತ ಹೋರಾಟವು ಯಶಸ್ವಿಯಾಗದಿದ್ದರೆ ನಮ್ಮ ಸಂಘಟನೆ ಕ್ರಾಂತಿಕಾರಕ ಹೋರಾಟದ ಮಾರ್ಗವನ್ನು ಹಿಡಿಯುತ್ತದೆ."

-ಮುತ್ತಪ್ಪ ರೈ, ಮಾಜಿ ಡಾನ್ ಮತ್ತು ಜೈ ಕರ್ನಾಟಕ ಸಂಘಟನೆಯ ಅಧ್ಯಕ್ಷ

ಸತ್ಯದರ್ಶನ


"ಅಭಿನವ ಭಾರತ ಎಂಬ ಸಂಘಟನೆಯ ಅಧ್ಯಕ್ಷೆ ಹಿಮಾನಿ ಸಾವರ್ಕರ್ ಅವರ ಹೇಳಿಕೆಗಳನ್ನು ಓದಿದ ನಂತರ ತುರ್ತಾಗಿ ಆಕೆಯನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕೆನಿಸುತ್ತದೆ. ಮಹಾತ್ಮಾ ಗಾಂಧಿಯನ್ನು ಕೊಂದ ಗೋಡ್ಸೆಯ ಮಗಳಾದ ಮತ್ತು ಹಿಂದೂತ್ವವಾದಿ ವಿ.ಡಿ. ಸಾವರ್ಕರ್‌ನ ಸೊಸೆಯಾದ ಈಕೆಯ ವೈಯಕ್ತಿಕ ಸ್ವತ್ತಲ್ಲ ನಮ್ಮ ದೇಶ. ಬೇರೆ ಧರ್ಮದವರಿಗೆ ಈ ದೇಶದಿಂದ ತೊಲಗಿ ಎಂದು ಹೇಳಲು ಈಕೆ ಯಾರು?"

"ಇಂತಹ ವಿಧ್ವಂಸಕ ಹೇಳಿಕೆಗಳನ್ನು ನೀಡಿರುವ ಹಿಮಾನಿ ಸಾವರ್ಕರ್‌ಳನ್ನು ಕೂಡಲೇ ಬಂಧಿಸಬೇಕಿದೆ."

"ಹಿಮಾನಿ ಸಾವರ್ಕರ್‌ನಂತಹ ರೋಗಿಷ್ಟರನ್ನು ಈ ಸಮಾಜದ ಹಿತಕ್ಕಾಗಿ ಹುಚ್ಚಾಸ್ಪತ್ರೆಯಲ್ಲಿ ಇಡಬೇಕಿದೆ."

-ಔಟ್‌ಲುಕ್ ಪತ್ರಿಕೆಯ ಓದುಗರು

ಹೀಗೂ ಉಂಟೆ!



"ನರೇಂದ್ರ ಮೋದಿ ಈಗ ಔರಂಗಜೇಬ್‌ನಂತೆ ವರ್ತಿಸುತ್ತಿದ್ದಾನೆ."

-ಅಶೋಕ್ ಸಿಂಘಾಲ್, ವಿಶ್ವಹಿಂದೂ ಪರಿಷತ್ತಿನ ನಾಯಕ. ಸಿಂಘಾಲ್‌ನ ಆಕ್ರೋಶಕ್ಕೆ ಕಾರಣ: ತಾನೋರ್ವ ಅಭಿವೃದ್ಧಿ ಪರ ನಾಯಕನೆಂದೂ, ತಾನು ಜಾತ್ಯತೀತನೆಂದೂ ಬಿಂಬಿಸಿಕೊಳ್ಳಲು ಹೊರಟಿರುವ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿ ಆ ರಾಜ್ಯದಲ್ಲಿನ 154 ಅಕ್ರಮ ದೇವಸ್ಥಾನಗಳನ್ನು ಉರುಳಿಸಿರುವುದು. ಇನ್ನೂ 161 ದೇಗುಲಗಳನ್ನು ಧ್ವಂಸ ಮಾಡುವ ಉದ್ದೇಶ ಮೋದಿಗಿದೆ.


ಫಾದರ್, ಸನ್ ಅಂಡ್ ಹೋಲಿ ಘೋಸ್ಟ್



ಖ್ಯಾತ ಲೇಖಕ ಯು.ಆರ್. ಅನಂತಮೂರ್ತಿ ಅವರು ಜನತಾದಳದ ರಾಷ್ಟ್ರಾಧ್ಯಕ್ಷ ದೇವೇಗೌಡ ಮತ್ತು ಅವರ ಪುತ್ರ ರಾಜ್ಯಾಧ್ಯಕ್ಷ ಕುಮಾರಸ್ವಾಮಿಯವರ ಮಧ್ಯೆ ಕುಳಿತಿದ್ದ ಚಿತ್ರ ಪತ್ರಿಕೆಗಳಲ್ಲಿ ಪ್ರಕಟಗೊಂಡದ್ದನ್ನು ನೋಡಿ ಅನಂತಮೂರ್ತಿಯವರ ಅಭಿಮಾನಿಯೊಬ್ಬರು ಅವರಿಗೆ ಕಳುಹಿಸಿದ ಎಸ್‌ಎಂಎಸ್ ಹೀಗಿತ್ತು:

"ತಂದೆ ಮತ್ತು ಮಗನ ನಡುವೆ ಪವಿತ್ರಾತ್ಮ (ಹೋಲಿ ಘೋಸ್ಟ್)ವಾದ ನಿಮ್ಮನ್ನು ಕಂಡೆ."

(ಅಂದಹಾಗೆ ಪವಿತ್ರಾತ್ಮ ಕ್ರೈಸ್ತ ತ್ರಿಮೂರ್ತಿಗಳಲ್ಲಿ ಮೂರನೆಯದು)



ಗುಂಡನ ಹೊಸ ವ್ಯಾಖ್ಯಾನಗಳು:

ಉದ್ವಿಗ್ನತೆ: ಗುಂಡನ ಹೆಂಡತಿ ಪ್ರೆಗ್ನೆಂಟ್ ಆದಾಗ!

ಭೀತಿ: ಅದೇ ಹೊತ್ತಿಗೆ ಗುಂಡನ ಗರ್ಲ್ ಫ್ರೆಂಡ್ ಕೂಡ ಪ್ರೆಗ್ನೆಂಟ್ ಆದರೆ!!

ದುರಂತ: ಅವರಿಬ್ಬರೂ ಗರ್ಭ ಧರಿಸುವುದಕ್ಕೆ ಗುಂಡ ಕಾರಣ ಆಗಿದ್ದಾಗ!!!

* * * *

ಹೆಂಡತಿ: ನಾನು ಅಕಸ್ಮಾತ್ತಾಗಿ ತಪ್ಪಿಸಿಕೊಂಡರೆ ನೀವೇನು ಮಾಡ್ತಿರಾ?

ಗಂಡ: ಪೇಪರ್‌ನಲ್ಲಿ ಜಾಹೀರಾತು ಕೊಡ್ತೀನಿ.

ಹೆಂಡತಿ: so sweet! ಅದರಲ್ಲಿ ಏನಂತ ಬರೀತೀರಾ?

ಗಂಡ: ಎಲ್ಲೇ ಇರು, ಹೇಗೆ ಇರು... ಅಲ್ಲೇ ಇರು!

ಕೇಸರಿ ಟೆರರಿಸಂ ಬೆಂಬಲಕ್ಕೆ ಅಡ್ವಾಣಿ



ಕಂಡಹಾಗೆ

■ ಗೌರಿ ಲಂಕೇಶ್

ಮೊದಲೇ ಒಂದು ಅಂಶವನ್ನು ಸ್ಪಷ್ಟಪಡಿಸಬೇಕಿದೆ. ಅದೇನೆಂದರೆ ಮಾಲೆಗಾಂವ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಅರೆಸ್ಟ್ ಆಗಿರುವ ಸಾಧ್ವಿ ಪ್ರಗ್ಯಾ, ಲೆಫ್ಟಿನೆಂಟ್ ಶ್ರೀಕಾಂತ್ ಪುರೋಹಿತ್ ಮತ್ತು ಇತರರ ಮೇಲೆ ಪೊಲೀಸ್ ದೌರ್ಜನ್ಯ ನಿಲ್ಲಬೇಕು, ಅವರೆಲ್ಲರಿಗೆ ಸೂಕ್ತ ಕಾನೂನು ನೆರವು ಸಿಗಬೇಕು, ಅವರ ಮೇಲೆ ಪೊಲೀಸರು ಮಾಡಿರುವ ಆರೋಪಗಳನ್ನು ಸಾಬೀತುಪಡಿಸುವತ್ತ ಸರ್ಕಾರ ನೋಡಿಕೊಳ್ಳಬೇಕು, ಆಕಸ್ಮಾತ್ ಸಾಧ್ವಿ ಮತ್ತಾಕೆಯ ತಂಡ ನಿರ್ದೋಷಿಗಳಾಗಿದ್ದರೆ ಅದನ್ನೂ ಸಾಬೀತುಪಡಿಸಲು ಅವರಿಗೆ ಎಲ್ಲ ಅವಕಾಶಗಳನ್ನು ಮಾಡಿಕೊಡಬೇಕು, ಇದೆಲ್ಲ ಸರಿಯಾಗಿ ನಡೆದ ನಂತರ ಎಲ್ಲರೂ ನ್ಯಾಯಾಲಯದ ತೀರ್ಪಿಗೆ ಬದ್ಧರಾಗಿರಬೇಕು.

ನಾವಾಗಲಿ, ಕಾನೂನು ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿರುವವರಾಗಲಿ, ಮಾನವ ಹಕ್ಕುಗಳ ಹೋರಾಟಗಾರರಾಗಲಿ ಇದನ್ನು ಮೊದಲ ಬಾರಿ ಹೇಳುತ್ತಿಲ್ಲ, ಬಹಳ ವರ್ಷಗಳಿಂದ ನಮ್ಮೆಲ್ಲರ ನಿಲುವು ಇದೇ ಆಗಿದೆ. ಬಾಂಬ್ ಸ್ಫೋಟ ಆರೋಪಗಳ ಮೇಲೆ, ಸಿಮಿ ಸದಸ್ಯರು ಎಂಬ ಸಂಶಯದ ಮೇಲೆ, ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿರಬಹುದು ಎಂಬ ನೆಪದಲ್ಲಿ ಸಾವಿರಾರು ಮುಸಲ್ಮಾನರನ್ನು ಪೊಲೀಸರು ಬಂಧಿಸಿದಾಗ ನಾವು ಹೇಳಿದ್ದು ಇದನ್ನೇ. ಈಗ ಸಾಧ್ವಿ, ಪುರೋಹಿತ್ ಮತ್ತು ಇತರರನ್ನು ಕುರಿತು ಹೇಳುವುದೂ ಇದೇ ಮಾತನ್ನೇ.

ಆದರೆ ಆರ್‌ಎಸ್‌ಎಸ್, ಬಜೆಪಿ, ವಿಶ್ವಹಿಂದೂ ಪರಿಷತ್, ಭಜರಂಗದಳ, ಅಭಿನವ ಭಾರತ್ ಮತ್ತು ಸಂಘ ಪರಿವಾರದ ಇತರೆ ತುಂಡುಗಳು ಮಾತ್ರ ಮೊದಲಿನಿಂದಲೂ ಹೇಗೆ ವರ್ತಿಸಿವೆ ನೋಡಿ.

"ಸಾಧ್ವಿ ಪ್ರಗ್ಯಾಗೆ ಪೊಲೀಸರು ದೈಹಿಕ ಹಿಂಸೆ ನೀಡಿದ್ದಾರೆ" ಎಂದು ಅರಚಾಡುತ್ತಿರುವ ಚೆಡ್ಡಿಗಳಿಗೆ ಅದೇ ಪೊಲೀಸರು ಮುಸಲ್ಮಾನ ಆರೋಪಿಗಳ ಮೇಲೆ ದೌರ್ಜನ್ಯ ನಡೆಸಿದ್ದು ಕಾಣಿಸಲಿಲ್ಲ. ಈಗ ಪ್ರಗ್ಯಾಳಿಗೆ ಕಾನೂನು ನೆರವು ನೀಡಲು ವಕೀಲರ ಸಂಘಗಳನ್ನು ರೂಪಿಸಿರುವ, ಆಕೆಯ ಪರವಾಗಿ ಕಾನೂನು ಸಮರಕ್ಕೆ ಹಣ ಸಂಗ್ರಹಿಸುತ್ತಿರುವ ಚೆಡ್ಡಿಗಳು ಪ್ರಗ್ಯಾಳಂತೆಯೇ ಭಯೋತ್ಪಾದನೆ ಆರೋಪದ ಮೇಲೆ ಮುಸಲ್ಮಾನ ಯುವಕರನ್ನು ಬಂಧಿಸಿದಾಗ ಪ್ರತಿಕ್ರಿಯಿಸಿದ್ದು ಹೇಗೆ? ಅಫಜಲ್‌ಗುರು ಪರವಾಗಿ ಯಾವ ವಕೀಲನೂ ವಕಾಲತ್ತು ವಹಿಸಬಾರದೆಂದು ದೆಹಲಿಯ ವಕೀಲರ ಸಂಘ ಫತ್ವಾ ಹೊರಡಿಸಿತ್ತು. ಕೊನೆಗೆ ನ್ಯಾಯಾಲಯವೇ ಅಫಜಲ್‌ಗುರುಗೆ ಓರ್ವ ವಕೀಲನನ್ನು ನೇಮಿಸಿತ್ತಾದರೂ ಆತ ಎಂದೂ ಅಫಜಲ್ ಗುರು ಪರವಾಗಿ ನ್ಯಾಯಾಲಯದಲ್ಲಿ ದನಿ ಎತ್ತಲಿಲ್ಲ. ಪರಿಣಾಮವಾಗಿ ಆತನಿಗೆ ಗಲ್ಲುಶಿಕ್ಷೆ ನೀಡಲಾಗಿದೆ. ಅಷ್ಟೇ ಅಲ್ಲ ಲಕ್ನೋ, ಅಲಹಾಬಾದ್ ಮತ್ತು ನಮ್ಮ ಹುಬ್ಬಳ್ಳಿಯಲ್ಲೂ ವಕೀಲ ಸಂಘಗಳು ಮುಸಲ್ಮಾನ ಯುವಕರ ವಕಾಲತ್ತನ್ನು ಯಾರೂ ವಹಿಸಬಾರದೆಂದು ಫರ್ಮಾನು ಹೊರಡಿಸಿದ್ದವು. ಆ ಫರ್ಮಾನನ್ನು ವಿರೋಧಿಸಿ ಆ ಯುವಕರ ಪರವಾಗಿ ವಕಾಲತ್ತು ವಹಿಸಲು ಕೆಲ ವಕೀಲರು ಮುಂದಾದಾಗ ಅವರ ಮೇಲೆ ಹಲ್ಲೆ ಮಾಡಲಾಗಿತ್ತಲ್ಲದೆ ಹುಬ್ಬಳ್ಳಿಯಲ್ಲಿ ವಕೀಲ ಇಸ್ಮಾಯಿಲ್ ಜಾಲಗಾರ ಅವರ ಕಚೇರಿಯನ್ನು ಧ್ವಂಸ ಮಾಡುವ ಯತ್ನವೂ ನಡೆದಿತ್ತು.

ಕೇಳಿ ಅಡ್ವಾಣಿ ಮತ್ತು ಕಂಪನಿಗೆ ನೆಮ್ಮದಿಯ ನಿದ್ದೆ ಬರುತ್ತಿದೆಯಾ ಎಂದು ಯಾರೂ ವ್ಯಂಗ್ಯವಾಡಿಲ್ಲ.

ನ್ಯಾಯಾಲಯದ ಮುಂದೆ ಪ್ರಮಾಣಪತ್ರ ಸಲ್ಲಿಸಿದ ಪ್ರಗ್ಯಾ ತನಗೆ ಪೊಲೀಸರು ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದಾರೆಂದು ಆರೋಪಿಸಿದಳು. ಇದನ್ನು ಕೇಳಿ ಬಜೆಪಿಯ ಭಾವಿಪ್ರಧಾನಿ ಅಡ್ವಾಣಿಯವರು ಎಷ್ಟು ಕ್ರೋಧಗೊಂಡರೆಂದರೆ "ಸಾಧ್ವಿಯೊಬ್ಬರನ್ನು ಅವಮಾನಿಸುವುದು ಎಂದರೇನು? ಪೊಲೀಸರು ಹಿಂದೂಗಳನ್ನು ಬಂಧಿಸುವ ಮೂಲಕ ರಾಜಕೀಯ ಮಾಡುತ್ತಿದ್ದಾರೆ. ಈ ATS (ಆಂಟಿ ಟೆರರ್ ಸ್ಕ್ವಾಡ್) ತಂಡವನ್ನೇ ಬದಲಾಯಿಸಬೇಕು" ಎಂದು ಅರಚಾಡಿದರು.



ಆದರೆ ಅದಕ್ಕೂ ಒಂದೆರಡು ದಿನಗಳ ಹಿಂದೆ ಹೈದರಾಬಾದಿನಲ್ಲಿ ಹಲವು ಮುಸಲ್ಮಾನ್ ಯುವಕರು ಪತ್ರಿಕಾಗೋಷ್ಠಿಯಲ್ಲಿ ಪೊಲೀಸರು ಎಂತೆಂತಹ ದೈಹಿಕ ಹಿಂಸೆ ನೀಡಿದ್ದರೆಂದು ವಿವರಿಸಿದ್ದರು. ಅಂದಹಾಗೆ ಈ ಯುವಕರನ್ನೆಲ್ಲ ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ ಸ್ಫೋಟಗೊಂಡ ಬಾಂಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿತ್ತಲ್ಲದೆ, ಕೆಲದಿನಗಳ ಹಿಂದೆ ಅವರೆಲ್ಲ ನಿರಪರಾಧಿಗಳು ಎಂದು ನ್ಯಾಯಾಲಯ ತೀರ್ಪು ನೀಡಿ ಬಿಡುಗಡೆಗೊಳಿಸಿದೆ.

ಇಂತಹ ನಿರಪರಾಧಿಗಳಿಗೆ ಪೊಲೀಸರು ನೀಡಿದ ದೈಹಿಕ ಹಿಂಸೆಯ ಬಗ್ಗೆ ಅಡ್ವಾಣಿಯವರ ಆತ್ಮಮರುಕ ಪಡುವುದಿಲ್ಲ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ ಎಂದು ಹೇಳಲು ಅವರ ನಾಲಿಗೆ ಸಿದ್ಧವಿಲ್ಲ, ಯಾಕೆಂದರೆ ಆ ಯುವಕರೆಲ್ಲಾ ಮುಸಲ್ಮಾನರು. ಆದರೆ ಪ್ರಗ್ಯಾ ಭಯೋತ್ಪಾದನೆಯಂತಹ ಆರೋಪ ಹೊತ್ತಿದ್ದರೂ, ಆಕೆ ನಿರಪರಾಧಿ ಎಂದು ಸಾಬೀತಾಗಿರದಿದ್ದರೂ ಆಕೆಯ ಬಗ್ಗೆ ಅಡ್ವಾಣಿಯವರಿಗೆ ಎಲ್ಲಿಲ್ಲದ ಕರುಣೆ. ಯಾಕೆಂದರೆ ಆಕೆ ಹಿಂದೂ. ಈ ದೇಶದ ಪ್ರಧಾನಿ ಆಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಮನುಷ್ಯನಲ್ಲಿ ಇಷ್ಟೊಂದು ಭೇದಭಾವ ಇದ್ದರೆ, ಈ ದೇಶಕ್ಕೆ ಇನ್ನೆಂತಹ ಭವಿಷ್ಯ ಇರಲು ಸಾಧ್ಯ?

ಇನ್ನು ಭಯೋತ್ಪಾದನೆ ನಿಗ್ರಹಕ್ಕೆ ಪೋಟಾ ಕಾಯಿದೆಯೇ ಮದ್ದು, ಆ ಕಾಯಿದೆಯಡಿ ಆರೋಪಿಗಳು ಪೊಲೀಸರಿಗೆ ನೀಡುವ ಹೇಳಿಕೆಗೆ ನ್ಯಾಯಾಲಯ ಮನ್ನಣೆ ನೀಡಬೇಕೆಂದು ಸಂಘ ಪರಿವಾರ ವಾದಿಸುತ್ತಾ ಬಂದಿತ್ತು. ಅದಕ್ಕೆ ಕಾರಣವೂ ಇತ್ತು. ಅದೇನೆಂದರೆ ಇದೇ ಪೊಲೀಸರು ಮುಸಲ್ಮಾನರಿಗೆ ದೈಹಿಕ ಹಿಂಸೆ ನೀಡಿ ಪಡೆಯುವ ತಪ್ಪೊಪ್ಪಿಗೆಯನ್ನೇ ಆಧಾರವಾಗಿಟ್ಟುಕೊಂಡು ಅವರಿಗೆ ಶಿಕ್ಷೆ ಆಗುವಂತೆ ಮಾಡುವುದು ಮತ್ತು ಆ ಮೂಲಕ ಇಡೀ ಮುಸಲ್ಮಾನ ಸಮುದಾಯವೇ ಭಯೋತ್ಪಾದಕ ಸಮುದಾಯ ಎಂದು ಬಿಂಬಿಸುವುದಾಗಿತ್ತು. ಅವರೇ ವಾದಿಸುತ್ತಿದ್ದಂತೆ ಪೋಟಾ ಜಾರಿಗೆ ಬಂದಿದ್ದರೆ ಪೊಲೀಸರ ದೌರ್ಜನ್ಯವನ್ನು ತಡೆಯಲಾಗದೆ ಪ್ರಗ್ಯಾ ಕೊಡಬಹುದಾದ ಹೇಳಿಕೆಯನ್ನಾಧರಿಸಿ ಆಕೆಗೆ ಗಲ್ಲುಶಿಕ್ಷೆ ಆಗುತ್ತಿತ್ತು, ಅಷ್ಟೇ ಅಲ್ಲ, ಆಕೆಯಲ್ಲಿ ಕೋಮು ದ್ವೇಷದ ವಿಷ ಬಿತ್ತಿ, ಅವಳನ್ನು ಭಯೋತ್ಪಾದಕಿಯನ್ನಾಗಿ ರೂಪಿಸಿದ ಆರೋಪದ ಮೇಲೆ, ಅವಳೊಂದಿಗೆ ಸಂಪರ್ಕ ಹೊಂದಿದ್ದ ಬಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ್‌ಸಿಂಗ್ ಮತ್ತು ಮಧ್ಯಪ್ರದೇಶ ಬಜೆಪಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್‌ರನ್ನೂ ಜೈಲಿಗೆ ದೂಡಬೇಕಾಗಿತ್ತು. ಹಿಂದೆಲ್ಲಾ ಮುಸಲ್ಮಾನರನ್ನೇ ಗುರಿಯಾಗಿಸಿಕೊಂಡು ಪೋಟಾ ಬೇಕೆಂದು ಚೀರಾಡುತ್ತಿದ್ದ ಸಂಘ ಪರಿವಾರ ಈಗ ಪ್ರಗ್ಯಾಳಿಂದಾಗಿ ತನ್ನ ಬುಡಕ್ಕೆ ಕೊಡಲಿ ಏಟು ಬೀಳಲಿದೆ ಎಂದು ಅರ್ಥಮಾಡಿಕೊಂಡು ಆಪ್ಪಿತಪ್ಪಿಯೂ POTA ಬಗ್ಗೆ ಚಕಾರವೆತ್ತುತ್ತಿಲ್ಲ.

ಭಾರತದಲ್ಲಿ ಸಂಭವಿಸುವ ಎಲ್ಲಾ ಭಯೋತ್ಪಾದಕ ಕೃತ್ಯಗಳ ಹಿಂದೆ ಮುಸಲ್ಮಾನರೇ ಇರುತ್ತಾರೆಂಬ ಭಾವನೆ ನಮ್ಮ ಪೊಲೀಸ್ ಮತ್ತು ಮಾಧ್ಯಮಗಳಲ್ಲಿ ಆಳವಾಗಿ ಬೇರುಬಿಟ್ಟಿದೆ. ಆದ್ದರಿಂದಲೇ ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ ಬಾಂಬ್ ಸ್ಫೋಟಗೊಂಡು ಆರು ಜನ ಮುಸಲ್ಮಾನರೆ ಸತ್ತರೂ, ಮಾಲೆಗಾಂವ್‌ನ ಮಸೀದಿಯ ಹತ್ತಿರ ಶುಕ್ರವಾರದ ನಮಾಜಿನ ಮೇಲೆ ಬಾಂಬ್ ಸ್ಫೋಟಿಸಿ 37 ಜನ ಮುಸಲ್ಮಾನರೇ ಸಾವಿಗೀಡಾಗಿದ್ದರೂ, ಸಂಜೋತಾ ಟ್ರೈನಿನಲ್ಲಿ ಸ್ಫೋಟ ಸಂಭವಿಸಿ ಸತ್ತ 68 ಜನರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರೇ ಇದ್ದರೂ ಆ ಎಲ್ಲಾ ಪ್ರಕರಣಗಳ ಹಿಂದೆ ಮುಸಲ್ಮಾನ್ ಸಂಘಟನೆಗಳೇ ಇದ್ದವು ಎಂಬಂತೆ ಪೊಲೀಸರು ಮತ್ತು ಮಾಧ್ಯಮಗಳು ಬಿಂಬಿಸಿದ್ದವು. ಸಾಮಾನ್ಯ ಜ್ಞಾನ ಇದ್ದವನಿಗೂ ಕೂಡ ಮುಸಲ್ಮಾನ ಭಯೋತ್ಪಾದಕರೇ ಯಾಕೆ ತಮ್ಮ ಪ್ರಾರ್ಥನಾ ಸ್ಥಳಗಳನ್ನು ಸ್ಫೋಟಿಸುತ್ತಾರೆ, ತಮ್ಮ ಸಮುದಾಯದವರನ್ನು ಕೊಲ್ಲುತ್ತಾರೆ, ಇದರ ಹಿಂದೆ ಬೇರೆ ಸಂಘಟನೆಗಳ ಕೈವಾಡವಿದೆ ಎಂದು ಹೊಳೆಯುತ್ತದೆ. ಆದರೆ ಪೊಲೀಸರು ಮಾತ್ರ ಎಂದಿನಂತೆ ಸಿಮಿ, ಲಷ್ಕರ್, ಜೈಷ್, ತಾಲಿಬಾನ್ ಎಂದೇ ಬಾಯಿಬಡಿದುಕೊಳ್ಳುತ್ತಿರುತ್ತಾರೆ.

ಇದನ್ನು ಚೆನ್ನಾಗಿ ಅರಿತಿರುವ ಬಜೆಪಿ ಈಗ ಐದು ರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆಗಳಲ್ಲಿ ಮತ್ತು ಸದ್ಯದಲ್ಲೇ ಎದುರಾಗಲಿರುವ ಲೋಕಸಭಾ ಚುನಾವಣೆಗಳಲ್ಲಿ ಭಯೋತ್ಪಾದನೆಯನ್ನೇ ಮುಖ್ಯ ತಂತ್ರವಾಗಿಸಿಕೊಂಡ 'ಭಾರತವನ್ನು ಉಳಿಸಿ' ಎಂಬ ಯಾತ್ರೆ ಮತ್ತು ಜಾತ್ರೆಗಳನ್ನು ಏರ್ಪಡಿಸಲು ಮುಂದಾಗಿತ್ತು. ಆದರೆ ಈಗ ಹಾಗೆ ಮಾಡಿದರೆ "ಬಜಪಿಗಳಿಂದ ಭಾರತವನ್ನು ಉಳಿಸಿ" ಎಂದು ಜನರೇ ಹೇಳುವ 'ಅಪಾಯ' ಇರುವುದರಿಂದ ಸದ್ಯಕ್ಕೆ ಆ ಯೋಜನೆಯನ್ನು ಕೈಬಿಟ್ಟಿರುವಂತಿದೆ.

ಹಿಂದೂತ್ವವಾದಿಗಳ ಎಡಬಿಡಂಗಿತನಕ್ಕೆ ಇನ್ನೊಂದು ಉದಾಹರಣೆ: ಇತ್ತೀಚೆಗೆ ದೆಹಲಿಯಲ್ಲಿ ನಡೆದ ಎನ್‌ಕೌಂಟರ್‌ಗೆ ಸಂಬಂಧಿಸಿದಂತೆ ಪೊಲೀಸರು ಜಾಮಿಯ ಮಿಲಿಯ ವಿಶ್ವವಿದ್ಯಾಲಯದ ಇಬ್ಬರು ಮುಸಲ್ಮಾನ ಯುವಕರನ್ನು ಬಂಧಿಸಿದರು. ವಿಶ್ವವಿದ್ಯಾಲಯದ ನಿಯಮಗಳ ಅನುಸಾರವಾಗಿ ಅವರಿಬ್ಬರಿಗೂ ಕಾನೂನಿನ ನೆರವು ನೀಡಲು ವಿವಿ ಮುಂದಾಯಿತು. ಆಗ ಹಿಂದೂತ್ವವಾದಿಗಳು ಭಯೋತ್ಪಾದಕರಿಗೆ ವಿವಿ ನೆರವು ನೀಡುವುದೆಂದರೇನು ಎಂದು ಕೆಂಡಕಾರಿದ್ದರು. ಆದರೆ ಈಗ ಅಂತಹದ್ದೇ ಆರೋಪವನ್ನು ಹೊತ್ತಿರುವ ಪ್ರಗ್ಯಾ ಪರವಾಗಿ ವಕೀಲರನ್ನು, ಹಣ ಸಂಗ್ರಹಣೆಯನ್ನು, ಸಹಿ ಆಂದೋಲನವನ್ನು ಇದೇ ಸಂಘಪರಿವಾರ ಮಾಡುತ್ತಿದೆ.

ಹಿಂದೂತ್ವವಾದಿಗಳ ಭಂಡತನ ಯಾವ ಮಟ್ಟದ್ದೆಂದರೆ ಅದರ ಮುಖವಾಣಿಯಾದ ಪಾಂಚಜನ್ಯದ ಸಂಪಾದಕ ತರುಣ್ ವಿಜಯ್ ಎಂಬಾತ "ಒಬ್ಬನೇ ಒಬ್ಬ ಹಿಂದೂ ಕೂಡ ಭಯೋತ್ಪಾದನೆಯನ್ನು ಸಮರ್ಥಿಸುವುದಿಲ್ಲ, ಅದು ನಮ್ಮ ವಂಶವಾಹಿಯಲ್ಲೇ ಇಲ್ಲ, ಈ ವಿಷಯದಲ್ಲಿ ನಮ್ಮ ರಕ್ತವರ್ಗವೇ ಬೇರೆಯದ್ದು" ಎಂದು ವಾದಿಸಿದ್ದಾನೆ. ಅಷ್ಟೇ ಅಲ್ಲದೆ "ಸಾಧ್ವಿ ಪ್ರಗ್ಯಾ ಈಗ ಹೀರೋ ಆಗಿದ್ದಾಳೆ" ಎಂದು ಹೇಳಿದ್ದಾನೆ. ಈ ತರುಣ್ ವಿಜಯ್‌ನನ್ನು ಯಾರಾದರೂ ಪ್ರಶ್ನಿಸಬೇಕಿದೆ: "ನೀನೇ ಹೇಳಿರುವಂತೆ ಹಿಂದೂಗಳ ಅನುವಂಶದಲ್ಲಿ ಮತ್ತು ರಕ್ತವರ್ಗದಲ್ಲಿ ಭಯೋತ್ಪಾದನೆ ಇಲ್ಲ ಎಂಬುದು ನಿಜವಾದರೆ, ಭಯೋತ್ಪಾದನೆ ಆರೋಪ ಹೊತ್ತಿರುವ ಪ್ರಗ್ಯಾ ಹಿಂದೂ ಅಲ್ಲ ಎಂದಾಯಿತಲ್ಲವೇ?"

ಈತನಂತೆ ಇನ್ನೊಬ್ಬ ಹಿಂದೂತ್ವವಾದಿ ನಾನಾ ವಾಡೇಕರ್ ಎಂಬಾತ, ಈಗ ಭಾರತ ಸೇನೆಗೆ ಕಳಂಕದಂತಾಗಿರುವ ಲೆಫ್ಟಿನೆಂಟ್ ಕರ್ನಲ್ ಪುರೋಹಿತನನ್ನು ಕ್ರಾಂತಿಕಾರಿ ಮಂಗಲ್ ಪಾಂಡೆಗೆ ಹೋಲಿಸಿದ್ದಾನಲ್ಲದೆ, "ಪ್ರಗ್ಯಾ ಮತ್ತು ಪುರೋಹಿತ್ ಬಾಂಬ್ ಸ್ಫೋಟದಲ್ಲಿ ಭಾಗವಹಿಸಿದ್ದು ನಿಜವಾದರೆ ಅವರ ಬಗ್ಗೆ ನಾವು ಹೆಮ್ಮೆಪಡುತ್ತೇವೆ" ಎಂದಿದ್ದಾನೆ. ಅಮಾಯಕರನ್ನು ಕೊಲ್ಲುವುದು ಅದು ಹೇಗೆ ಹೆಮ್ಮೆಯ ವಿಷಯವಾಗುತ್ತದೆ? ಆದರೆ ತರುಣ್ ವಿಜಯ್ ಮತ್ತು ವಾಡೇಕರ್ ತರಹದವರು ಭೈರಪ್ಪ ಮತ್ತು ಚಿಮೂನ ಸಂತತಿಯವರೇ ಆಗಿರುವುದರಿಂದ ಇವೆಲ್ಲ ಅವರಿಗೆ ಅರ್ಥವಾಗುವುದಿಲ್ಲ ಬಿಡಿ.


ತಮ್ಮ ದ್ವಿರಾಷ್ಟ್ರ ಸಿದ್ಧಾಂತದಿಂದಾಗಿ ಈ ದೇಶದ ವಿಭಜನೆಗೆ ಕಾರಣವಾದ ಹಿಂದೂತ್ವವಾದಿಗಳು ಸದಾ ಎರಡು ರೀತಿಯ ಕಾನೂನುಗಳಿರಬೇಕೆಂದು ಬಯಸುತ್ತಾರೆ. ಹಿಂದಿನ ಕಾಲದಲ್ಲಿ ಮನುಶಾಸ್ತ್ರದಡಿ ಬ್ರಾಹ್ಮಣಶಾಹಿಗಳಿಗೊಂದು ಕಾನೂನು, ಶೂದ್ರ ದಲಿತರಿಗೆ ಮತ್ತೊಂದು ಕಾನೂನು ರೂಪಿಸಿಕೊಂಡಿದ್ದ ಜನ ಇವರು. ಈಗಲೂ ತಮಗೊಂದು ರೀತಿಯ ಕಾನೂನು, ಈ ದೇಶದ ಅಲ್ಪಸಂಖ್ಯಾತರಿಗೆ ಇನ್ನೊಂದು ರೀತಿಯ ಕಾನೂನು ಇರಬೇಕೆಂದೇ ಇವರು ಬಯಸುತ್ತಾರೆ.

ಅಷ್ಟೇ ಅಲ್ಲದೆ, ಹಿಂದೂತ್ವವಾದಿಗಳ ಪ್ರತಿ ತಂತ್ರವೂ 'ನಂಬಿಕೆ' ಎಂಬ ಅಸ್ಪಷ್ಟತೆಯನ್ನೇ ಆಧರಿಸಿರುತ್ತದೆ. ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಇದ್ದ ಜಾಗವೇ ರಾಮನ ಜನ್ಮಸ್ಥಾನ ಎಂದು ಹೇಳುವುದಕ್ಕೆ ಪುರಾವೆ ಏನು ಎಂದು ಕೇಳಿದರೆ "ನಂಬಿಕೆ" ಅನ್ನುತ್ತಾರೆ. ಭಾರತ ಮತ್ತು ಲಂಕೆ ನಡುವೆ ಪ್ರಾಕೃತಿಕವಾಗಿ ಸೃಷ್ಟಿಯಾಗಿರುವ ಭೂಪ್ರದೇಶವನ್ನು ಅದು ಹೇಗೆ ರಾಮನ ಮಂಗಗಳು ನಿರ್ಮಿಸಿದ ಸೇತುವೆ ಎನ್ನುತ್ತೀರಿ ಎಂದು ಕೇಳಿದರೆ ಮತ್ತದೇ "ನಂಬಿಕೆ" ಅನ್ನುತ್ತಾರೆ. ಈಗ ಪ್ರಗ್ಯಾ ಭಯೋತ್ಪಾದಕಿ ಅಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಅಂದರೆ "ನಂಬಿಕೆ" ಎನ್ನುತ್ತಾರೆ. ಮಾತ್ರವಲ್ಲ ಇವರ ಈ ಆಧಾರರಹಿತ "ನಂಬಿಕೆ"ಗಳು ಯಾವುದೇ ಕಾನೂನು ಕಟ್ಟಳೆಗಳಿಗೆ ಒಳಪಡುವುದಿಲ್ಲ ಎನ್ನುತ್ತಾರೆ.


ಹಿಂದೂತ್ವವಾದಿಗಳ ಈ ಟೊಳ್ಳುತನವನ್ನು ವಿಮಲ್ ಗುಪ್ತ ಎಂಬ ಲೇಖಕರು ಹೇಗೆ ವಿವರಿಸಿದ್ದಾರೆಂಬುದನ್ನು ಹೇಳಿ ಇದನ್ನು ಮುಗಿಸುತ್ತೇನೆ. ಗುಪ್ತಾ ಹೇಳುತ್ತಾರೆ: "ಸಂಘ ಪರಿವಾರದಲ್ಲಿ ತಮ್ಮ ಹಿಂದೂತ್ವ ಸಿದ್ಧಾಂತಕ್ಕೆ ಅಮಾಯಕರನ್ನು ಕೊಲ್ಲಲು ಸಿದ್ಧರಿರುವ ಜನ ಇದ್ದಾರೆಯೇ ಹೊರತು ತಮ್ಮ ಸಿದ್ಧಾಂತಕ್ಕಾಗಿ ತಮ್ಮ ಪ್ರಾಣವನ್ನೇ ಬಲಿಕೊಡಲು ಸಿದ್ಧ ಇರುವವರಿಲ್ಲ... ಕೇಸರಿ ಬಣ್ಣದೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವ ಸಂಘ ಪರಿವಾರದಲ್ಲಿ ಸಾವಿರಾರು ಸ್ವಾಮಿಗಳಿದ್ದಾರೆ. ಅವರಲ್ಲಿ ಧಾರ್ಮಿಕ ಭಾವೋದ್ವೇಕತೆಯೇ ಹೆಚ್ಚು. ಅವರ ಧಾರ್ಮಿಕ ಶ್ರದ್ಧೆ ಮಾತ್ರ ಶೂನ್ಯ." ■

ಸಂಘ ಪರಿವಾರ ಯಾಕೆ ತನಗೊಂದು ನ್ಯಾಯ, ಇತರರಿಗೊಂದು ನ್ಯಾಯ ಎಂದು ವಾದಿಸುತ್ತದೆ?


ಬೆಂಗಳೂರಿನ ಡಾ. ಹನೀಫ್‌ರನ್ನು ಸುಳ್ಳು ಆರೋಪಗಳ ಮೇಲೆ ಆಸ್ಟ್ರೇಲಿಯಾದ ಪೊಲೀಸರು ಬಂಧಿಸಿದಾಗ ಹನೀಫರ ಪತ್ನಿ ಮತ್ತು ತಾಯಿ ಕಣ್ಣೀರಿಟ್ಟಿದ್ದನ್ನು ನೋಡಿ ತನಗೆ ನಿದ್ದೆ ಬರಲಿಲ್ಲ ಎಂದು ಪ್ರಧಾನಿ ಮನಮೋಹನ್ ಸಿಂಗ್ ಹೇಳಿದ್ದರು. ಆ ವಾಕ್ಯವನ್ನು ಚೆಡ್ಡಿಗಳು ಹಲವಾರು ಬಾರಿ ಅಣಕ ಮಾಡಿದ್ದಾರೆ. ಯಾವ ಪರಿ ಎಂದರೆ ಜೈಪುರದಲ್ಲಿ ಸರಣಿ ಬಾಂಬ್‌ಗಳು ಸ್ಫೋಟಗೊಂಡಾಗ "ಈಗ ನಿಮಗೆ ನೆಮ್ಮದಿಯ ನಿದ್ದೆ ಬರುತ್ತಿದೆಯೇ?" ಎಂದು ಹಂಗಿಸಿದ್ದರು. ವಿಪರ್ಯಾಸವಾಗಿ, ಆ ಬಾಂಬ್ ಸ್ಫೋಟಗಳ 'ಮಾಸ್ಟರ್ ಮೈಂಡ್' ಎಂದು ಬಂಧಿಸಲಾಗಿದ್ದ ಹತ್ತಾರು ಮುಸಲ್ಮಾನ ಯುವಕರ ವಿರುದ್ಧ ಯಾವ ಮಾಹಿತಿಯೂ ಇಲ್ಲ ಎಂದು ರಾಜಸ್ಥಾನದ ಮುಖ್ಯಮಂತ್ರಿ ವಸುಂಧರ ರಾಜೆ ಅವರ ಬಜೆಪಿ ಸರ್ಕಾರವೇ ಬಿಡುಗಡೆಗೊಳಿಸಿದೆ. ಮಾತ್ರವಲ್ಲ, ಆ ಸ್ಫೋಟಗಳ ಹಿಂದೆ ಸಂಘ ಪರಿವಾರದ ಹಿಂದೂತ್ವವಾದಿ ಭಯೋತ್ಪಾದಕರ ಕೈವಾಡವಿತ್ತು ಎಂದು ಈಗ ಶಂಕಿಸಲಾಗುತ್ತಿದೆ. ಇದನ್ನು



ಭಯೋತ್ಪಾದನೆಯನ್ನು ವಿರೋಧಿಸುತ್ತಿರುವ ಹಿಂದೂತ್ವವಾದಿಗಳು



ಭಯೋತ್ಪಾದನೆಯ ಅರೋಪ ಹೊತ್ತಿರುವ ಪ್ರಗ್ಯಾ ಪರ ಹಿಂದೂತ್ವವಾದಿಗಳ ಸಹಿ ಸಂಗ್ರಹಣೆ



ಗೆಳೆಯ ಮನುಗೆ ಕಂಬನಿಯ ನಮನ

ಮನೋಹರನ ಸಾವಿನಲ್ಲಿ ಮಾನವೀಯ ಹೃದಯವುಳ್ಳ ಯುವ ಹೋರಾಟಗಾರನೊಬ್ಬನನ್ನು ಕರ್ನಾಟಕ ಕಳೆದುಕೊಂಡಿದೆ. ಶೋಷಣೆ-ದಮನಗಳ ಬುನಾದಿಯ ಮೇಲೆ ನಿಂತಿರುವ ಈ ಕ್ರೂರ ಸಮಾಜವನ್ನು ಕಿತ್ತು ಹಾಕಿ ಅದರ ಜಾಗದಲ್ಲಿ ಸಮಾನತೆ, ಮಾನವಪ್ರೇಮಗಳ ಆಧಾರದಲ್ಲಿ ಹೊಸ ಸಮಾಜವೊಂದನ್ನು ಕಟ್ಟಬೇಕೆಂದು ಆತ ಕನಸು ಕಂಡಿದ್ದ. ಅದಕ್ಕಾಗಿ ತನಗೆ ಸೂಕ್ತವೆನಿಸಿದ ಸಿದ್ಧಾಂತವನ್ನು ಆಯ್ಕೆ ಮಾಡಿಕೊಂಡು ಬದ್ಧತೆಯಿಂದ ಕೆಲಸ ಮಾಡಿದ. ಅಂತಿಮವಾಗಿ ಅದೇ ಆಶಯಕ್ಕಾಗಿ ಹೋರಾಡುತ್ತಲೇ ಪೊಲೀಸರ ಗುಂಡಿಗೆ ಬಲಿಯಾದ. ಕುಡಿಯಲು ನೀರನ್ನೂ ಕೊಡುವುದಕ್ಕೆ ಹಿಂದುಮುಂದು ನೋಡುವ ಈ ಅಮಾನವೀಯ ವ್ಯವಸ್ಥೆಯಲ್ಲಿ ಒಬ್ಬ ತನ್ನ ಪ್ರಾಣವನ್ನೇ ಕೊಡುವುದು ಸುಲಭವಲ್ಲ. ಈ ದುರ್ಗಮ ದಾರಿಯಲ್ಲಿ ನಡೆದರೆ ಇಂದಲ್ಲ ನಾಳೆ ತನಗೆ ಸಾವು ಕಟ್ಟಿಟ್ಟ ಬುತ್ತಿ ಎಂಬುದು ಗೊತ್ತಿದ್ದೂ ಗೊತ್ತಿದ್ದೂ ಅದೇ ದಾರಿಯಲ್ಲಿ ನಡೆಯುವುದಕ್ಕೆ ಧೈರ್ಯ ಬೇಕು.

ನನಗೆ ಮನು (ಮನೋಹರ) ಪರಿಚಯವಾದದ್ದು 1995ರಲ್ಲಿ. ನಾನು ಪಿಯುಸಿ ವಿದ್ಯಾಭ್ಯಾಸಕ್ಕೆಂದು ಶಿವಮೊಗ್ಗಕ್ಕೆ ಬಂದಾಗ. ಆತನೂ ನನ್ನಂತೆ ತನ್ನ ಹುಟ್ಟೂರು ಸೊರಬದಿಂದ ಅಲ್ಲಿಗೆ ಬಂದಿದ್ದ. ನಾನು ಡಿವಿಎಸ್ ಪದವಿಪೂರ್ವ (ಸ್ವತಂತ್ರ) ಕಾಲೇಜಿನಲ್ಲಿ ಓದುತ್ತಿದ್ದರೆ, ಆತ ಡಿವಿಎಸ್ ಸೀನಿಯರ್ ಕಾಲೇಜಿನಲ್ಲಿ ಸೈನ್ಸ್ ವಿಭಾಗದಲ್ಲಿ ಪ್ರವೇಶ ಪಡೆದಿದ್ದ. ಕಾಲೇಜುಗಳು ಬೇರೆಬೇರೆಯಾಗಿದ್ದರೂ ನಾವಿಬ್ಬರೂ ಇರುತ್ತಿದ್ದುದು ಬಿ.ಸಿ.ಎಂ. ಸರ್ಕಾರಿ ಹಾಸ್ಟೆಲ್‌ನಲ್ಲಿ. ಭಾರತದ ಟಿಪಿಕಲ್ ಕುಗ್ರಾಮದಿಂದ ಬಂದಿದ್ದ ನನಗೆ, ಸೊರಬದಂತಹ ತಾಲ್ಲೂಕು ಪ್ರದೇಶದಿಂದ ಬಂದಿದ್ದ ಮನುಗೆ ಭವ್ಯ ಭಾರತದ ಅಸಲಿ ಚಿತ್ರಣ ಸಿಕ್ಕಿದ್ದು ಆ ದಿನಗಳಲ್ಲಿಯೇ. ಮನೆಯಲ್ಲಿ ಸಾಪೇಕ್ಷವಾಗಿ ಉತ್ತಮ ಊಟ ಉಂಡಿದ್ದ ನಮ್ಮನ್ನು ಆ ಸರ್ಕಾರಿ ಹಾಸ್ಟೆಲ್ ಬಡಕಲು ದೇಹಿಗಳನ್ನಾಗಿಸಿಬಿಟ್ಟಿತು. ಅಲ್ಲಿ ನಮಗೆ ಕೊಡುತ್ತಿದ್ದ ಊಟವನ್ನು ಅರ್ಧಂಭರ್ಧ ತಿಂದು ನಾಯಿಗೆ ಹಾಕಿದರೆ ಅದು ಮೂಸೂ ನೋಡುತ್ತಿರಲಿಲ್ಲ. ಅದೆಷ್ಟೋ ಬಾರಿ ಹಾಸ್ಟೆಲ್ ವಾರ್ಡನ್‌ಗೆ ಮನವಿ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಆಗ ಅನಿವಾರ್ಯವಾಗಿ ನಾವು ಹೋರಾಟದ ದಾರಿಯನ್ನು ಹಿಡಿಯಬೇಕಾಯಿತು.

ನಮ್ಮ ಅನ್ನಕ್ಕಾಗಿನ ಹೋರಾಟ ಅಸಂಘಟಿತವಾಗಿ ನಡೆಯುತ್ತಿದ್ದಾಗಲೇ ನಮಗೆ ಪ್ರಗತಿಪರ ವಿದ್ಯಾರ್ಥಿ ಕೇಂದ್ರ (ಪಿವಿಕೆ) ಎಂಬ ವಿದ್ಯಾರ್ಥಿ ಸಂಘಟನೆಯ ಪರಿಚಯವಾದದ್ದು. ಅದು ನಮ್ಮ ಹೋರಾಟಕ್ಕೊಂದು ಹೊಸ ತಿರುವನ್ನು, ನಮ್ಮ ಬದುಕಿಗೊಂದು ಹೊಸ ಅರ್ಥವನ್ನು ಕೊಟ್ಟಿತು. ಮನುನನ್ನೂ ಒಳಗೊಂಡಂತೆ ಬದಲಾವಣೆಗಾಗಿ ತುಡಿಯುತ್ತಿದ್ದ ಅನೇಕ ವಿದ್ಯಾರ್ಥಿಗಳೆಲ್ಲರೂ ಈ ಸಂಘಟನೆಯಡಿಯಲ್ಲಿ ಒಗ್ಗಟ್ಟಾದೆವು. ಹಾಸ್ಟೆಲ್ ವಾರ್ಡನ್ ವಿರುದ್ಧ ದೊಡ್ಡ ಮಟ್ಟದ ಹೋರಾಟವನ್ನು ನಡೆಸಿ ನಮಗೆ ನ್ಯಾಯಯುತವಾಗಿ ದೊರೆಯಬೇಕಿದ್ದ ಸೌಲಭ್ಯಗಳನ್ನು ಪಡೆದುಕೊಂಡೆವು.

ಆದರೆ ಇದರಿಂದ ನಮ್ಮ ಹೊಟ್ಟೆಯ ಮೇಲೆ ಹೊಡೆದು ಕೊಬ್ಬಿದ್ದ ವಾರ್ಡನ್‌ನ ಕಳ್ಳ ಆದಾಯವನ್ನು ತಪ್ಪಿಸಿಬಿಟ್ಟಿತು. ಅದಕ್ಕೇ ಆತ ಹಾಸ್ಟೆಲ್‌ನಲ್ಲಿಯ ಕೆಲವು ಪುಂಡ ವಿದ್ಯಾರ್ಥಿಗಳಿಗೆ ದುಡ್ಡು ಕೊಟ್ಟು; ನಮ್ಮ ಮೇಲೆ ದಾಳಿ ಮಾಡುವಂತೆ ಪ್ರೇರೇಪಿಸಿದ. ನಾವೂ ಸುಮ್ಮನಿರಲಿಲ್ಲ, ಇದು ಅತಿರೇಕಕ್ಕೆ ಹೋಗಿ ಆತ ಛೂ ಬಿಟ್ಟಿದ್ದ ಗೂಂಡಾ ವಿದ್ಯಾರ್ಥಿಯೊಬ್ಬನನ್ನು ಹಾಸ್ಟೆಲ್ ಆವರಣದಲ್ಲಿಯೇ ಬಡಿದು ಹಾಕಿದೆವು. ನ್ಯಾಯಕ್ಕಾಗಿನ ನಮ್ಮ ಹೋರಾಟದಲ್ಲಿ ಅದು ಅನಿವಾರ್ಯವಾಗಿತ್ತು,

ಪಿವಿಕೆ ಸಂಘಟನೆಯೊಂದಿಗಿನ ಒಡನಾಟವು ನಮಗೆ ದೇಶದ ಅಸಲಿ ಚಿತ್ರಣವನ್ನು ತೆರೆದಿಟ್ಟಿತು. ಸಮಸ್ಯೆ ಕೇವಲ ನಮ್ಮ ಹಾಸ್ಟೆಲ್ಲಿನಲ್ಲಿ ಮಾತ್ರವಲ್ಲ, ದೇಶದ ಮೂಲೆಮೂಲೆಯಲ್ಲಿ ಹಾಸುಹೊಕ್ಕಾಗಿದೆ ಎಂಬುದು ಅರ್ಥವಾಯಿತು. ಶೋಷಣೆ-ದಮನಗಳ ಬುನಾದಿಯ ಮೇಲೆಯೇ ನಿರ್ಮಿತವಾಗಿರುವ ಈ ಕ್ರೂರ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸಾಮಾಜಿಕ ಕ್ರಾಂತಿಯೊಂದರ ಮೂಲಕವೇ ಬದಲಾಯಿಸಲು ಸಾಧ್ಯ ಎಂದು ನಮಗನ್ನಿಸಲಾರಂಭಿಸಿತು. ಆಗ ರಶಿಯಾ ಕ್ರಾಂತಿ, ಚೀನಾ ಕ್ರಾಂತಿ, ಕ್ಯೂಬಾ ಕ್ರಾಂತಿ ಮುಂತಾದ ಸಾಮಾಜಿಕ ಕ್ರಾಂತಿಗಳ ಬಗ್ಗೆ ತಿಳಿದುಕೊಳ್ಳಲಾರಂಭಿಸಿದೆವು; ಭಗತ್‌ಸಿಂಗ್, ಕಾರ್ಲ್‌ಮಾರ್ಕ್ಸ್, ಫ್ರೆಡರಿಕ್ ಏಂಗಲ್ಸ್, ಲೆನಿನ್, ಸ್ಟಾಲಿನ್, ಮಾವೋ ತ್ಸೆ ತುಂಗ್, ಚೆಗುವಾರ ಮುಂತಾದ ಕ್ರಾಂತಿಕಾರಿಗಳ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಿದೆವು. ಇದೆಲ್ಲದರ ಪರಿಣಾಮವಾಗಿ ಸಮಾಜವನ್ನು ನೋಡುವ ನಮ್ಮ ದೃಷ್ಟಿಕೋನ ಮತ್ತಷ್ಟು ಸೂಕ್ಷ್ಮವಾಯಿತು.

1999-98ರ ಅವಧಿಯಲ್ಲಿ ಕಾಲೇಜಿಗೆ ಬೇಸಿಗೆಯ ರಜಾ ಘೋಷಣೆಯಾದಾಗ ವಿದ್ಯಾರ್ಥಿಗಳೆಲ್ಲರೂ ರಜಾ ದಿನಗಳನ್ನು ಕಳೆಯುವುದಕ್ಕೆ ಅವರವರ ಮನೆಗಳಿಗೆ ಹೋದರೆ ಮನು ಮತ್ತು ಇತರೆ ವಿದ್ಯಾರ್ಥಿಗಳು ಕುವೆಂಪು ವಿಶ್ವವಿದ್ಯಾಲಯದ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋದರು. ಜನರ ಕಷ್ಟ ಸುಖಗಳನ್ನು ಅರ್ಥಮಾಡಿಕೊಳ್ಳುವುದು, ಶೋಷಣೆಯ ವಿರುದ್ಧ ಹೋರಾಟಕ್ಕೆ ಅವರನ್ನು ಸಿದ್ಧಗೊಳಿಸುವುದು ಮತ್ತು ಭಾರತದ ಹಳ್ಳಿಗಾಡಿನ ಜೀವನ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು ಅವರ ಉದ್ದೇಶವಾಗಿತ್ತು. ಹಳ್ಳಿಗಳ ದಲಿತರ, ಕೂಲಿಕಾರ್ಮಿಕರ ಮನೆ ಮನೆಗಳಿಗೆ ಹೋಗಿ ಅವರ ಕಷ್ಟಸುಖಗಳನ್ನು ಅರಿತರು, ಅವರು ಕೊಟ್ಟ ಊಟವನ್ನೇ ಉಂಡು, ಅವರ ಗುಡಿಸಲುಗಳಲ್ಲಿಯೇ ಉಳಿಯುತ್ತಿದ್ದರು. ಈ ಎಲ್ಲಾ ಚಟುವಟಿಕೆಗಳಲ್ಲಿ ಮನು ಬಹಳ ಕ್ರಿಯಾಶೀಲವಾಗಿದ್ದ. ಸಮಾಜಕ್ಕಾಗಿ ಕೊನೆಯುಸಿರಿರುವತನಕ ದುಡಿಯಬೇಕೆಂಬ ಹಂಬಲ ಅವನಲ್ಲಿ ಗಟ್ಟಿಗೊಳ್ಳುತ್ತಿತ್ತು.

ಆನಂತರದಲ್ಲಿ ಮನು ದಣಿವರಿಯದಂತೆ ಕೆಲಸ ಮಾಡಿದ. ಶಿವಮೊಗ್ಗದ ಕಾಲೇಜುಗಳಲ್ಲಿ, ಹಾಸ್ಟೆಲ್‌ಗಳಲ್ಲಿ, ಕೊಳಚೆ ಪ್ರದೇಶದಲ್ಲಿ ಹಗಲು-ರಾತ್ರಿಯೆನ್ನದೇ ಸುತ್ತಾಡಿ ವಿದ್ಯಾರ್ಥಿಗಳನ್ನು, ಪೌರಕಾರ್ಮಿಕರನ್ನು ಸಂಘಟಿಸಿದ. ಈ ಹೋರಾಟಗಳ ಪ್ರಕ್ರಿಯೆಯಲ್ಲಿಯೇ ಒಬ್ಬ ಅತ್ಯುತ್ತಮ ನಾಯಕನಾಗಿ ಹೊರಹೊಮ್ಮಿದ.

ಮನು ಅತ್ಯಂತ ಶಿಸ್ತಿನ ವಿದ್ಯಾರ್ಥಿಯಾಗಿದ್ದ. ನಾವು ಈ ಸಮಾಜವನ್ನು ಬದಲಿಸಬೇಕೆಂದರೆ ಕೇವಲ ಓದಿನ ಜ್ಞಾನವಿದ್ದರೆ ಮಾತ್ರ ಸಾಲದು, ದೈಹಿಕವಾಗಿಯೂ ಆರೋಗ್ಯವಾಗಿರಬೇಕೆಂದು ವಾದಿಸುತ್ತಾ ದಿನಾಲು ಬೆಳಗ್ಗೆ ಐದು ಗಂಟೆಗೆ ಎದ್ದು ಎರಡು ತಾಸು ವ್ಯಾಯಾಮ ಮಾಡುತ್ತಿದ್ದ. ಒಂದಿಷ್ಟು ಸೋಮಾರಿಗಳಾಗಿದ್ದ ನನ್ನಂಥವರನ್ನು ಕೊರೆಯುವ ಚಳಿಯಲ್ಲೂ ಎಬ್ಬಿಸಿ ತೊಂದರೆ ಕೊಡುತ್ತಿದ್ದ! ಓದಿನಲ್ಲೂ ಬಹಳ ಮುಂದಿದ್ದ. ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿಯೇ ಓದಿ ಪಿಯುಸಿಯಲ್ಲಿ ಸೈನ್ಸ್ ಸೇರುವ ಮೂಲಕ ಇಂಗ್ಲಿಷ್ ಮಾಧ್ಯಮದಲ್ಲಿ ಅಧ್ಯಯನ ಮಾಡುತ್ತಿದ್ದ ಗ್ರಾಮೀಣ ಭಾಗದಿಂದ ಬಂದ ಅದೆಷ್ಟೋ ವಿದ್ಯಾರ್ಥಿಗಳು ಮನುನಲ್ಲಿಗೆ ಬಂದು ಪಾಠ ಹೇಳಿಸಿಕೊಳ್ಳುತ್ತಿದ್ದರು. ಅದಕ್ಕಾಗಿ ಆತ ಹೋರಾಟದ ಬಿಡುವಿರದ ವೇಳಾಪಟ್ಟಿಯಲ್ಲೂ ಬಿಡುವು ಮಾಡಿಕೊಳ್ಳುತ್ತಿದ್ದ.

1992. ರ ಸುಮಾರಿಗೆ ಅಶೋಕ್ ಖೇಣಿಯಂಥ ಭೂಗಳ್ಳ ಬೆಂಗಳೂರು-ಮೈಸೂರು ನಡುವೆ ಹೈಟೆಕ್ ಹೆದ್ದಾರಿ ಮತ್ತು ಟೌನ್‌ಶಿಪ್‌ಗಳನ್ನು ನಿರ್ಮಿಸುತ್ತೇನೆಂದು ಬಿಎಂಐಸಿ ಯೋಜನೆಯನ್ನು ಮುಂದಿಟ್ಟಾಗ ಸರ್ಕಾರ ಅದಕ್ಕೆ ಅನುಮತಿ ಕೊಟ್ಟಿತು. ಯೋಜನೆಯನ್ನು ವಿವರವಾಗಿ ಅಧ್ಯಯನ ಮಾಡಿದ ಕರ್ನಾಟಕ ವಿಮೋಚನಾ ರಂಗಕ್ಕೆ (ಕೆವಿಆರ್) ಅದೊಂದು ಪಕ್ಕಾ ರಿಯಲ್ ಎಸ್ಟೇಟ್ ದಂಧೆಯೆಂಬುದು ಮನವರಿಕೆಯಾಯಿತು. ಸುಮಾರು ಇಪ್ಪತ್ತೊಂದು ಸಾವಿರ ಎಕರೆಯಷ್ಟು ಫಲವತ್ತಾದ ಕೃಷಿ ಭೂಮಿಯನ್ನು ರೈತರಿಂದ ಕಿತ್ತುಕೊಳ್ಳಲು ಖೇಣಿ ಹವಣಿಸಿದ್ದ. ಕೂಡಲೇ ಕೆವಿಆರ್ ಬಿಎಂಐಸಿ ವಿರೋಧಿ ಹೋರಾಟಕ್ಕೆ ಧುಮುಕಿತು. ವಿದ್ಯಾರ್ಥಿ-ಯುವಕರನ್ನೊಳಗೊಂಡ ಹಲವಾರು ತಂಡಗಳನ್ನು ರಚಿಸಿಕೊಂಡು ಯೋಜನೆಯಿಂದ ಬೀದಿಗೆ ಬೀಳುವ ರೈತಕುಟುಂಬಗಳನ್ನು ಸಂಘಟಿಸಿ ಯೋಜನೆ ಜಾರಿಯಾಗದಂತೆ ತಡೆಯುವುದಕ್ಕೆ ಮುಂದಾಯಿತು. ರಾಮನಗರ ಪ್ರದೇಶದಲ್ಲಿ ಯೋಜನೆಯಿಂದ ಬೀದಿಗೆ ಬೀಳುವ ಪ್ರತೀ ಕೃಷಿ ಕುಟುಂಬಗಳ ಮನೆಗೂ ಹೋದ ಮನು ರೈತರಿಗೆ ಯೋಜನೆಯ ಅಪಾಯಗಳ ಬಗ್ಗೆ ವಿವರಿಸಿ ಅವರನ್ನು ಸಂಘಟಿಸಲು ಪ್ರಯತ್ನಿಸಿದ. ಕೆವಿಆರ್‌ನ ಈ ಹೋರಾಟಕ್ಕೆ ಇನ್ನಿತರ ಸಂಘಸಂಸ್ಥೆಗಳೂ ಸೇರಿಕೊಂಡು ಅದೊಂದು ಬೃಹತ್ ಪ್ರತಿಭಟನೆಯಾಗಿ ಹೊರಹೊಮ್ಮಿತು. ಈ ಜನಪ್ರತಿರೋಧವೇ ಆ ಯೋಜನೆ ಜಾರಿಯಾಗದಂತೆ ಮಾಡಿತು.

ಇನ್ನೊಂದೆಡೆ ಕುದುರೆಮುಖ ಗಣಿಗಾರಿಕೆ ವಿಸ್ತರಿಸಲು ಸರ್ಕಾರ ಹವಣಿಸುತ್ತಿದ್ದಾಗ ಅದರ ವಿರುದ್ಧವೂ ದೊಡ್ಡ ಮಟ್ಟದ ಹೋರಾಟ ಭುಗಿಲೆದ್ದಿತು. ಏಕೆಂದರೆ, ಗಣಿಗಾರಿಕೆ ವಿಸ್ತರಿಸಿದರೆ ತುಂಗಾ ಮತ್ತು ಭದ್ರಾ ನದಿಗಳ ಮೂಲಸ್ಥಾನವಾದ ಗಂಗಡಿಕಲ್ಲು ಗುಡ್ಡವೇ ಕಣ್ಮರೆಯಾಗಿ ಎರಡೂ ನದಿಗಳು ಬತ್ತಿ ಈ ನದಿಗಳನ್ನೇ ನೆಚ್ಚಿಕೊಂಡಿರುವ ಕೋಟ್ಯಾಂತರ ಜನರ ಬದುಕು ಛಿದ್ರವಾಗುವ ಅಪಾಯವಿತ್ತು. ಆಗಲೂ ಕೆವಿಆರ್ ನದೀ ತೀರದ ಹಳ್ಳಿಗಳಿಗೆ ಹೋಗಿ ಜನರನ್ನು ಸಂಘಟಿಸಿತು. ಮನು ಕೂಡ ಈ ಹೋರಾಟದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದ. ಅನಂತಮೂರ್ತಿಯಂಥ ಹಿರಿಯ ಸಾಹಿತಿಗಳೂ ಇದರಲ್ಲಿ ಭಾಗವಹಿಸುವುದರೊಂದಿಗೆ ಹೋರಾಟವು ಹೊಸ ರೂಪ ಪಡೆದು ಅನಿವಾರ್ಯವಾಗಿ ಸರ್ಕಾರ ಮಣಿಯಲೇಬೇಕಾಯಿತು.



ಮೂಡಿಗೆರೆಯ ಕಾರ್ಯಕ್ರಮವೊಂದರಲ್ಲಿ ಮನೋಹರ್

ಮನುವಿನಲ್ಲಿ ಅನೇಕ ಉತ್ತಮ ಪ್ರತಿಭೆಗಳಿದ್ದವ
ದಮನಿತರ ನೋವುಗಳನ್ನು ಧ್ವನಿಸುವ, ಹೋರಾಟ
ಅವರಿಗೆ ಸ್ಫೂರ್ತಿ ನೀಡುವ ಅನೇಕ ಹಾಡುಗಳನ್ನು ಅವ
ಸೃಜನಶೀಲವಾಗಿ ಬರೆದು, ಹಾಡುತ್ತಿದ್ದ. ಬಸ್‌ಸ್ಟ್ಯಾಂಡ್
ಸಿಟಿಯ ಸರ್ಕಲ್, ಕೊಳಚೆ ಪ್ರದೇಶ, ಹಳ್ಳಿಗಳ ಜನನಿಬ
ಪ್ರದೇಶ - ಹೀಗೆ ಯಾವುದೇ ಜಾಗವಿರಲಿ. ಆತ ಹಾ
ಜನರಿಗೆ ಸ್ಫೂರ್ತಿ ತುಂಬಲು ಪ್ರಯತ್ನಿಸುತ್ತಿದ್ದ. ಕರಪತ್ರಗಳನ
ಲೇಖನಗಳನ್ನು ಬರೆದು ಪ್ರಿಂಟ್ ಮಾಡಿಸಿ ಹಂಚುತ್ತಿದ

ಮನು ಒಬ್ಬ ಉತ್ತಮ ಚೆಸ್ ಆಟಗಾರ ಕೂಡ. ತ
ಬಿಡುವಿರದ ಚಟುವಟಿಕೆಗಳ ನಡುವೆಯೂ ಒಂದಿಷ
ಬಿಡುವು ಮಾಡಿಕೊಂಡು ನನ್ನೊಂದಿಗೆ ಚೆಸ್ ಆಡುತ್ತಿದ
ಮನುನಲ್ಲಿ ಅನೇಕ ನಾಯಕತ್ವದ ಗುಣಗಳಿದ್ದವು. ಕೆಲವೊಮ್ಮೆ
ನಿರೀಕ್ಷಿತ ಫಲಿತಾಂಶಗಳು ದೊರೆಯದಿದ್ದಾಗ 'ಇದೆಲ
ಆಗೋ ಕೆಲಸವಾ?' ಅಂತ ಹಲವರು ಹತಾಶರಾಗಿದ್
ಉಂಟು. ಆದರೆ, ಮನುನಲ್ಲಿ ಈ ಹತಾಶೆ, ನಿರಾಶೆಯನ
ನಾನು ನೋಡಲೇ ಇಲ್ಲ. ಯಾವಾಗಲೂ ಸ್ಫೂರ್ತಿಯ
ಚಿಲುಮೆಯಂತಿದ್ದ ಆತ ಇತರರನ್ನು ಹುರಿದುಂಬಿಸುತ್ತಿದ
ಆತನ ಇನ್ನೊಂದು ವಿಶೇಷತೆಯೆಂದರೆ ಅವನಲ್ಲಿ ಮ
ಮಾಡಿದ್ದ ಎದೆಗಾರಿಕೆ. ಹಾಸ್ಟೆಲ್‌ನಲ್ಲಿರಲಿ ಅಥ
ಕಾಲೇಜಿನಲ್ಲಿರಲಿ ಗೂಂಡಾಗಳು ನಮ್ಮ ಮೇಲೆ ದಾ
ಮಾಡುತ್ತಾರೆಂದು ಆಗಾಗ ನಮಗೆ ಒಂದಿಷ್ಟು ಅಂಜಿ
ಯಾಗಿದ್ದೂ ಉಂಟು. ಆದರೆ ಆ ಅಂಜಿಕೆಯನ್ನು ನಾನ
ಅವನಲ್ಲಿ ಎಂದೂ ಕಾಣಲಿಲ್ಲ.

ಮನುವಿನ ಚಟುವಟಿಕೆಗಳು ಹೆಚ್ಚಾದಂತೆ ಪೊಲೀಸ
ಕೆಂಗಣ್ಣು ಸಹಜವಾಗಿ ಆತನ ಮೇಲೆ ಬಿತ್ತು. ಶಿವಮೊಗ್ಗ
ಕೋಟೆ ಪೊಲೀಸರು ಮನುವನ್ನು ಅರೆಸ್ಟ್ ಮಾ
ದರೋಡೆಕೋರರಿಗೆ ಮಾಡುವಂತೆ ಕೈಯಲ್ಲಿ ಸ್ಲೇಟ್ ಹಿಡಿ
ಫೋಟೋ ತೆಗೆದರು. ಮನು ಮನೆಗೂ ಹೋ
ಪೊಲೀಸರು ಮನೆಯವರಿಗೂ ತೊಂದ
ಕೊಡಲಾರಂಭಿಸಿದರು. ಪೊಲೀಸರು ಸೊರಬದಲ್ಲಿ ಮನ
ಬಗ್ಗೆ ತೀರಾ ಕೆಟ್ಟದಾಗಿ ಪ್ರಚಾರ ಮಾಡಿ Characte
Assassination ಮಾಡುವು ದಕ್ಕೆ ಶತಾಯಗತಾಯ
ಪ್ರಯತ್ನಿಸಿದರು.

ನಂತರ ಮನು ತನ್ನ ಚಟುವಟಿಕೆಗಳನ್ನು ಸ್ಥಳಾಂತರಿಸಿದ
ರಾಯಚೂರಿನಂಥ ದಟ್ಟ ದರಿದ್ರ ನಾಡಿಗೆ. ಅಲ್ಲಿ
ಅನುಭವ ಮನುನನ್ನು ಸಂಪೂರ್ಣವಾಗಿ ಬದಲಿಸಿಬಿಟ್ಟಿತ
ಹೈದ್ರಾಬಾದ್ ಕರ್ನಾಟಕದ ಹಳ್ಳಿಗಳಲ್ಲಿದ್ದ ಕಿತ್ತು ತಿನ್ನು
ಬಡತನ, ಕ್ರೂರ ಭೂಮಾಲಿಕರ ಮಧ್ಯಯುಗೀ
ದಬ್ಬಾಳಿಕೆಗಳು ಆತನ ಮನಸ್ಸನ್ನು ಅತೀವವಾಗಿ ಕಲಕಿದವ
ಆ ಭಾಗದಲ್ಲಿ ಆಗ ಕೆಲ ನಕ್ಸಲೀಯ ಸಶಸ್ತ್ರ ದಳಗಳ
ಸಾವಿರಾರು ಎಕರೆ ಭೂ ಒಡೆಯರಾಗಿದ್ದ ಭೂಮಾಲಿಕ
ವಿರುದ್ಧ ಜನರನ್ನು ಸಂಘಟಿಸಿ ಅವರ ಭೂಮಿಯನ
ದಲಿತರ, ಭೂರಹಿತ ಕಾರ್ಮಿಕರ ನಡುವೆ ಹಂಚು
ಹೋರಾಟವನ್ನು ನಡೆಸುತ್ತಿದ್ದವು. ಪ್ರಾಯಶಃ ಎಲ್ಲೊ
ಒಮ್ಮೆ ಮನುನನ್ನು ನಕ್ಸಲೀಯ ದಳಗಳು ಭೇಟಿಯಾಗಿ
ಬೇಕು. ಏಕೆಂದರೆ ಕೆಲವು ತಿಂಗಳ ನಂತರ ದಿಢೀರ
ಎಂದು ಆತ ಕಾಣೆಯಾದ. ಮನು ಎಲ್ಲಿಗೆ ಹೋ
ಎಂಬುದು ಯಾರಿಗೂ ಗೊತ್ತಿರಲಿಲ್ಲ. ಕೆಲವು ತಿಂಗಳುಗ
ನಂತರ ಆತನನ್ನು ರಮೇಶ್ ಮತ್ತು ಗೋಪಾಲ್ ಎಂ
ನಕ್ಸಲೀಯ ನಾಯಕರೊಂದಿಗೆ ಆಂಧ್ರಪ್ರದೇಶ ಪೊಲೀಸ
ಬಂಧಿಸಿದ ಮೇಲೆಯೇ ಆತ ಎಲ್ಲಿದ್ದ ಎಂಬುದು ಗೊತ್ತಾಗಿದ

ಆಂಧ್ರ ಪ್ರದೇಶ ಪೊಲೀಸರು ಅವರನ್ನೆಲ್ಲಾ ಹೈದರ
ಬಾದಿನ ಹೈಟೆಕ್ ಚರ್ಲಪಲ್ಲಿ ಜೈಲಿನಲ್ಲಿಟ್ಟಿದ್ದರು. ಇ
ಸೊರಬದಲ್ಲಿ ಮನು ಅಪ್ಪ ಅಮ
ಅಜ್ಜ, ಅಜ್ಜಿ ಅವನನ್ನು ಭೇ
ಯಾಗುವುದಕ್ಕೆ ಹಾತೊರೆಯ
ತ್ತಿದ್ದರು. ಆದರೆ, ಕನ್ನಡ ಬಿಟ
ಬೇರೆ ಭಾಷೆ ಬಾರದ ಅವರೆಲ
ಹೈದರಾಬಾದಿಗೆ ಹೋಗುವ
ದಾದರೂ ಹೇಗೆ? ಸಹಜವಾ
ಈ ಹೊಣೆಗಾರಿಕೆ ನನ್ನ ಮೇ
ಬಿತ್ತು. ಸಮಾನ ಮನ
ವಿದ್ಯಾರ್ಥಿಗಳಿಂದಲೇ ಐನೂರ
ರೂಪಾಯಿ ಹೊಂದಿಸಿಕೊಂಡ
ಮನು ತಂದೆ ಬಸವರಾಜಗೌ
ಅವರನ್ನು ಕರೆದುಕೊಂಡು ಹೈದರಾಬಾದಿಗೆ ಹೋದ
ಜೇಬಿನಲ್ಲಿದ್ದ ದುಡ್ಡು ಖಾಲಿಯಾದರೇನು ಮಾಡುವುದ
ಎಂಬ ಚಿಂತೆ ಸದಾ ನನ್ನನ್ನು ಕಾಡುತ್ತಿತ್ತು. ಅದನ್ನು ಮನ
ತಂದೆಗೆ ಹೇಳಿದೆ ಕೂಡ. ಅದಕ್ಕವರು "ಚಿಂತೆ ಮಾಡಬೇ
ಕುಮಾರ್. ನಾನು ಮೋಟಾರ್ ರೀವೈಂಡಿಂಗ್‌ನಲ್ಲಿ ಎಕ
ಪರ್ಟ್. ದುಡ್ಡು ಖಾಲಿಯಾದರೆ ಎಲ್ಲಾದರೂ ಮೋಟಾರ
ರಿವೈಂಡ್ ಮಾಡಿ ಖರ್ಚಿಗೆ ದುಡ್ಡು ಹೊಂದಿಸಿಕೊಂಡ
ವಾಪಸ್ಸು ಹೋಗೋಣ" ಎಂದು ಧೈರ್ಯ ತುಂಬಿದ್ದರ

> ರಾಜಕೀಯ, ಸೈದ್ಧಾಂತಿಕ ನಿಲುವುಗಳಲ್ಲಿ ನನಗೂ ಅವನಿಗೂ ಎಷ್ಟೇ ಭಿನ್ನಾಭಿಪ್ರಾಯಗಳಿದ್ದಿರಬಹುದು. ಆದರೆ, ಆತನ commitment ಮಾತ್ರ ಪ್ರಶ್ನಾತೀತವಾದದ್ದು. ಕುಡಿಯುವ ನೀರನ್ನೂ ಕೊಡದ ಈ ಕ್ರೂರ ವ್ಯವಸ್ಥೆಯಲ್ಲಿ ತನ್ನ ಜೀವವನ್ನೇ ಕೊಡುವುದು ಮನುನಂಥವರಿಗೆ ಮಾತ್ರ ಸಾಧ್ಯ. ತಾನು ತುಳಿಯುತ್ತಿರುವ ದುರ್ಗಮ ದಾರಿ ಯಾವ ಕ್ಷಣದಲ್ಲಿ ಬೇಕಾದರೂ ಮೃತ್ಯುಕೂಪವಾಗಬಹುದೆಂದು ಗೊತ್ತಿದ್ದೂ ಗೊತ್ತಿದ್ದೂ ಅದೇ ದಾರಿಯಲ್ಲಿ ನಡೆಯುವ ಎದೆಗಾರಿಕೆ ಮನುನಂಥವರಿಗೆ ಮಾತ್ರ ಸಾಧ್ಯ. ಮನುಗೆ ನನ್ನ ಕಂಬನಿಯ ನಮನ!
>
> ■ ಕುಮಾರ್ ಬುರಡಿಕಟ್ಟಿ

ಮನುಗೆ ಜಾಮೀನು ಕೊಡಿಸುವುದಕ್ಕಾಗಿ ಅವರ ಅಪ್ಪನನ್ನು ಕರೆದುಕೊಂಡು ದಾಖಲೆಗಾಗಿ ಗ್ರಾಮಲೆಕ್ಕಾಧಿಕಾರಿ, ತಹಸೀಲ್ದಾರ್ ಕಚೇರಿ ಅಲೆಯುವುದೇ ಕುಟುಂಬದವರ ಕೆಲಸವಾಗಿಬಿಟ್ಟಿತು. ಮನು ಮೇಲೆ ಇಲ್ಲ ಸಲ್ಲದ ಸುಳ್ಳು ಕೇಸುಗಳನ್ನು ಹಾಕಲಾಗಿತ್ತು, ಅವನ ಜಾಮೀನಿಗಾಗಿ ಅವರು ಅದೆಷ್ಟು ಬಾರಿ ಮನವಿ ಮಾಡಿಕೊಂಡರೂ ಕೋರ್ಟು ಜಾಮೀನು ನೀಡಲೇ ಇಲ್ಲ. ಕೊನೆಗೆ ಆತನ ಮೇಲಿದ್ದ ಎಲ್ಲಾ ಕೇಸುಗಳೂ, ಆರೋಪಗಳೂ ಸುಳ್ಳೆಂದು ನ್ಯಾಯಾಲಯದಲ್ಲಿ ಸಾಬೀತಾಯಿತು. ಆದರೆ, ಅಷ್ಟು ಹೊತ್ತಿಗಾಗಲೇ ಮನು ನಾಲ್ಕು ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದ! ಇದು ಭಾರತದ ನಿಷ್ಪಕ್ಷಪಾತಿ ನ್ಯಾಯಾಂಗ ವ್ಯವಸ್ಥೆ! "ನೂರು ಅಪರಾಧಿಗಳು ಬೇಕಾದರೂ ಕಾನೂನಿನ ಕಣ್ಣಿನಿಂದ ತಪ್ಪಿಸಿಕೊಳ್ಳಲಿ, ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು" ಎಂಬುದು ನಮ್ಮ ನ್ಯಾಯಾಂಗ ವ್ಯವಸ್ಥೆಯ ಧ್ಯೇಯ. ಆದರೆ, ಮನು ವಿಚಾರದಲ್ಲಿ ಅದು ತಲೆಕೆಳಗಾಗಿತ್ತು, ಮನು ಯಾವುದೇ ತಪ್ಪು ಮಾಡದಿದ್ದರೂ ನಾಲ್ಕು ವರ್ಷಗಳ ಕಾಲ ಜೈಲು ಶಿಕ್ಷೆಯನ್ನು ಅನುಭವಿಸಿದ.

ಅಲ್ಲಿಯೂ ಅನ್ನಕ್ಕಾಗಿ ಮನುನ ಹೋರಾಟ ಮುಂದುವರೆದಿತ್ತು. ಆತನೂ ನಿಧಾನವಾಗಿ ತೆಲುಗು ಕಲಿತುಕೊಂಡು ಜೈಲಿನ ಕೈದಿಗಳನ್ನು ಸಂಘಟಿಸಿ ಒಳ್ಳೆಯ ಊಟಕ್ಕಾಗಿ, ದಿನಪತ್ರಿಕೆಗಳಿಗಾಗಿ, ಪುಸ್ತಕಗಳಿಗಾಗಿ, ತಮ್ಮನ್ನು ರಾಜಕೀಯ ಕೈದಿಯೆಂದು ಪರಿಗಣಿಸಬೇಕೆಂಬ ಒತ್ತಾಯಿಸಿ ಆತ ಹೋರಾಟ ನಡೆಸುತ್ತಲೇ ಇದ್ದ, ಆದರಲ್ಲಿ ತಕ್ಕಮಟ್ಟಿಗೆ



ಪತ್ರಕರ್ತನಾಗಿ ಮನೋಹರ್

ಯಶಸ್ವಿಯೂ ಆಗಿದ್ದ. ಎಷ್ಟರಮಟ್ಟಿಗೆ ಎಂದರೆ ಮನುನಂಥವರು ಬೇರೆ ಕೈದಿಗಳನ್ನೂ ಹಾಳು ಮಾಡಿಬಿಡುತ್ತಾರೆಂಬ ನೆಪವೊಡ್ಡಿ ಪ್ರತ್ಯೇಕ ಬ್ಯಾರಕ್ ತೆರೆದು ಇನ್ನಿತರ ಕೈದಿಗಳೊಂದಿಗೆ ಸಂಪರ್ಕವಿರದಂತೆ ಇವರನ್ನು ಇಡಲಾಯಿತು.

ವಾಸ್ತವದಲ್ಲಿ ಮನುಗೆ ಜಾಮೀನು ನೀಡದಿರುವುದರ ಹಿಂದೆ ಪೊಲೀಸರಿಗೆ ಒಂದು ಸ್ಪಷ್ಟವಾದ ಕಾರಣವಿತ್ತು. ಆತನನ್ನು ಜೈಲಿನಲ್ಲಿ ನಾಲ್ಕೈದು ವರ್ಷ ಕೊಳೆಸಿ ಅವನಲ್ಲಿದ್ದ ಹೋರಾಟದ ಸ್ಫೂರ್ತಿಯನ್ನು ಬತ್ತಿಸುವುದೇ ಅವರ ಉದ್ದೇಶವಾಗಿತ್ತು, ಆದರೆ ಮನು ವಿಚಾರದಲ್ಲಿ ಪೊಲೀಸರ ಈ ತಂತ್ರ ವಿಫಲವಾಗಿತ್ತು. ಜೈಲಿನೊಳಗಿದ್ದೂ ಮನು ಹೋರಾಟ ನಡೆಸುತ್ತಿದ್ದ. ಪ್ರತೀ ದಿನ ವ್ಯಾಯಾಮ ಮಾಡುವುದನ್ನಾಗಲೀ, ಓದುವುದನ್ನಾಗಲೀ ಬಿಟ್ಟಿರಲಿಲ್ಲ. ನಾಲ್ಕು ವರ್ಷಗಳ ಜೈಲು ಜೀವನದ ಕುಲುಮೆಯಲ್ಲಿ ಮನು ಮತ್ತಷ್ಟು ಹದವಾಗಿಬಿಟ್ಟಿದ್ದ; ಆತ ಕೇಸುಗಳಿಗಾಗಿ ಶಿವಮೊಗ್ಗ ಕೋರ್ಟಿಗೆ ಬಂದಾಗಲೂ ಬಹಿರಂಗವಾಗಿ ಘೋಷಣೆ ಕೂಗುತ್ತಾ ಬರುತ್ತಿದ್ದ ದೃಶ್ಯವೇ ಅವನಲ್ಲಿನ್ನೂ ಹೋರಾಟದ ಚಿಲುಮೆ ಬತ್ತಿಲ್ಲವೆಂದು ಹೇಳುತ್ತಿತ್ತು. ಕೋರ್ಟಿನಲ್ಲಿ ಅವನು ನಿರಪರಾಧಿಯೆಂದು ಸಾಬೀತಾಗಿ ಜೈಲಿನಿಂದ ಹೊರಬಂದ ಮೇಲೂ ಆತನಲ್ಲಿ ಹೋರಾಟದ ಸ್ಫೂರ್ತಿ ಕುಂದಿರಲಿಲ್ಲ. ಶಿವಮೊಗ್ಗಕ್ಕೆ ಬಂದ ಮೇಲೆ 'ಎಚ್ಚರಿಕೆ' ಎಂಬ ಸಂಜೆ ದಿನಪತ್ರಿಕೆಯಲ್ಲಿ ಪತ್ರಕರ್ತನಾಗಿದ್ದುಕೊಂಡೇ ಆತ ಜನಪರ ಚಳವಳಿಗಳಲ್ಲಿ ಭಾಗವಹಿಸುವುದನ್ನು ಮುಂದುವರೆಸಿದ್ದ. ಜೈಲಿನಲ್ಲಿನ ತನ್ನ ಅನುಭವಗಳ ಬಗ್ಗೆ ಆ ಪತ್ರಿಕೆಯಲ್ಲಿ ಸರಣಿ ಲೇಖನಗಳನ್ನು ಬರೆದ.

ಶಿವಮೊಗ್ಗದಲ್ಲಿ ಪತ್ರಕರ್ತನಾಗಿದ್ದುಕೊಂಡೇ ಪ್ರಗತಿಪರ ಚಟುವಟಿಕೆಗಳಲ್ಲಿ ತೊಡಗಿದ್ದ ಮನುಗೆ ತೀವ್ರ ಕಿರುಕುಳ ಕೊಟ್ಟ ಅಧಿಕಾರಿ ಎಂದರೆ ಆಗ ಶಿವಮೊಗ್ಗದಲ್ಲಿ ಎಸ್ಪಿಯಾಗಿದ್ದ ಅರುಣ್ ಚಕ್ರವರ್ತಿ. ತನ್ನ ಆಫೀಸಿಗೆ ಮನುನನ್ನು ಕರೆಸಿಕೊಂಡು "ನಿನ್ನ ಚಟುವಟಿಕೆ ಮುಂದುವರೆಸಿದರೆ ನಿನ್ನನ್ನು ಎನ್‌ಕೌಂಟರ್ ಮಾಡಿ ಸಾಯಿಸುತ್ತೇನೆ" ಎಂದು ಚಕ್ರವರ್ತಿ ಸೂಚ್ಯವಾಗಿ ಎಚ್ಚರಿಸಿದ್ದ. ನನ್ನ ಹತ್ತಿರ ಈ ವಿಚಾರವನ್ನು ಹೇಳಿದ ಮನು "ಅವರು ಮಾಡುತ್ತಿರುವುದೇ ಈ ಕೆಲಸ, ಅವರ ಗೊಡ್ಡು ಬೆದರಿಕೆಗೆ ನಾನು ಹೆದರುವುದಿಲ್ಲ" ಎಂದಿದ್ದ. ಮನು ತನ್ನ ಜನಪರ ಚಟುವಟಿಕೆಗಳನ್ನು ನಿಲ್ಲಿಸಲಿಲ್ಲ,

ಸಮಯ ಸಿಕ್ಕಾಗಲೆಲ್ಲಾ ಹೋರಾಟದ ಭವಿಷ್ಯದ ಬಗ್ಗೆ, ಹೋರಾಟ ರೂಪಗಳ ಬಗ್ಗೆ ಅನೇಕರೊಂದಿಗೆ ವಿವರವಾಗಿ ಚರ್ಚಿಸುತ್ತಿದ್ದ. ಅಷ್ಟು ಹೊತ್ತಿಗಾಗಲೇ ನನ್ನ ಮತ್ತು ಅವನ ವಿಚಾರಧಾರೆಯಲ್ಲಿ ಒಂದಷ್ಟು ಭಿನ್ನಾಭಿಪ್ರಾಯಗಳು ಬೆಳೆದಿದ್ದವು. ಕಾಡಿಗೆ ಹೋಗಿ ಬಂದೂಕು ಹಿಡಿದುಕೊಂಡು ಆದಿವಾಸಿ, ರೈತಕೂಲಿಗಳನ್ನು ಅವರ ನ್ಯಾಯಯುತವಾದ ಬೇಡಿಕೆಗಳಿಗಾಗಿ ಸಂಘಟಿಸಬೇಕೆಂದು; ಕೇವಲ ಶ್ರೀಮಂತರ, ಭೂಮಾಲಿಕರ, ಬಂಡವಾಳಿಗರ ಹಿತಕಾಯುವುದಕ್ಕಾಗಿಯೇ ಇರುವ ಈ ಪೊಲೀಸು-ಮಿಲಿಟರಿಗಳನ್ನು ಸೋಲಿಸಬೇಕೆಂದರೆ ಜನರದ್ದೇ ಆದ ಪ್ರಜಾಸೈನ್ಯವನ್ನು ಸ್ಥಾಪಿಸಬೇಕೆಂದು; ಸಶಸ್ತ್ರ ಕ್ರಾಂತಿಯ ಮೂಲಕವೇ ಈ ಪ್ರಭುತ್ವವನ್ನು ಮೂಲೋತ್ಪಾಟನೆ ಮಾಡಿ ಅದರ ಜಾಗದಲ್ಲಿ ಹೊಸ ಸಮಾಜವನ್ನು ಕಟ್ಟಬೇಕೆಂದು; ಇದು ಕೆಲವು ವರ್ಷಗಳಲ್ಲಿ ನಡೆಯುವ ಕೆಲಸ ಅಲ್ಲ, ಅದಕ್ಕಾಗಿ ಸುದೀರ್ಘ ವರ್ಷಗಳನ್ನು ಸವೆಸಬೇಕೆಂದು ಮನು ವಾದ ಮಾಡುತ್ತಿದ್ದ. ಸಮಗ್ರ ತಲಸ್ಪರ್ಶಿ ಬದಲಾವಣೆ, ಕ್ರಾಂತಿ ಸಹಜವಾಗಿ ತ್ಯಾಗಬಲಿದಾನಗಳನ್ನು ಬೇಡುತ್ತದೆ, ಪ್ರಪಂಚದ ಯಾವ ಕ್ರಾಂತಿಯೂ, ಯಾವ ಮಹತ್ತರ ಬದಲಾವಣೆಯೂ ತ್ಯಾಗಬಲಿದಾನಗಳಿಲ್ಲದೇ ಸಂಭವಿಸಿಲ್ಲವೆಂದು ದೃಢವಾಗಿ ನಂಬಿದ್ದ.

ಆದರೆ ನಾನು ಸಶಸ್ತ್ರ ಕ್ರಾಂತಿಗೆ ಇದು ಸಮಯವಲ್ಲವೆಂದು; ಭಾರತ ಟರ್ಕಿ, ಫಿಲಿಪೈನ್ಸ್, ಪೆರು, ಶ್ರೀಲಂಕಾಗಳನ್ನೂ ಒಳಗೊಂಡಂತೆ ಇಡೀ ಪ್ರಪಂಚದಾದ್ಯಂತ ಎಲ್ಲಾ ಸಶಸ್ತ್ರ ಹೋರಾಟಗಳು ಹಿನ್ನಡೆ ಅನುಭವಿಸಿರುವುದು ಇದರ ಸೂಚನೆಯೆಂದೂ; ಸಶಸ್ತ್ರ ಹೋರಾಟಕ್ಕೆ ಬದಲಿಯಾಗಿ ಕಾನೂನುಬದ್ಧವಾಗಿಯೇ ಪ್ರಜಾತಾಂತ್ರಿಕ ಹೋರಾಟಗಳನ್ನು ಕಟ್ಟಬೇಕೆಂದು ವಾದಿಸುತ್ತಿದ್ದೆ. ಕ್ರಾಂತಿ ತ್ಯಾಗಬಲಿದಾನಗಳನ್ನು ಬೇಡುತ್ತದೆ ಎಂಬುದು ನಿಜವಾದರೂ ವ್ಯರ್ಥ ಬಲಿದಾನಗಳಿಗೇನು ಅರ್ಥ ಎಂದು, ಗುರಿ ಎಷ್ಟು ಮುಖ್ಯವೋ ತುಳಿಯುವ ಹಾದಿ ಕೂಡ ಅಷ್ಟೇ ಪ್ರಮುಖವಾಗುತ್ತದೆಂದು ನಾನು ಮನುಗೆ ಭಾಷಣ ಬಿಗಿಯುತ್ತಿದ್ದೆ.

ಮನು **convince** ಆಗಲಿಲ್ಲ, ಪತ್ರಕರ್ತನಾಗಿ ಕೆಲಸ ಮಾಡುತ್ತಾ ಪ್ರಗತಿಪರ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಆತ ಇದ್ದಕ್ಕಿದ್ದಂತೆ ಕಣ್ಮರೆಯಾದಾಗ ಅವನು ಎಲ್ಲಿರಬಹುದೆಂಬುದರ ಬಗ್ಗೆ ನನಗೆ ಯಾವ ಅನುಮಾನವೂ ಉಳಿದಿರಲಿಲ್ಲ. ಈಗ ನಮ್ಮೆಲ್ಲರಿಗೂ ಅಲ್ವಿದಾ ಹೇಳಿ ಶಾಶ್ವತವಾಗಿ ಹೊರಟು ಹೋಗಿದ್ದಾನೆ.

ರಾಜಕೀಯ, ಸೈದ್ಧಾಂತಿಕ ನಿಲುವುಗಳಲ್ಲಿ ನನಗೂ ಅವನಿಗೂ ಎಷ್ಟೇ ಭಿನ್ನಾಭಿಪ್ರಾಯಗಳಿದ್ದಿರಬಹುದು. ಆದರೆ, ಆತನ **commitment** ಮಾತ್ರ ಪ್ರಶ್ನಾತೀತವಾದದ್ದು. ಕುಡಿಯುವ ನೀರನ್ನೂ ಕೊಡದ ಈ ಕ್ರೂರ ವ್ಯವಸ್ಥೆಯಲ್ಲಿ ತನ್ನ ಜೀವವನ್ನೇ ಕೊಡುವುದು ಮನುನಂಥವರಿಗೆ ಮಾತ್ರ ಸಾಧ್ಯ. ತಾನು ತುಳಿಯುತ್ತಿರುವ ದುರ್ಗಮ ದಾರಿ ಯಾವ ಕ್ಷಣದಲ್ಲಿ ಬೇಕಾದರೂ ಮೃತ್ಯುಕೂಪವಾಗಬಹುದೆಂದು ಗೊತ್ತಿದ್ದೂ ಗೊತ್ತಿದ್ದೂ ಅದೇ ದಾರಿಯಲ್ಲಿ ನಡೆಯುವ ಎದೆಗಾರಿಕೆ ಮನುನಂಥವರಿಗೆ ಮಾತ್ರ ಸಾಧ್ಯ.

ಮನುಗೆ ನನ್ನ ಕಂಬನಿಯ ನಮನ!



■

ಬಚ್ಚೇಗೌಡರ ಬನಿಯನ್, ಚೆಡ್ಡಿ ಕಳುವಾಗಿದೆಯಂತಲ್ಲಾ!

ನಮ್ಮ ಬೆಂದಕಾಳೂರಿನ ನಿರ್ಮಾತೃ ಕೆಂಪೇಗೌಡರ ವಂಶಸ್ಥರಾದ ಬಚ್ಚೇಗೌಡರು, ದೇವೇಗೌಡರ ಮಕ್ಕಳ ವಿಷಯದಲ್ಲಿ ತೀರಾ ಲುಚ್ಚಾ ಮಾತುಗಳನ್ನಾಡುತ್ತಿರುವಾಗ ಸಹಜವಾಗಿಯೇ ಎಲ್ಲರೂ ಆತಂಕಗೊಂಡಿದ್ದರಂತಲ್ಲಾ. ಏಕೆಂದರೆ, ತಮ್ಮನ್ನು ಕೆಣಕಿದವರ ವಿಷಯದಲ್ಲಿ ಪ್ರತಿಧ್ವನಿಯಂತಿರುವ ಗೌಡರ ಮಕ್ಕಳು ಬಚ್ಚೇಗೌಡರಿಗೆ ಏನಾದರೂ ಮಾಡಿಸುತ್ತಾರೆ ಎಂಬ ಆತಂಕದಲ್ಲಿರುವಾಗಲೇ, ಬಚ್ಚೇಗೌಡರ ಮನೆಯಲ್ಲಿ ಕಳ್ಳತನವಾಗಿದೆಯಂತಲ್ಲಾ. ಕಾಂಗ್ರೆ ಒಲವಿನ ಪಿ.ಸಿ. "ಬಚ್ಚೇಗೌಡರ ಮನೆಗೆ ನುಗ್ಗಿದವನು ಜೆಡಿಎಸ್ ಕಾರ್ಯಕರ್ತ. ಅವನು ಬಚ್ಚೇಗೌಡರ ಮೇಲೆ ಹಲ್ಲೆ ಮಾಡಿ ಇನ್ನು ಮುಂದೆ ದೇವೇಗೌಡರು ಮತ್ತವರ ಮಕ್ಕಳ ಬಗ್ಗೆ ಬಾಯಿಬಿಡಕೂಡದು ಎಂದು ಎಚ್ಚರಿಸಲು ಬಂದಿದ್ದ. ಗೌಡರು ಸಿಕ್ಕದ ಕಾರಣ ಡಿ.ವಿ.ಡಿ. ಮತ್ತು ಟೇಪ್ ರಿಕಾರ್ಡರ್ ತೆಗೆದುಕೊಂಡು ಮಾಟಮಂತ್ರಕ್ಕೆ ಬೇಕಾಗುವ ಸಾಮಗ್ರಿಗಳಾದ ಗೌಡರ ಚೆಡ್ಡಿ, ಖಾಚಾ, ಬನಿಯನ್ ತೆಗೆದುಕೊಂಡು ಹೋದ" ಎಂದರಂತಲ್ಲಾ ಥೂತ್ತೇರಿ!

****

ಸದರಿ ಕಳ್ಳತನದ ಸುದ್ದಿ ಕೇಳಿದ ಜೆಡಿಎಸ್‌ನವರು "ಇದಂತೂ ಶುದ್ಧ ಸುಳ್ಳು. ನಮ್ಮ ಎಲ್ಲಾ ಕಾರ್ಯಕರ್ತರ ಮನೆಯಲ್ಲೂ ಟಿವಿ, ಟೇಪ್‌ರಿಕಾರ್ಡರ್ ಮತ್ತು ಡಿವಿಡಿಗಳಿವೆ. ಕಳೆದ ಚುನಾವಣೆ ಸಮಯದಲ್ಲೇ ನಾವು ಇಂತಹ ಸಾಮಗ್ರಿಗಳನ್ನು ಖರೀದಿಸಿದ್ದೇವೆ! ಆದ್ದರಿಂದ ಬಚ್ಚೇಗೌಡನ ಮನೆಯ ಲಡಾಸು ಸಾಮಗ್ರಿಯನ್ನು ನಮ್ಮವರು ತಿರುಗಿಯೂ ನೋಡಲ್ಲ. ಇನ್ನು ಬಚ್ಚನ ಗಬ್ಬು ಖಾಚಾ, ಚೆಡ್ಡಿ, ಬನಿಯನ್ ನಮ್ಮ ಯಾವ ಕಾರ್ಯಕರ್ತರಿಗೂ ಆಗಲ್ಲ. ಬೆಂಗಳೂರು ಫುಟ್‌ಪಾತ್‌ಗಳಲ್ಲೇ ಹತ್ತು ರೂಗೆ ಖಾಚಾ, ಚೆಡ್ಡಿಗಳು ಸಿಗುವಾಗ ಅವನ ಬಟ್ಟೆ ನಮಗೇಕೆ?" ಎಂದರಂತಲ್ಲಾ. ಇದಕ್ಕೆ ತೀಕ್ಷ್ಣವಾಗಿ ಉತ್ತರಿಸಿರುವ ಚೆಡ್ಡಿಗಳು "ದೇವೇಗೌಡರ ಕಡೆಯವರು ಚೆಡ್ಡಿ ಕದಿಯುವುದರಲ್ಲಿ ನಿಪುಣರು. ಕಳೆದ ಚುನಾವಣೆಯ ವೇಳೆ ನಮ್ಮ ಎಡೂರಪ್ಪನ ಹಳೆಯ ಖಾಕಿ ಚೆಡ್ಡಿ ಕಳುವಾಗಿತ್ತು, ಎಷ್ಟು ಹುಡುಕಿದರೂ ಸಿಕ್ಕದ ಆ ಚೆಡ್ಡಿ ಕಡೆಗೆ ಸಿಕ್ಕಿದ್ದು ಶಿಕಾರಿಪುರದ ಹೊರವಲಯದಲ್ಲಿ, ಅದೂ ಮಾಟ ಮಾಡಿದ್ದ ಸ್ಥಳದಲ್ಲಿ" ಎಂಬ ಗುರುತರ ಸಾಕ್ಷಿ ಒದಗಿಸುತ್ತಿದ್ದಾರಲ್ಲಾ, ಥೂತ್ತೇರಿ!!

****


ಬಚ್ಚೇಗೌಡರ ಮನೆಯಿಂದ ಕಚ್ಚಾ ಸಾಮಗ್ರಿ ಕಳುವಾಗಿರುವಾಗಲೇ ನಮ್ಮ ಮಾಜಿ ಪ್ರಧಾನಿಗಳು "ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಬುದ್ಧಿವಾದವನ್ನು ಕೇಳದೆ ಕೆಟ್ಟೆ" ಎಂದು ಅಳುತ್ತ ಕುಳಿತಿದ್ದಾರಂತಲ್ಲಾ. "ಹೆಗಡೆ ಬದುಕಿರುವವರೆಗೂ ಅವರೊಡನೆ ಕಾದಾಡಿದ ತಮಗೆ ಅವರು ಬುದ್ಧಿವಾದ ಹೇಳಿದ್ದು ಯಾವಾಗ ಸಾರ್?" ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಗೌಡರು "ನಾವು ಜಗಳವಾಡುತ್ತಲೇ ಬುದ್ಧಿವಾದವನ್ನು ಹೇಳಿಕೊಳ್ಳುತ್ತಿದ್ದೆವು. ಅವರು ನೀನು ಆ ಸಿದ್ದರಾಮಯ್ಯನನ್ನ ಬೆಳೆಸಬೇಡ ಎಂದಾಗ, ನಾನು ಆಳ್ವನನ್ನು ಬೆಳೆಸಬೇಡಿ ಎನ್ನುತ್ತಿದ್ದೆ. ಅವರು ಇಬ್ರಾಹಿಂನನ್ನ ಮನೆ ಹತ್ತಿರ ಸೇರಿಸಬೇಡಿ ಎಂದಾಗ ನಾನು ಆ ನಜೀರ್ ಸಾಬರ ಬೋರ್‌ವೆಲ್ ಜಾಸ್ತಿಯಾದೊ. ಹೀಗೇ ಆದರೆ ಸಾಬಿ ಜನಪ್ರಿಯವಾಗಿ ನಾವೇ ನಗಣ್ಯರಾಗುತ್ತೇವೆ ಎಂದೂ ಎಚ್ಚರಿಸಿದ್ದೆ. ಆದರೆ ಈಗ ನೋಡಿ, ಹೆಗಡೆ ತೀರಿಕೊಂಡರು, ಅವರ ಜೊತೆ ಆಳ್ವ, ನಜೀರ್ ಕೂಡ ಕಾಲವಾದರು. ಈ ಇಬ್ರಾಹಿಂ, ಸಿದ್ದರಾಮಯ್ಯ ಇನ್ನೂ ಬದುಕಿ ನನ್ನ ಮಕ್ಕಳ ಭವಿಷ್ಯಕ್ಕೆ ಅಡ್ಡಗಾಲಾಕಿದ್ದಾರೆ" ಎಂದು ಅತ್ತರಂತಲ್ಲಾ, ಥೂತ್ತೇರಿ!

ಥೂತ್ತೇರಿ

ಯಾಹೂ

****

ಇದ್ದಕ್ಕಿದ್ದಂತೆ ಸತ್ತವರ ಬಗ್ಗೆ ಪ್ರೀತಿಯುಕ್ಕಿಸತೊಡಗಿರುವ ದೇವೇಗೌಡರು "ಪಾಪ, ರಾಮಕೃಷ್ಣ ಹೆಗಡೆಯವರಂತಹ ಧೀಮಂತ ನಾಯಕನನ್ನು ಶರಣ ಬೊಮ್ಮಾಯಿ ಹವಾಲ ಹಗರಣ ಜ್ಞಾಪಿಸಿ ಪಾರ್ಟಿಯಿಂದ ಅಮಾನತ್ತು ಮಾಡಿಸಿದರು; ನಾನೆಷ್ಟೇ ಬೇಡವೆಂದರೂ ತಡೆಯಲಾಗಲಿಲ್ಲ" ಎಂದಿದ್ದರಲ್ಲಾ, ಇದು ಅದು ಹೇಗೋ ಯಾದವ ಕುಲತಿಲಕ ಲಲ್ಲೂ ಪ್ರಸಾದನಿಗೂ ಗೊತ್ತಾಗಿ "ಆ ದೆವ್ವೇಗೌಡ ಪ್ರಧಾನಿಯಾದ ಐದು ನಿಮಿಷಕ್ಕೆ ನನ್ನ ಮುಂದೊಂದು ಪತ್ರ ಹಿಡಿದ. ಇದೇನಿದು ಎಂದು ಕೇಳಲಾಗಿ ಹೆಗಡೆಯನ್ನು ಅಮಾನತ್ತುಗೊಳಿಸಿದ್ದೇನೆ, ಸಹಿ ಮಾಡಿ ಎಂದಾಗ, ಅರೆ ಜನತಾ ಪಾರ್ಟಿಗೆ ಹೆಸರಿಟ್ಟವನೇ ಹೆಗಡೆ. ಅಂತವನನ್ನೆ ಪಾರ್ಟಿಯಿಂದ ಅಮಾನತ್ತು ಮಾಡುವುದೇ? ಎಂದು ಕೇಳಿದರೆ ಪಟ್ಟುಬಿಡದ ಗೌಡ ಸಹಿ ಪಡೆದು ಹೋದವನು, ಈ ಪ್ರಮಾದ ನನ್ನಿಂದಾಗಿದ್ದಲ್ಲ ಎಂದು ಈಗ ಬಾಯಿಬಿಡುತ್ತಿದ್ದಾನೆ" ಎಂದು ಆಡಿಕೊಂಡನಲ್ಲ, ಇದೇನೇ ಆದರೂ, "ಸುಳ್ಳಪ್ಪನ ನಾಲಿಗೆ ಶಾರ್ಪಾಗಿದೆ. ಇನ್ನು ನಾವೂ ಸುಳ್ಳಿಗೆ ಸಿದ್ಧತೆ ಮಾಡಿಕೊಳ್ಳಬೇಕು" ಎಂದು ಇಬ್ರಾಹಿಂ ಹೇಳಿದನಂತಲ್ಲಾ, ಥೂತ್ತೇರಿ!!




ಯಡ್ಡಿ ವಿರುದ್ಧ ಮತ್ತೆ ಶೆಟ್ಟರ್

ಬಿಜೆಪಿಯಲ್ಲಿ ಭಿನ್ನಮತ ಮತ್ತೆ ಭುಗಿಲೆದ್ದಿದೆ. ಯಡ್ಡಿಯ ಲಂಗು-ಲಗಾಮು ಇಲ್ಲದ ಆಡಳಿತದಿಂದ ಬೇಸತ್ತಿರುವ ಸಂಘಪರಿವಾರದ ನಾಯಕರು ಮತ್ತು ಕೆಲ ಬಿಜೆಪಿ ಶಾಸಕರು ಯಡ್ಡಿಯನ್ನು ಬಹಿರಂಗವಾಗಿ ಬೈದಾಡಿಕೊಂಡು ಓಡಾಡುತ್ತಿದ್ದಾರೆ. ಇದರಿಂದ ಬೆಚ್ಚಿಬಿದ್ದಿರುವ ಯಡ್ಡಿ ಬಾಯಿಗೆ ಬಂದಹಾಗೆ ಮಾತನಾಡುತ್ತಾ ಕೇಂದ್ರವನ್ನು ಒಂದಿಷ್ಟು ಬೈಯುತ್ತಾ ಈತ ರಾಜ್ಯದ ಮುಖ್ಯಮಂತ್ರಿಯೋ ಅಥವಾ ವಿರೋಧ ಪಕ್ಷದ ನಾಯಕನೋ ಎಂದು ಜನರೇ ಅನುಮಾನ ಪಡುವಂತೆ ವರ್ತಿಸುತ್ತಿದ್ದಾರೆ.

ಇದೇ ಸಂದರ್ಭದಲ್ಲಿ 'ತನ್ನ ಬೇಳೆ ಬೇಯಿಸಿಕೊಳ್ಳಲು' ಹೊರಟಿರುವ ಅನಂತು, ಕೇಂದ್ರ ನಾಯಕ ಅಡ್ವಾಣಿ ಮತ್ತು ಆರ್‌ಎಸ್‌ಎಸ್ ನಾಯಕರನ್ನು ಯಡ್ಡಿ ವಿರುದ್ಧ ಛೂಬಿಟ್ಟು ಮಜಾ ತೆಗೆದುಕೊಳ್ಳುತ್ತಿದ್ದಾನೆ.

ಶೆಟ್ಟರ್ ಎಂಬ ಅಸ್ತ್ರ



ಇತ್ತ 'ಆಪರೇಷನ್ ಕಮಲ'ಕ್ಕೆ ಚಾಲನೆ ನೀಡಿ ಪಕ್ಷದಲ್ಲಿನ ತನ್ನ ಬೆಂಬಲಿಗರ ಸಂಖ್ಯೆಯನ್ನು ಯಡ್ಡಿ ಹೆಚ್ಚಿಸಿಕೊಳ್ಳುತ್ತಿದ್ದರೆ, ಅತ್ತ 'ಕೆಸರಿನ ಕಮಲ'ಎಂಬ ಮಕ್ಕಳ ಚಿತ್ರದಲ್ಲಿ ಅಭಿನಯಿಸುತ್ತಾ, ಕಮಲ ಕೆಸರೆದ್ದು ಹೋಗಿದೆ ಎಂದು ಗೊಣಗುತ್ತಿರುವ ಜಗದೀಶ್ ಶೆಟ್ಟರ್‌ರನ್ನು ಅನಂತು ಬಣ ಮತ್ತೆ ಯಡ್ಡಿ ವಿರುದ್ಧ ಛೂಬಿಟ್ಟಿದೆ.

ಬಿಜೆಪಿ ಅಧಿಕಾರಕ್ಕೆ ಬಂದಕೂಡಲೆ ಪಕ್ಷದಲ್ಲಿ ಇನ್ನೋರ್ವ ಪ್ರಬಲ ಲಿಂಗಾಯಿತ ಬೆಳೆದರೆ ತನಗೇ ಕಷ್ಟ ಎಂದು ಹೆದರಿದ ಯಡ್ಡಿ ದೊಡ್ಡ ಹೋರಾಟವನ್ನೇ ನಡೆಸಿ ಶೆಟ್ಟರ್‌ಗೆ ಸಚಿವ ಸ್ಥಾನ ನೀಡದೆ, ವಿಧಾನ ಸಭಾಧ್ಯಕ್ಷರನ್ನಾಗಿಸಿದ್ದರು. ಆದರೆ ಮೊನ್ನೆ ರಾಜ್ಯಕ್ಕೆ ಬಂದಿದ್ದ ಅಡ್ವಾಣಿ 'ಶೆಟ್ಟರ್‌ಗೆ ಸಚಿವ ಸ್ಥಾನ ನೀಡಿ' ಎಂದು ಯಡ್ಡಿಗೆ ಸೂಚನೆ ನೀಡಿ ಹೋಗಿದ್ದಾರೆ.


ಅಡ್ವಾಣಿ ಈ ಸೂಚನೆಯನ್ನು ಸುಖಾಸುಮ್ಮನೆ ನೀಡಿಲ್ಲ. ಉತ್ತರ ಕರ್ನಾಟಕ ಸುತ್ತಿಬಂದ ಅವರಿಗೆ, ಯಡ್ಡಿಗೆ ಲಿಂಗಾಯತರು ನೀಡಿರುವ ಬೆಂಬಲ ಕಂಡು, 'ಯಡ್ಡಿ ವಿರುದ್ಧ ನಮ್ಮ ಅನಂತುಗೆ ಏನೂ ಕಿಸಿಯಲಿಕ್ಕಾಗುವುದಿಲ್ಲ' ಎಂಬುದು ಅರ್ಥವಾಗಿದೆ. ಅದಕ್ಕೆ ಬೇಕಾಬಿಟ್ಟಿಯಾಗಿ ಆಡಳಿತ ನಡೆಸುತ್ತಿರುವ ಯಡ್ಡಿಗೆ ಲಗಾಮು ಹಾಕಲು ಶೆಟ್ಟರ್ರೇ ಸೈ ಎನಿಸಿ, ಯಡ್ಡಿಗೆ ಈ ಸೂಚನೆ ನೀಡಿದ್ದಾರೆ.

ಇದು ಗೊತ್ತಾಗುತ್ತಿದ್ದಂತೆ 'ಯಡ್ಡಿಗೆ ಇನ್ನು ರಾಹುಕಾಲ ಶುರುವಾಯಿತು' ಎಂದು ಬಿಜೆಪಿಗರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಮಧ್ಯೆ ಒಮ್ಮೆ ತನಗೆ ದ್ರೋಹ ಬಗೆದು ಯಡ್ಡಿ ಕ್ಯಾಂಪಿಗೆ ಹಾರಿದ್ದ ಶೆಟ್ಟರ್ ಬದಲಿಗೆ ಬೇರೆ ಲಿಂಗಾಯತ ನಾಯಕರನ್ನು ಬಳಸಿಕೊಳ್ಳುವ ಪ್ರಸ್ತಾಪವನ್ನು ಅನಂತು ಅಡ್ವಾಣಿ ಮುಂದಿಟ್ಟಿದ್ದಾರೆ. ಮೊನ್ನಿನ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಮಾಜಿ ಕೇಂದ್ರ ಸಚಿವ ಯತ್ನಾಳ್ ಮತ್ತಿತರರ ಹೆಸರನ್ನೂ ಸೂಚಿಸಿದ್ದಾರೆ. ಆದರೆ ಯಡ್ಡಿಗೆ ಸೆಡ್ಡು ಹೊಡೆಯುವ ಯೋಗ್ಯತೆ ಇವರ್‍ಯಾರಿಗೂ ಇಲ್ಲ ಎಂಬುದನ್ನು ಅರ್ಥಮಾಡಿಕೊಂಡ ಅಡ್ವಾಣಿ ಶೆಟ್ಟರ್‌ರನ್ನು ಅಸ್ತ್ರವಾಗಿ ಬಳಸಿಕೊಳ್ಳಿ ಎಂದು ಹೇಳಿದ್ದಾರಂತೆ. ಶೆಟ್ಟರ್‌ಗೆ ಇನ್ನಷ್ಟು ಶಕ್ತಿ ತುಂಬಬೇಕಾದರೆ, ಅವರಿಗೆ ಅಧಿಕಾರ ನೀಡಬೇಕು. ಅದಕ್ಕೆ ಸಚಿವ ಸ್ಥಾನ ನೀಡಿ ಎಂಬ ಸೂಚನೆ ನೀಡಿ ಹೋಗಿದ್ದಾರೆ.

ಈಗೇನು ಮಾಡಬೇಕೆಂದು ತೋಚದ ಯಡ್ಡಿ 'ಉಪ ಚುನಾವಣೆ ನಂತರ ನೋಡೋಣ. ಈಗಾಗಲೇ ಸಚಿವ ಸಂಪುಟ ಭರ್ತಿಯಾಗಿದೆ. ಯಾರನ್ನು ಕೈಬಿಟ್ಟು ಶೆಟ್ಟರ್‌ಗೆ ಸ್ಥಾನ ನೀಡುವುದು?' ಎಂದೆಲ್ಲ ಪ್ರಶ್ನಿಸಿ ಸದ್ಯಕ್ಕೆ ಬೀಸುವ ದೊಣ್ಣೆಯಿಂದ ಪಾರಾಗಿದ್ದಾರೆ. ಆದರೆ ಶೆಟ್ಟರ್‌ಗೆ ಸಚಿವ ಸ್ಥಾನ ನೀಡಿದರೆ ಮುಂದೆ ಆತ ತನಗೆ ಸವಾಲು ಹಾಕದೇ ಇರುತ್ತಾರೆಯೇ ಎಂಬ ಭಯ ಅವರನ್ನು ಈಗಾಗಲೇ ಆವರಿಸಿದೆ. ಹೀಗಾಗಿ ಎಲ್ಲರ ಮೇಲೂ ವಿನಾಕಾರಣ ರೇಗಾಡುತ್ತಿದ್ದಾರೆ ಎಂದು ಬಿಜೆಪಿ ಮೂಲಗಳು ಹೇಳುತ್ತಿವೆ.

ಎಡಬಿಡಂಗಿಯಾದ ಈಶ್ವರಿ

ಯಡ್ಡಿ ವಿರುದ್ಧ ಬೆನ್ನಹಿಂದೆಯೇ ಕುತಂತ್ರ ನಡೆಸುತ್ತಾ ಬಂದಿರುವ ಈಶ್ವರಪ್ಪನಿಗೆ ಈ ಬೆಳವಣಿಗೆಯಿಂದ ನಿರಾಶೆಯಾಗಿದೆ. ತಾನು ಹಿಂದುಳಿದ ವರ್ಗದ ನಾಯಕನೆಂದು ತನ್ನನ್ನು ಮುಂದಿಟ್ಟುಕೊಂಡು ಯಡ್ಡಿ ವಿರುದ್ಧ ಕತ್ತಿ ಮಸೆಯಲು ಅನಂತು ಬಣ ತನ್ನನ್ನೇ ಬಳಸಿಕೊಳ್ಳಲಿದೆ ಎಂದು ಕಾದು ಕುಳಿತಿದ್ದ ಈಶ್ವರಪ್ಪ ಈಗ ಎಡಬಿಡಂಗಿಯಾಗಿದ್ದಾರೆ. ಅನಂತು ಬಣಕ್ಕೆ ತಾನು ಯಡ್ಡಿ ವಿರೋಧಿ ಎಂದು ತೋರಿಸಿಕೊಳ್ಳಲು ಈಶ್ವರಪ್ಪ ಸಾಕಷ್ಟು ಪ್ರಯತ್ನಿಸಿದ್ದರು. ಯಡ್ಡಿಗೆ ಇದು ಗೊತ್ತಾಗುತ್ತಿದ್ದಂತೆಯೇ ಈಶ್ವರಪ್ಪನಿಗೆ ಸುಧಾರಿಸಲು ಸಾಧ್ಯವಾಗದ ವಿದ್ಯುತ್ ಖಾತೆಯನ್ನು ನೀಡಿ ಮಜಾ ತೆಗೆದುಕೊಳ್ಳುತ್ತಿದ್ದರು. ಈಗ ಈ ಖಾತೆ ಈಶ್ವರಪ್ಪನೊಂದಿಗೆ ತನಗೂ ಮಸಿ ಬಳಿಯುತ್ತಿರುವುದನ್ನು ನೋಡಿ ಯಡ್ಡಿ ದಂಗುಬಡಿದು ಹೋಗಿದ್ದಾರೆ.



ಈಶ್ವರಪ್ಪನಿಗೆ ಈಗ ಏನು ಮಾಡಬೇಕೆಂದೇ ಗೊತ್ತಾಗುತ್ತಿಲ್ಲ. ಅನಂತು ಬಣ ಸೇರಿದರೂ ಮುಖ್ಯಮಂತ್ರಿಯಾಗುವ ಕನಸು ನನಸಾಗುವುದಿಲ್ಲ ಎಂಬುದು ಆತನಿಗೆ ಗೊತ್ತಾಗಿದೆ. ಹೀಗಾಗಿ ಈಗ ಎರಡೂ ಕಡೆ 'ಡಬ್ಬಲ್ ಗೇಮ್' ಮಾಡುತ್ತಿದ್ದಾರೆ.

ಆರ್‌ಎಸ್‌ಎಸ್ ಪ್ರವೇಶ

ಅನಂತು ಬಣ ಕೇವಲ ಶೆಟ್ಟರ್‌ರನ್ನು ಮುಂದಿಟ್ಟುಕೊಂಡು ಯಡ್ಡಿ ವಿರುದ್ಧ ಹೋರಾಟ ಆರಂಭಿಸಿಲ್ಲ. ಅವರ ಆತ್ಮವಿಶ್ವಾಸಕ್ಕೆ ಹೊಡೆತ ನೀಡಲು ಆರ್‌ಎಸ್‌ಎಸ್‌ಅನ್ನೂ ಬಳಸಿಕೊಳ್ಳುತ್ತಿದೆ. ಹೀಗಾಗಿ ಆರ್‌ಎಸ್‌ಎಸ್ ನಾಯಕರೂ 'ಯಡ್ಡಿ ಸರಿಯಾಗಿ ಆಡಳಿತ ನಡೆಸುತ್ತಿಲ್ಲ' ಎಂದು ಆತನನ್ನು ತರಾಟೆಗೆ ತೆಗೆದುಕೊಳ್ಳಲು ಆರಂಭಿಸಿದೆ.

ಮೊನ್ನೆ ಆರ್‌ಎಸ್‌ಎಸ್ ನಾಯಕರು ಯಡ್ಡಿ ಮನೆಯಲ್ಲಿಯೇ ಸಭೆ ನಡೆಸಿ, ಯಡ್ಡಿಯನ್ನು ಮತ್ತು ಅವರ ಕಾರ್ಯಕ್ಕೆ ಬಾರದ ಸಚಿವರನ್ನೂ ಸಿಕ್ಕಾಪಟ್ಟೆ ಬೈದಿದ್ದಾರೆ. "ಕೇಸರೀಕರಣವಿಲ್ಲದೆ ಕಾಂಗ್ರೆಸ್‌ನವರಂತೆ ಆಡಳಿತ ನಡೆಸಿದರೆ ಬಿಜೆಪಿಗೆ ಅಧಿಕಾರ ಸಿಕ್ಕಿದ್ದರಿಂದ ಏನು ಪ್ರಯೋಜನವಾಯಿತು? ಜನರಿಗೆ ಸರಿಯಾಗಿ ಕುಡಿಯುವ ನೀರು, ವಿದ್ಯುತ್ ಕೊಡದೆ, ಬೇಕಾಬಿಟ್ಟಿ ಆಡಳಿತ ನಡೆಸಿದರೆ ಜನ ನಮ್ಮನ್ನು ತಿರಸ್ಕರಿಸುತ್ತಾರೆ" ಎಂದೆಲ್ಲ ಯಡ್ಡಿಯನ್ನು ತರಾಟೆ ತಗೊಂಡಿದ್ದಾರೆ.

ಇದರಿಂದ ಮುಜುಗರಕ್ಕೀಡಾಗಿರುವ ಯಡ್ಡಿ "ಅಧಿಕಾರಿಗಳು ನನ್ನ ಆದೇಶಗಳನ್ನು ಪಾಲಿಸುತ್ತಿಲ್ಲ" ಎಂದೆಲ್ಲಾ ಸಬೂಬು ಹೇಳಿದರೂ ಚೆಡ್ಡಿಗಳು ಅದನ್ನು ಕೇಳಿಸಿಕೊಳ್ಳಲಿಲ್ಲ ಎಂದು ಯಡ್ಡಿ ಆಪ್ತರೇ ಹೇಳುತ್ತಿದ್ದಾರೆ.

ಈ ನಡುವೆ ಶೋಭ ಕರಂದ್ಲಾಜೆ ತಮ್ಮ ಖಾತೆಗಳಲ್ಲೂ ಕೈಯಾಡಿಸುತ್ತಿದ್ದಾರೆ ಎಂದು ಸಚಿವರೆಲ್ಲಾ ಯಡ್ಡಿಯ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇದಲ್ಲದೆ, ಮೊನ್ನೆ ತಮಗೆ ಗೊತ್ತಿಲ್ಲದಂತೆ ಯಡ್ಡಿ ತಮ್ಮ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ ಅವರನ್ನೆಲ್ಲ ಹಿಗ್ಗಾ-ಮುಗ್ಗಾ ಬೈದಿರುವುದೂ ಸಚಿವರಿಗೆ ಸಿಟ್ಟು ಬರಿಸಿದೆ. ಮೊದಲೇ ತಮ್ಮನ್ನು ಒಂದು ಮಾತೂ ಕೇಳದೆ ಅಧಿಕಾರಿಗಳ ವರ್ಗಾವಣೆ ಮಾಡಿದ್ದಕ್ಕೆ ಯಡ್ಡಿ ವಿರುದ್ಧ ಇವರೆಲ್ಲ ಕುದಿಯುತ್ತಿದ್ದರು. "ಇದೆಲ್ಲ ಹೀಗೇ ಮುಂದುವರೆದರೆ, ಪರಿಣಾಮ ಸರಿ ಇರುವುದಿಲ್ಲ" ಎಂದು ಯಡ್ಡಿಗೆ ಎಚ್ಚರಿಕೆ ನೀಡಿದ್ದಾರೆ.


ಕಣ್ಣು ಕುಕ್ಕುತ್ತಿರುವ ಶೋಭಕ್ಕ

ತಾನು ಉಪಮುಖ್ಯಮಂತ್ರಿ ಎಂಬಂತೆ ಎಲ್ಲೆಡೆ ಮಿಂಚುತ್ತಿರುವ ಶೋಭಕ್ಕಳನ್ನು ಜೀರ್ಣಿಸಿಕೊಳ್ಳಲು ಸಚಿವರಿಗೆ, ಬಿಜೆಪಿ ಶಾಸಕರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಆಕೆಯ ವಿರುದ್ಧ ಒಂದು ಕೂಟ ರೆಡಿಯಾಗುತ್ತಿದೆ. ಅನಂತು ಬಣದಲ್ಲಿರುವ ಶಾಸಕರು, ಸಚಿವರು ಈ ಕೂಟವನ್ನು ಸಂಘಟಿಸುತ್ತಿದ್ದಾರೆ.

ಈಗಾಗಲೇ ಶಾಸಕರ ಗುಂಪೊಂದು ಕಳೆದ ವಾರ ಅರಣ್ಯ ಭವನದಲ್ಲಿ ಯಡ್ಡಿಯನ್ನು ಭೇಟಿಯಾಗಿ ಶೋಭಕ್ಕನ ವಿರುದ್ಧ ದೂರು ನೀಡಿದೆ. ಆದರೆ ಅದರಿಂದ ಏನೂ ಪ್ರಯೋಜನವಾಗದೇ ಇರುವುದರಿಂದ ಸರಿಯಾದ ಸಂದರ್ಭದಲ್ಲಿ ಯಡ್ಡಿ

ವಿಜಯನಗರದ ಸಿಸಿಬಿ ನಟರಾಜ್ ಮುಗಿಸಲು ಕುತಂತ್ರ

ಪಾಲಿಕೆಗಾಗಿ ಬಿಜೆಪಿಯ ಡರ್ಟಿ ಪಾಲಿಟಿಕ್ಸ್



ನಟರಾಜ್


ಬೆಂಗಳೂರು ಮಹಾನಗರ ಪಾಲಿಕೆಗಾಗಿ ಬಿಜೆಪಿ ಏನೆಲ್ಲಾ ಅನಾಚಾರ ಸಾಧಿಸಬೇಕೋ ಅದೆಲ್ಲವನ್ನೂ ಚಾಚೂತಪ್ಪದೆ ಮಾಡುತ್ತಿದೆ ಎಂಬುದಕ್ಕೆ, ವಿಜಯನಗರದ ಕಾಂಗ್ರೆಸ್ ಮುಖಂಡ ಸಿಸಿಬಿ ನಟರಾಜ್ ಲೇಟೆಸ್ಟ್ ಉದಾಹರಣೆಯಷ್ಟೇ.

ನವೆಂಬರ್ 3 ರಂದು ರಾಜಾಜಿನಗರದ ಹಳೇ ರೌಡಿ ಭಕ್ತ ನಾಗರಾಜನ ಮೇಲೆ ಕೇತಮಾರನಹಳ್ಳಿ ಮುನಿಯ ಗ್ಯಾಂಗ್ ದಾಳಿ ನಡೆಸಿದ್ದಕ್ಕೂ, ವಿಜಯನಗರದ ನಟರಾಜ್‌ಗೂ ಇದ್ದ ಸಂಬಂಧವೆಂದರೆ; ನಟರಾಜ್ ಅವರಿಬ್ಬರನ್ನೂ ಕರೆದು ಬುದ್ಧಿ ಹೇಳಿದ್ದು ಮಾತ್ರ. ಮುನಿಯ ಪತ್ನಿಯ ತಲೆಕೆಡಿಸಿ ಐದು ಲಕ್ಷದ ಒಡವೆ ದೋಚಿದ ರೌಡಿ ಭಕ್ತ ಹೇಳಿಕೇಳಿ ಹಳೇ ಪಾತಕಿ ಮತ್ತು ನಯವಂಚಕ. ಆ ಕಾಲದಿಂದಲೂ ತನ್ನನ್ನು ಸಾಕಿ ಬೆಳೆಸಿದ ಮುನಿಯ ಮನೆಗೇ ಕೊಳ್ಳಿಇಟ್ಟ. ಒಂದು ಹಂತದಲ್ಲಿ ಮುನಿಯನನ್ನೇ ಮುಗಿಸಲು ಸ್ಕೆಚ್ಚು ಹಾಕಿದ್ದ.

ಇದು ಗೊತ್ತಾದ ಮುನಿ ತನ್ನ ಹಳೇ ಹಿತೈಷಿ ವಿಜಯನಗರದ ನಟರಾಜ್ ಮುಂದೆ ಗೋಳು ತೋಡಿಕೊಂಡ. ಬೆಂಗಳೂರು ಕ್ರೈಮ್ ಲೋಕದ ಇಂಚಿಂಚನ್ನೂ ಬಲ್ಲ ನಟರಾಜ್ ಇಬ್ಬರನ್ನೂ ಕರೆಸಿ ಬುದ್ಧಿ ಹೇಳಿ ತಾನೇ ಕೈಯಾರೆ ಎರಡೂವರೆ ಲಕ್ಷ ಹಾಕಿ ಭಕ್ತ ಅಡವಿಕ್ಕಿದ್ದ ಮುನಿಯ ಪತ್ನಿಯ ಒಡವೆ ಬಿಡಿಸಿಕೊಟ್ಟಿದ್ದ.

ಇಷ್ಟಾದ ನಂತರವೂ ರೌಡಿ ಭಕ್ತ ತನ್ನ ದುರ್ಬುದ್ಧಿ ಬಿಡಲಿಲ್ಲ. ಮುನೀನ ಹೆಂಡ್ತೀನ ನಾನೇ ಇಟ್ಟುಕೊಂಡಿದ್ದೀನಿ ಎಂದು ಕಂಡಕಂಡಲ್ಲಿ ಅಪಪ್ರಚಾರ ಮಾಡಿದ್ದೂ ಅಲ್ಲದೇ ಇಷ್ಟರಲ್ಲೇ ಅವನನ್ನ ಮರ್ಡರ್ ಮಾಡಿಸ್ತೀನಿ ಎಂದೇ ಮುನಿಯ ವಿರುದ್ಧ ಕತ್ತಿ ಮಸೆಯಲಾರಂಭಿಸಿದ. ಅಷ್ಟಕ್ಕೂ ಭಕ್ತ ಎಂಬುವನು ಸೂಫಿ ರೌಡಿ ಮುಲಾಮನ ಮೊದಲ ಹೆಂಡತಿಯ ತಮ್ಮ ಮುಲಾಮನ ಹೆಸರಲ್ಲೇ ವಶೀಲಿಬಾಜಿಗಿಳಿದಿದ್ದ ಖತರ್‌ನಾಕ್.

ಇನ್ನೆಲ್ಲಿ ತನ್ನನ್ನು ಮುಗಿಸುತ್ತಾನೋ ಎಂದೇ ಭೀತಿಗೆ ಬಿದ್ದ ಮುನಿ ಛಪ್ಪರ್ ಸೀನನ ಶಿಷ್ಯರನ್ನು ಛೂಬಿಟ್ಟು ಭಕ್ತನಿಗೇ ಮುಹೂರ್ತವಿಟ್ಟ. ನವೆಂಬರ್ 3 ರ ಬೆಳಿಗ್ಗೆ ತನ್ನ ಮನೆ ಮುಂದೆಯೇ ದಾಳಿಗೀಡಾದ ಭಕ್ತ ಸಕಾಲದಲ್ಲಿ ಆಸ್ಪತ್ರೆ ಸೇರಿದ್ದರಿಂದ ಹೇಗೋ ಬದುಕುಳಿದ. ಆಸ್ಪತ್ರೆಗೆ ಬಂದ ಪೊಲೀಸರಿಗಾಗಲಿ, ತನ್ನ ಆಪ್ತರಲ್ಲಾಗಲಿ ಭಕ್ತ ಅಪ್ಪಿತಪ್ಪಿಯೂ ನಟರಾಜ್ ಹೆಸರು ಹೇಳಿಲ್ಲ. ಸಿಕ್ಕಿಬಿದ್ದ ಛಪ್ಪರ್ ಸೀನನ ಹುಡುಗರೂ ಕೂಡ ಮುನಿಯ ಹೆಸರನ್ನು ಬಿಟ್ಟರೆ ಎಲ್ಲೂ ನಟರಾಜ್ ಹೆಸರೆತ್ತಿಲ್ಲ.



ತನಿಖೆ ಮಾಡಿದ ಬಸವೇಶ್ವರನಗರದ ಪೊಲೀಸರು ಕೂಡ ಏನೆಲ್ಲಾ ಸರ್ಕಸ್ ಮಾಡಿದರೂ ಭಕ್ತನ ಮೇಲಿನ ದಾಳಿಗೂ ವಿಜಯನಗರದ ನಟರಾಜ್‌ಗೂ ಸಂಬಂಧವಿರುವುದು ಕಂಡುಬಂದಿಲ್ಲ. ಇಬ್ಬರಿಗೂ ರಾಜಿ ಮಾಡಿ ಬುದ್ಧಿ ಹೇಳಿದ್ದು ಬಿಟ್ಟರೆ ನಟರಾಜ್ ಪಾತ್ರ ಬೇರೇನೂ ಇರಲಿಲ್ಲ. ಇಷ್ಟಿದ್ದೂ ಎಲ್ಲಾ ಪತ್ರಿಕೆ ಮತ್ತು ಟೀವಿಗಳಲ್ಲಿ ಭಕ್ತನ ಹತ್ಯಾಯತ್ನಕ್ಕೂ ನಟರಾಜ್‌ಗೂ ಸಂಬಂಧವಿತ್ತೆಂಬ ಸುದ್ದಿಯನ್ನು ಹಬ್ಬಿಸಿದ್ದು ಯಾರು?



ಪಂಚಲಿಂಗಯ್ಯ

ಮುಂಬರುವ ಪಾಲಿಕೆ ಚುನಾವಣೆಯಲ್ಲಿ ನಟರಾಜ್ ಹಂಪಿನಗರದ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಶತಸ್ಸಿದ್ಧ. ಪಕ್ಷೇತರರಾಗಿ ನಿಂತರೂ ಗೆಲ್ಲುವ ಸಾಧ್ಯತೆ ಇರುವಾತ. ಜೊತೆಗೆ ಸೋಮಣ್ಣನ ಪಾಲಿಗೂ ನಟರಾಜ್ ದೊಡ್ಡ ಶತ್ರುವೇ. ಭಕ್ತನ ಹತ್ಯಾಯತ್ನವನ್ನೇ ನೆಪಮಾಡಿ ನಟರಾಜ್‌ರನ್ನು ಜೈಲುಪಾಲು ಮಾಡಿಬಿಟ್ಟರೆ ವಿಜಯನಗರ, ಹಂಪಿನಗರ, ಮಾರೇನಹಳ್ಳಿ, ಅತ್ತಿಕುಪ್ಪೆ, ಗಾಳಿ ಆಂಜನೇಯ ಮುಂತಾದ ವಾರ್ಡುಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ದಾರಿ ಸಲೀಸಾಗುತ್ತದೆ. ಕಾಂಗ್ರೆಸ್ ತನ್ನಿಂತಾನೇ ದಿಕ್ಕಾಪಾಲಾಗುತ್ತದೆ. ಸೋಮಣ್ಣ ಮತ್ತು ಲೇಟಿಟ್ ಕೃಷ್ಣಪ್ಪರ ಬಾಲವನ್ನೂ ಕಟ್ ಮಾಡಿದಂತಾಗುತ್ತದೆ.

ಇಂಥದೊಂದು ಲೆಕ್ಕ ಹಾಕಿಯೇ ನಟರಾಜ್‌ರನ್ನು ಸುಳ್ಳು ಕೇಸಿಗೆ ಸಿಲುಕಿಸುವ ಷಡ್ಯಂತ್ರವನ್ನು ಬಿಜೆಪಿ ಹೆಣೆದಿತ್ತೆ, ವಿಜಯನಗರದ ಜನ ಎಲ್ಲಿ ರೊಚ್ಚಿಗೆದ್ದು ಅದು ಬಿಜೆಪಿಗೇ ಮುಳುವಾಗುತ್ತೋ ಎಂದು ಕೊನೇಗಳಿಗೆಯಲ್ಲಿ ಅದನ್ನು ಕೈಬಿಡಲಾಯಿತೆ?

ಶೋಭಾ ಕರಂದ್ಲಾಜೆಯ ವಿರುದ್ಧ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಪಂಚಲಿಂಗಯ್ಯರ ಪತ್ನಿಯ ತಮ್ಮ ಬಸವರಾಜನನ್ನು ಸುಳ್ಳುಸುಳ್ಳೇ ಕೊಲೆ




ಮತ್ತು ಶೋಭಕ್ಕಗೆ ಪಾಠ ಕಲಿಸಲು ಅವರೆಲ್ಲ ನಿರ್ಧರಿಸಿದ್ದಾರೆ.

ಇತ್ತೀಚೆಗೆ ಯಡ್ಡಿ ಹೂಡಿಕೆದಾರರನ್ನು ಆಕರ್ಷಿಸಲು ಬಹರೇನ್ ಯಾತ್ರೆ ಕೈಗೊಂಡಿದ್ದರು. ಆಗ ಅವರ ಜೊತೆ ಹೋಗಿದ್ದು ಕೈಗಾರಿಕಾ ಸಚಿವರಲ್ಲ, ಬದಲಾಗಿ ಗ್ರಾಮೀಣಾಭಿವೃದ್ಧಿ ಸಚಿವೆ ಶೋಭಕ್ಕ. ಬಹರೇನ್‌ನಲ್ಲಿ ಸೆಲ್ವರ್ ಕಮೀಜ್ ಧರಿಸಿದ್ದ ಶೋಭಾ ಮತ್ತು ಸೂಟು ತೊಟ್ಟಿದ್ದ ಯಡ್ಡಿ ಅಕ್ಕ-ಪಕ್ಕ ನಿಂತು ಮೆರೆದದ್ದನ್ನು ನೋಡಿ, ಬಿಜೆಪಿ ನಾಯಕರು ಬಾಯಿಗೆ ಬಂದಹಾಗೆ ಮಾತನಾಡುತ್ತಿದ್ದಾರೆ. "ವಿದೇಶಿ ಬಂಡವಾಳ ಹೂಡಿಕೆಗೂ, ಶೋಭಾಳ ಗ್ರಾಮೀಣಾಭಿವೃದ್ಧಿಗೂ ಯಾವ ಸಂಬಂಧ? ಆಕೆಯನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದು ಮಜಾ ಮಾಡುವುದಕ್ಕಾ" ಎಂದೆಲ್ಲ ಪ್ರಶ್ನಿಸುತ್ತಿದ್ದಾರೆ.

ಇದೆಲ್ಲದರಿಂದ ಸಹಜವಾಗಿಯೇ ಅನಂತು ಬಣಕ್ಕೆ ಸಖತ್ ಖುಷಿ ಆಗಿದೆ. ಹೇಗಿದ್ದರೂ ಆಡಳಿತ ನೀಡುವಲ್ಲಿಯೂ ಯಡ್ಡಿ ವಿಫಲರಾಗಿರುವುದರಿಂದ ಆತನ ವಿರುದ್ಧ ಬಂಡಾಯದ ಬಾವುಟ ಹಾರಿಸಲು ಇದೇ ಸಕಾಲ ಎಂದು ಅನಂತು ಬಣ ಮಾತನಾಡಿಕೊಳ್ಳುತ್ತಿದೆ. ಸದ್ಯದಲ್ಲೇ ಯಡ್ಡಿ ವರ್ಸಸ್ ಅನಂತು ಯುದ್ಧ ಬಿಜೆಪಿಯಲ್ಲೇ ಆರಂಭವಾಗಲಿದೆ ಎಂದು ಚೆಡ್ಡಿಗಳೇ ಹೇಳುತ್ತಿವೆ.

■ವರದಿಗಾರ



ಜವರಾಯಿಗೌಡ

ಕೇಸಿಗೆ ಸಿಲುಕಿಸಿ ಜೈಲಿಗೆ ಹಾಕಿದ್ದು, ಕೆಂಗೇರಿ ಉಪನಗರದ ಜನಪ್ರಿಯ ಕಾಂಗ್ರೆಸ್ ಮುಖಂಡ ಅನಿಲ್‌ಕುಮಾರ್‌ರನ್ನು ಪಾಲಿಕೆ ಚುನಾವಣೆಯಲ್ಲಿ ಹಣಿಯಲು ಅವರ ಅಣ್ಣ ಚನ್ನಮಲ್ಲಪ್ಪರನ್ನು ಜೈಲಿಗೆ ದಬ್ಬಿದ್ದು, ಸುಂಕದಕಟ್ಟೆಯ ಜೆಡಿಎಸ್ ನಾಯಕ ಜವರಾಯಿಗೌಡ ತಮ್ಮ ಕೈಯಾರೆ ದುಡ್ಡು ಹಾಕಿ ಬೋರ್‌ವೆಲ್ ಕೊರೆಸಿದರೂ ಅದರ ವಿರುದ್ಧ ಪಾಲಿಕೆ ಅಧಿಕಾರಿಗಳಿಂದ ಪೊಲೀಸರಿಗೆ ದೂರು ಕೊಡಿಸಿದ್ದು, ಜೆಡಿಎಸ್ ನಾಯಕನೆಂಬ ಒಂದೇ ಕಾರಣಕ್ಕೆ ಗಾಣಿಗರಪಾಳ್ಯದ ಗೋಪಾಲ್ ತಮ್ಮ ಪ್ರಕಾಶ್‌ರನ್ನು ಸುಳ್ಳು ಕೇಸು ಹೊರಿಸಿ ಜೈಲಿಗೆ ಹಾಕಿಸಿದ್ದು, ಮಂಗನಹಳ್ಳಿ ಮಹೇಶ್ ಎಂಬ ಮತ್ತೊಬ್ಬ ಜೆಡಿಎಸ್ ನಾಯಕನನ್ನು ತಾವರೆಕೆರೆ ಎಸ್.ಐ. ನಾಗರಾಜ್ ಮೂಲಕ ಜೈಲುಪಾಲು ಮಾಡಿದ ಬಿಜೆಪಿ ಕುತಂತ್ರಕ್ಕೂ, ಈಗ ವಿಜಯನಗರದ ನಟರಾಜ್ ವಿರುದ್ಧದ ಪಿತೂರಿಗೂ ಹೆಚ್ಚು ವ್ಯತ್ಯಾಸವೇನಿಲ್ಲ.

ತನ್ನ ಸಾಧನೆಯಿಂದ ಮತ್ತು ಜನಪರ ಕಾಳಜಿಯಿಂದ ಪಾಲಿಕೆ ಚುನಾವಣೆಯನ್ನು ಎದುರಿಸಲಾಗದೇ ವಿರೋಧಿ ಜೆಡಿಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರನ್ನು ಸುಳ್ಳು ಕೇಸು ಹೊರಿಸಿ ಜೈಲಿಗೆ ದಬ್ಬುವ ಬಿಜೆಪಿಯ ದುರಾಚಾರಕ್ಕೆ ಕೊನೆಯೇ ಇಲ್ಲವೆ?

■ರಾ.ಸೋ.



ಶಿವಮೊಗ್ಗ: ಪರಿಷೆಗಳ ಪರಿಣಾಮ

ಶಿವಮೊಗ್ಗದಲ್ಲಿ ನಡೆದ ಪರಿಷೆಗಳ ದೆಸೆಯಿಂದ ಜನಜೀವನ ಸುಸ್ತಾಗಿ ಹೋಗಿದೆ. ಸಹಕಾರಿ ಸಪ್ತಾಹದ ಸಮಾವೇಶ, ಸರ್ಕಾರಿ ನೌಕರರ ಜಾತ್ರೆ, ಕಾಂಗ್ರೆಸ್‌ನವರ ಜಾಥಾ, ಭಾಗವತ ದಶಮಸ್ಕಂದ ಪುರಾಣ, ಮಕ್ಕಳ ನಾಟಕೋತ್ಸವ.... ಹೀಗೆ ನಡೆದ ಪರಿಷೆಗಳು ಜನರನ್ನು ಕಂಗಾಲಾಗಿಸಿವೆ. ಇದ್ದುದರಲ್ಲಿ ಒಂದಿಷ್ಟು ಯೋಚಿಸುವಂತೆ ಮಾಡಿದ್ದು ತೀರ್ಥಹಳ್ಳಿ ಶಾಸಕ ಕಿಮ್ಮನೆ ರತ್ನಾಕರ್ ನಡೆಸಿದ ಪಾದಯಾತ್ರೆ. ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವ ಕಿಮ್ಮನೆ ಜನರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಶಾಸಕ. ಕ್ಷೇತ್ರ ವಿಂಗಡಣೆಯ ಫಲವಾಗಿ ತುಂಬ ವಿಸ್ತಾರಗೊಂಡ ತೀರ್ಥಹಳ್ಳಿ ಕ್ಷೇತ್ರದ ಸಮಸ್ಯೆಗಳನ್ನರಿಯಲು ಪಾದಯಾತ್ರೆ ಮಾಡಿದ ಕಿಮ್ಮನೆಯವರ ಸಾಹಸ ಗೋಪಾಲಗೌಡರ ಕಾಲವನ್ನು ನೆನಪಿಸಿತು. ಇನ್ನುಳಿದಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ ಕರಗುತ್ತಿದೆ. ಪೊಲೀಸರಿಗೆ ಬೇಕಾದ ವ್ಯಕ್ತಿಗಳನ್ನು ತಮ್ಮ ಮುಂದಿಟ್ಟುಕೊಂಡು ತಿರುಗುವ ಕಾಗೋಡು ತಿಮ್ಮಪ್ಪನವರು ಚುನಾವಣೆ ರಾಜಕೀಯದಿಂದ ನಿವೃತ್ತಿ ಘೋಷಿಸಿಕೊಂಡಿರುವುದರ ಫಲವಾಗಿ ಅವರ ಪ್ರಭೆಯೂ ಕಡಿಮೆಯಾಗುತ್ತಿದೆ. ಇನ್ನು ಅವರಿವರ ಮನೆಗೆ ದಿಕ್ಕೆಟ್ಟ ದನದಂತೆ ನುಗ್ಗುತ್ತಿರುವ ಬಂಗಾರಪ್ಪ ಜವಾಬ್ದಾರಿಯುತ ರಾಜಕಾರಣ ಮಾಡಿದ್ದರೆ ಅವರಿಗಾಗಲಿ, ಕಾಂಗ್ರೆಸ್‌ಗಾಗಲಿ ಇಂತಹ ಸ್ಥಿತಿ ಬರುತ್ತಿರಲಿಲ್ಲ. "ಮುಂದಿನ ಚುನಾವಣೆಗೆ ನಾನೇ ಅಭ್ಯರ್ಥಿ" ಎಂದು ಘೋಷಿಸಿಕೊಂಡು ಹೋಗುತ್ತಿರುವ ಅವರ ಕಾರ್ಯವೈಖರಿಯನ್ನು ಅವರ ಮಗನೇ ವಿರೋಧಿಸುತ್ತಿದ್ದಾರೆ. ಹೇಗೆ ನೋಡಿದರೂ ಅವರ ಮಗ ಕುಮಾರ್ ಬಂಗಾರಪ್ಪನ ವಿರೋಧ ಅರ್ಥಪೂರ್ಣವಾಗಿದೆ. ಬಿಜೆಪಿಯನ್ನು ಕೋಮುವಾದಿಯೆಂದೂ ಇವತ್ತು ಟೀಕಿಸುವ 'ಬಂ' ಅಂದು ಒಂದು ಕ್ಷಣ ಯೋಚಿಸಿದ್ದರೂ ಇಂದು ಕನಿಕರಕ್ಕೆ ತುತ್ತಾಗುವ ಸ್ಥಿತಿ ಬರುತ್ತಿರಲಿಲ್ಲ. ಇಂತಹ ಸಮಯದಲ್ಲಿ ಜಿಲ್ಲೆಯ ಸತ್ತ ಕಾಂಗ್ರೆಸ್ಸಿಗರಲ್ಲಿ ಒಂದಿಷ್ಟು ಸಂಚಲನವುಂಟುಮಾಡಿದ್ದು ಕಿಮ್ಮನೆಯವರ ಪಾದಯಾತ್ರೆ. ಈ ಯಾತ್ರೆಗೆ ಜೆಡಿಎಸ್‌ನವರೂ ಕಾಲುಹಾಕಿದ್ದು ಒಂದು ವಿಶೇಷ. ತೀರ್ಥಹಳ್ಳಿಯ ಅವಾಂತರಕಾರಿ ರಾಜಕಾರಣಿಯೊಬ್ಬ ಈ ಪಾದಯಾತ್ರೆಯನ್ನು ಟೀಕಿಸಿದ್ದಾನೆ. ಹೀಗೆ ಟೀಕಿಸದಿದ್ದರೆ ಆತನ ಅಸ್ತಿತ್ವವೇ ಗೊತ್ತಾಗುತ್ತಿರಲಿಲ್ಲವಾದ್ದರಿಂದ ಅದೂ ಕೂಡ ಸಮಯೋಚಿತವಾಗಿದೆ.

*****

ಇನ್ನು ನೆಹರು ಸ್ಟೇಡಿಯಂನಲ್ಲಿ ನಡೆದ ಸಹಕಾರಿ ಸಪ್ತಾಹದ ಸಭೆಯನ್ನು ಕ್ರೀಡಾಪ್ರೇಮಿಗಳು, ಸಾರ್ವಜನಿಕರು ವಿರೋಧಿಸಿದ್ದರು. ಏಕೆಂದರೆ ಈ ಸಹಕಾರಿ ಜನರಿಗೆ ಸ್ಟೇಡಿಯಂ ಇರುವುದು ಏಕೆಂದೇ ಗೊತ್ತಿಲ್ಲ. ನೂರಾರು ಕೋಟಿ ಜನಸಂಖ್ಯೆಯಿರುವ ಈ ದೇಶದಲ್ಲಿ ಜಾಗತಿಕ ಮಟ್ಟದಲ್ಲಿ ಎಲ್ಲಾ ಕ್ರೀಡೆಗಳಲ್ಲೂ ನಾವು ಹಿಂದೆ ಬಿದ್ದಿದ್ದೇವೆ. ಏಕೆಂದರೆ ಸ್ಟೇಡಿಯಂಗಳಿರುವುದು ಇಂತಹ ಸಭೆಗಳಿಗೆ ಎಂದೇ ಎಲ್ಲರೂ ಭಾವಿಸಿರುವುದರಿಂದ. ಈ ಹಿಂದೆ ಸಾಹಿತ್ಯ ಸಮ್ಮೇಳನಕ್ಕಾಗಿ ಸ್ಟೇಡಿಯಂ ಟ್ರಾಕು ಹಾಳಾಗಿತ್ತು, ಈಗ ಸಹಕಾರಿ ಸಂಘಗಳು ಈ ಆಟದ ಮೈದಾನವನ್ನು ದೊಗರುಗೊಳಿಸಿವೆ.

ಈ ಸಹಕಾರಿ ಜನರನ್ನು ಏಕೆ ಹೆಗ್ಗಣಗಳು ಎಂದು ಕರೆಯುತ್ತಾರೆಂದರೆ ಇವತ್ತು ಕರ್ನಾಟಕದಲ್ಲಿ ಯಾವುದೇ ಸಹಕಾರಿ ಸಂಸ್ಥೆ ಸುಸ್ಥಿತಿಯಲ್ಲಿಲ್ಲ, ಸುಸ್ಥಿತಿಯಲ್ಲಿರುವವರೆಂದರೆ ಈ ಸಂಸ್ಥೆಗಳನ್ನು ಮೇಯುತ್ತಿರುವ ಜನ. ಇಡೀ ಕರ್ನಾಟಕದಲ್ಲಿ ಸಾವಿರಾರು ಪುಟ ಬರೆಯುವಷ್ಟು ಹಗರಣವನ್ನು ಈ ಸಹಕಾರಿ ಹೆಗ್ಗಣಗಳು ಮಾಡಿವೆ. ಈ ಸಹಕಾರಿ ಸಪ್ತಾಹದಲ್ಲಿ ಮಲೆನಾಡಿನ ಹೆಮ್ಮೆಯ ಸಾರಿಗೆ ಸಂಸ್ಥೆಯಾದ ಸಹಕಾರಿ ಸಾರಿಗೆ ವಿಷಯ ಮತ್ತು ಅದನ್ನು ನಿರ್ವಹಿಸುತ್ತಿರುವವರ ಅನುಭವ ಮತ್ತು ಸನ್ಮಾನಗಳು ನಡೆಯಬೇಕಿತ್ತು. ಆದರೆ ದೇವೇಗೌಡರ ರಾಜಕಾರಣದ ಶೈಲಿಯಿಂದ ಸಡನ್ನಾಗಿ ಸಂತೃಪ್ತರಾಗಿ ಹೇಗೋ ಬಿಜೆಪಿ ಹಡಗನ್ನು ಹತ್ತಿಕೊಂಡವರ ಪ್ರಲಾಪವೇ ಇಲ್ಲಿ ವಿಜೃಂಭಿಸಿತು. ಬಚ್ಚೇಗೌಡರು ದೇವೇಗೌಡರ ಕುಟುಂಬವನ್ನು ಟೀಕಿಸುವುದು ಒಂದು ರೀತಿ ಗಾಳಿಯನ್ನು ಗುದ್ದಿ ಮೈಕೈ ನೋವು ಮಾಡಿಕೊಂಡಂತಿತ್ತು. ಸಹಕಾರಿ ಸಾಧನೆ ಮತ್ತು ಕನಸನ್ನು ಬಚ್ಚೇಗೌಡರು ಮಾತನಾಡಬಹುದಿತ್ತು. ಆದರೆ ಪಾಪ ಅವರಿಂದ ಅದು ಸಾಧ್ಯವಿಲ್ಲ!

*****

ಇನ್ನು ಶಿವಮೊಗ್ಗದಲ್ಲಿ ನಡೆದ ಸರ್ಕಾರಿ ಕರ್ಮಚಾರಿಗಳ ಜಾತ್ರೆ ರಂಜನೀಯವಾಗಿತ್ತು. ಸಾಮಾನ್ಯವಾಗಿ ಮೇಲಧಿಕಾರಿಗಳಿಂದ ಮೆಮೋಗಳ ಮುಖಾಂತರ ನಿಯಂತ್ರಣಕ್ಕೊಳಪಡುವ ಸರ್ಕಾರಿ ಜನರನ್ನು ಇಂತಹ ಜಾತ್ರೆಗಳಲ್ಲಿ ನಿಯಂತ್ರಿಸುವುದು ಕಷ್ಟ. ಸರ್ಕಾರಿ ಸವಲತ್ತುಗಳನ್ನು ಒಗ್ಗಟ್ಟಿನಿಂದ ಕೇಳುವ ನೌಕರರು, ದೂರದಿಂದ ಬಂದ ಕೂಡಲೇ ವಸತಿ ಮತ್ತು ಹಲ್ಲುಜ್ಜುವ ಸಾಮಗ್ರಿಗಳನ್ನು ಹಕ್ಕುದಾರಿಕೆಯಿಂದಲೇ ಕೇಳುತ್ತವೆ. ನಂತರ ತಿಂಡಿ, ಆದಾದ ನಂತರ ಊಟ, ನಂತರ ವಾಪಸ್ಸು ಹೊರಡುವ ತರಾತುರಿ, ಇವಿಷ್ಟೇ ಅವರ ಜಾತ್ರೆಯಲ್ಲಿ ಕಂಡುಬರುವ ಸಂಭ್ರಮ. ಶಿವಮೊಗ್ಗದ ಸರ್ಕಾರಿ ಜನರ ಸಮಾವೇಶದಲ್ಲಿ ಪತ್ರಕರ್ತರಿಗೆ ಸೂಕ್ತ ವ್ಯವಸ್ಥೆಯಾಗಿರಲಿಲ್ಲ. ಇದನ್ನು ಕಾರ್ಯಕ್ರಮಕ್ಕೆ ಮುನ್ನವೂ ಮಾಡಬಹುದಿತ್ತು. ಪತ್ರಕರ್ತರೂ ತಾಳ್ಮೆಯಿಂದ ತಮ್ಮ ವ್ಯವಸ್ಥೆಗಾಗಿ ಕಾಯಬಹುದಿತ್ತು. ಆದರೆ ಶಿವಮೊಗ್ಗದ ಪತ್ರಕರ್ತರು ಈಚೆಗೆ ತುಂಬಾ ಸಂಘಟಿತರಾಗಿ ಸಿಟ್ಟಾಗುತ್ತಿದ್ದಾರೆ. ವಾರದ ಹಿಂದಷ್ಟೇ ಒಬ್ಬ ಪೊಲೀಸ್ ಪೇದೆಯನ್ನು ಸಸ್ಪೆಂಡ್ ಮಾಡಿಸಿದ್ದಾರೆ. ಪೊಲೀಸ್ ಪೇದೆಯ ಮೇಲೆ ಹೆಡ್‌ಕಾನ್ಸ್‌ಟೇಬಲ್ ಇದ್ದಾನೆ, ಅವನ ಮೇಲೆ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್, ಡಿವೈಎಸ್‌ಪಿ, ಅಡಿಷನಲ್ ಎಸ್ಪಿ, ಹೀಗೆ. ಮೇಲಕ್ಕೆ ಹೋದಂತೆ ತರಹೇವಾರಿಯ ಬೈಗುಳದ ನಿಘಂಟುಗಳಿವೆ. ಅವುಗಳ ಪರಿಣಾಮದಿಂದ ಪೇದೆ ತುಂಬ ಒತ್ತಡಕ್ಕೆ ಒಳಗಾಗಿರುತ್ತಾನೆ. ಆದ್ದರಿಂದ ಅವನ ಅನಾಗರಿಕ ನಡವಳಿಕೆಯನ್ನೂ ಸಹಿಸಿಕೊಳ್ಳಲಾಗದ ಮಟ್ಟದಲ್ಲಿ ಈ ನಮ್ಮ ಪತ್ರಕರ್ತರಿದ್ದಾರೆ ಎಂದರೆ ಎಡೂರಪ್ಪ ನಗಾಡುವುದಿಲ್ಲವೆ? ಹೋಗಲಿ ಈಶ್ವರಪ್ಪ ಒಳಗೊಳಗೆ ನಗುವುದಿಲ್ಲವೆ? ಘಟಾನುಘಟಿ ಪತ್ರಕರ್ತರು, ಪ್ರಶಸ್ತಿ ವಿಜೇತ ಪತ್ರಕರ್ತರೆಲ್ಲಾ ಸೇರಿ ಒಬ್ಬ ಪೊಲೀಸ್ ಪೇದೆಯನ್ನು ಅಮಾನತ್ತು ಮಾಡಿಸುತ್ತಾರೆಂದರೆ, ಇವರ ಸಾಹಸವನ್ನು ಕೊಂಡಾಡಲೇಬೇಕು. ಹಾಗೆಯೇ ಸರ್ಕಾರಿ ಕರ್ಮಚಾರಿಗಳ ಸಮಾರಂಭವನ್ನು ಇವರು ಬಹಿಷ್ಕರಿಸುವ ತೀರ್ಮಾನ ತೆಗೆದುಕೊಂಡ ಮೇಲೆ ವಾರ್ತಾ ಇಲಾಖೆಯ ದೇವರಾಜಯ್ಯನೆಂಬ ಅಸಂಬದ್ಧ ಅಧಿಕಾರಿಯನ್ನು ಕೂಡ ಸಸ್ಪೆಂಡ್ ಮಾಡಿಸಲೇಬೇಕಿತ್ತು. ಈ ದೇವರಾಜಯ್ಯ ಶಿವಮೊಗ್ಗದಂತಹ ಸಾಂಸ್ಕೃತಿಕ ನಗರಿಗೆ ಶೋಭೆ ತರುವ

ವ್ಯಕ್ತಿಯಲ್ಲ. ಯಾವ ಕಾರ್ಯಕ್ರಮಗಳ...
ಯಾವುದಾದರೂ ಬರದು ಜಿಲ್ಲೆಗೆ ...
ಅಧಿಕಾರಿ. ಅಂತಹ ಜಾಗಕ್ಕೆ ...
ಆಗ ಶಿವಮೊಗ್ಗದ ಪತ್ರಕರ್ತರನ್ನು ...
ಅದುಬಿಟ್ಟು ಒಬ್ಬ ಪೇದೆ ಮೇಲೆ ...
ಮುಗಿಸುವುದು ಅಕ್ಷಮ್ಯ ಅಪರಾಧ!

*****

ಇನ್ನು ಸರ್ಕಾರಿ ಜನಗಳ ಜಾತ್ರಾ ವಿಶೇಷ
ದಾಖಲಿಸುವುದಾದರೆ, ಯಾರೋ ನಿರೂಪಕ ಭರತ್‌ಲಾ
ಮೀಣಾರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದರೆಂ
ಪದೇಪದೇ ಹೇಳುತ್ತಿದ್ದ. ಮೀಣಾ ಜಿಲ್ಲಾಧಿಕಾರಿಗಳಾಗಿರ
ಅವರು ಶಿವಮೊಗ್ಗ ಜಿಲ್ಲಾ ಪಂಚಾಯ್ತಿಯ ಮು
ಕಾರ್ಯದರ್ಶಿಗಳಾಗಿದ್ದರು. ಅಂದು ಅವರು ಕೈಗೊ
ಅಪ್ಪಾದೇಶ್ ಕಾರ್ಯಕ್ರಮಗಳನ್ನು 'ಲಂಕೇಶ್' ಪ
ಮೆಚ್ಚುಗೆಯಿಂದ ದಾಖಲಿಸಿತ್ತು. ಅಪ್ಪಾದೇಶ್ ಕಾರ್ಯಕ
ಈ ಸಮಾಜದ ಕಟ್ಟಕಡೆಯ ಪ್ರಜೆಯೂ ದೇಶಕಟ್ಟುವ
ಕ್ರಿಯಾಶೀಲಗೊಳಿಸುವ ಕಾರ್ಯಕ್ರಮಗಳನ್ನು ಹೊಂದಿ
ಭರತಲಾಲ್ ಮೀಣಾ ಅರ್ಥಪೂರ್ಣವಾಗಿ ಭಾ
ಮಾಡುತ್ತಿದ್ದಾಗ ಸರ್ಕಾರಿ ಜನ ಊಟದ ಪೆಂಡಾಲ್
ಧಾವಿಸುತ್ತಿದ್ದರು. ಅದರಲ್ಲಿ ಶಿವಮೊಗ್ಗ ಜಿಲ್ಲೆಯ ನೌಕರ
ಜಾಸ್ತಿಯಿದ್ದರು. ಏಕೆಂದರೆ ಅವರು ತಯಾರಿಸಲಿದ್ದ ರುಚಿ
ಖಾದ್ಯಗಳ ಮಾಹಿತಿ ಅವರಿಗಷ್ಟೇ ಗೊತ್ತಿತ್ತು. ಇನ್ನು
ನಿಸ್ಸಾರ್ ನಾಡಭಕ್ತಿಗೀತೆ ಹಾಡಲಿದ್ದ ಯುವರಾಜನ ಟೀ
ಹಾಕಿದ ಡ್ರೆಸ್ ಎಲ್ಲರಿಗೂ ನಗೆ ತರಿಸುತ್ತಿತ್ತು. ಮಾವಾ
ಮದುವೆಯಲ್ಲಿ ಓಡಾಡುವಂತಿದ್ದ ಯುವರಾಜನ ಟೀ
ಡ್ರೆಸ್, ಕರ್ನಾಟಕದ ಯಾವ ಸಂಸ್ಕೃತಿ ಬಿಂಬಿಸುತ್ತದೆಂ
ಅವರೇ ಹೇಳಬೇಕು. ಇನ್ನು ಕುವೆಂಪು ಯೂನಿವರ್ಸಿಟಿ
ಉಪಕುಲಪತಿಗಳಾದ ಶೇರೇಗಾರರು ಹಲವಾ
ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುತ್ತಿದ್ದಾರೆಂ
ನಿರೂಪಕ ಹೇಳುತ್ತಿದ್ದ. ಆ ಸಮಸ್ಯೆಗಳಾವುವು ಮ
ಪರಿಹಾರಗಳೇನು ಎಂಬುದನ್ನು ಕುಲಪತಿಯವರೇ ಪತ್ರಿಕೆ
ಮುಖಾಂತರ ವಿವರಿಸಿದರೆ ಈ ನಾಡಿನ ಜನತೆ ಕುವೆಂ
ವಿ.ವಿ. ಕುಲಪತಿಗೆ ಕೃತಜ್ಞರಾಗಿರುತ್ತಾರೆ!

*****

ಬಾಯಿಬಿಟ್ಟ ಕೂಡಲೇ ತನ್ನ ಮೇಧಾವಿತ
ಪ್ರದರ್ಶಿಸುವ ಈಶ್ವರಪ್ಪ ಇಲ್ಲೂ ಕೂಡ ಜನರ
ತಬ್ಬಿಬ್ಬುಗೊಳಿಸಿದರು. "ನಿಮ್ಮ ಪ್ರತಿನಿಧಿಯಾಗಿ ಎಡೂ
ಕೆಲಸ ಮಾಡುತ್ತಿದ್ದಾರೆ" ಎಂದುದಲ್ಲದೆ ಒಂದು ಹಂತದ
"ಆ ದೇವರೇ ಬಂದರೂ ನಿಮ್ಮ ಸಮಸ್ಯೆ ಬಗೆಹರಿ
ಲಾರದು" ಎಂದುಬಿಟ್ಟರು.

ಈಶ್ವರಪ್ಪನಂಥವರ ಸಮಸ್ಯೆ ಏನೆಂದರೆ ಇಂಥವ
ಎಂದೂ ಆಡಳಿತ ಮತ್ತು ಜನಜೀವನದ ಬ
ಯೋಚಿಸಿದವರಲ್ಲ, ಮಾತನಾಡಿದವರೂ ಅಲ್ಲ. ಸ
ತಾರಕದಲ್ಲಿ ಕೂಗುವ ಈತನಿಗೆ ಸೂಕ್ಷ್ಮ ವಿಷಯಗಳ
ಹೊಳೆಯುವುದಿಲ್ಲ. ಬಾಯಿಬಿಟ್ಟರೆ "ಕೈ ಮುರಿಯುತ್ತೇ
ನಾಲಿಗೆ ಸೀಳುತ್ತೇವೆ" ಎಂದೇ ಭಾಷಣ ಮಾಡುವವ
ತನ್ನ ಖಾತೆ ಬಗ್ಗೆ ಮಾತನಾಡಲೂ ಬರುವುದಿಲ್ಲ.

*****

ದೇಶದಲ್ಲಿಯೇ ಶಕ್ತಿಯುತ ಸಂಘಟನೆ ಎಂದರೆ
ಸರ್ಕಾರಿ ನೌಕರರ ಸಂಘಟನೆ. ಸದ್ಯಕ್ಕೆ ಸರ್ಕಾರಿ ಜನಗಳ
ಸುರಕ್ಷಿತವಾಗಿರುವವರು ಯಾರೂ ಇಲ್ಲ. ಆದರೆ ಪ್ರಾಮಾ
ಸರ್ಕಾರಿ ನೌಕರರ ಸಂಖ್ಯೆ ಕಡಿಮೆಯಾಗುತ್ತಿದೆ. ಎ
ಮಟ್ಟಿಗೆ ಎಲ್ಲಾ ಯೋಜನೆಗಳು ಅಧಿಕಾರಿಗ
ಮಟ್ಟದಲ್ಲಿಯೇ ಕರಗಿಹೋಗುತ್ತಿವೆ. ಅದಕ್ಕೇ ನೂರಾ
ಕೋಟಿ ರೂ. ಕಬಳಿಸಿದ ಅಧಿಕಾರಿಗಳು ಲೋಕಾಯು
ಬಲೆಗೆ ಸಿಕ್ಕಿಬೀಳುತ್ತಿರುವುದು. ಶಿವಮೊಗ್ಗದ ಒಂದೆರ
ತಾಜಾ ಉದಾಹರಣೆ ಕೊಡುವುದಾದರೆ, ಬುಳ್ಳಾಪ
ಮೇಲಿನ ಹನಸವಾಡಿಗೆ ರಂಗಮಂದಿರ ಮಂಜೂರಾಗಿ
ಹಣವೂ ಬಿಡುಗಡೆಯಾಗಿದೆ. ಖರ್ಚೂ ಆಗಿದೆ. ಆ
ಎಲ್ಲಿ ಹುಡುಕಿದರೂ ರಂಗಮಂದಿರವಿಲ್ಲ. ರಂಗಮಂದಿರವ
ನುಂಗುವ ಜನ ಇನ್ನು ರಸ್ತೆ ಬಿಟ್ಟಾರೆಯೇ? ಬೇಲಕ
ರಸ್ತೆಯಾಗಿದೆ. ಹಣವೂ ಖರ್ಚಾಗಿದೆ. ಆದರೆ ಎ
ಹುಡುಕಿದರೂ ರಸ್ತೆಯಿಲ್ಲ. ಹಾಗೆಯೇ ಗ್ರಾಮ ಸಹಾಯ
ಮನೆಯೊಂದು ದುರಸ್ತಿಯಾಗಿದೆ. ಹೊಸ ಮನೆ ಕಟ್ಟ
ಹಣ ಮಂಜೂರಾಗಿದೆ. ಮನೆ ಮಾತ್ರ ಇಂದೋ ನಾಳೆ
ಬೀಳುವ ಸ್ಥಿತಿಯಲ್ಲಿದೆ. ಮುಖ್ಯಮಂತ್ರಿಯ ಜಿಲ್ಲೆಯ
ರಂಗಮಂದಿರ, ರಸ್ತೆ, ಹೊಸಮನೆ ಕಾಣೆಯಾಗಿವೆ.
ಬಗ್ಗೆ ಜಿಲ್ಲಾ ಪಂಚಾಯ್ತಿ ಮುಖ್ಯಕಾರ್ಯದರ್ಶಿ,

ಮುಖ್ಯಮಂತ್ರಿಯಾದಿಯಾಗಿ ಎಲ್ಲರೂ ಸುಮ್ಮನಿ
ರೆಂದರೆ ಎಲ್ಲರೂ ಹೊಂದಿಕೊಂಡು ಹೋಗುತ್ತಿ
ಎಂದರ್ಥ!

■ ವರದಿಗಾ

...ಂಕೇಸ್

ಒಬ್ಬ ಕಡುಭ್ರಷ್ಟ ಐಎಎಸ್ ಅಧಿಕಾರಿ,
...ತ್ತೊಬ್ಬ ಹೇಡಿ ಮುಖ್ಯಮಂತ್ರಿಯಷ್ಟೇ ಇಂಥ
...ನೆಮುರುಕ ಕೃತ್ಯಕ್ಕೆ ಕೈಹಾಕಲು ಸಾಧ್ಯ?

ಇಮಾಮಿ ಗೋಲ್ಡ್ ಸೋಪ್ ಕಂಪನಿಯ
...ದೀಮ ಮಾರ್ವಾಡಿಗಾಗಿ ಕನ್ನಡಿಗರ ಹೆಮ್ಮೆಯ
...ತೀಕವಾಗಿರುವ ಮೈಸೂರು ಸ್ಯಾಂಡಲ್
...ೀಪನ್ನೂ, ಅದರ ಕಾರ್ಖಾನೆಯನ್ನೂ ಮಾರಲು
...ತ ಬಿಜೆಪಿ ದುಷ್ಟ ಕೂಟದ ವಿರುದ್ಧ
...ಡಿಗರಿನ್ನು ಕೈಕಟ್ಟಿ ಕೂರುವಂತಿಲ್ಲ.

ಗಣಿರೆಡ್ಡಿಯ ಲೂಟಿಗಾಗಿ ಕರ್ನಾಟಕದ
...ಯನ್ನೇ ಮಾರಿಕೊಂಡ, ಬರಿದಾದ ಖಜಾನೆ
...ಂಬಿಸಲಿಕ್ಕಾಗಿ ಬೆಂಗಳೂರು ಸುತ್ತಮುತ್ತಲ
...ರ್ಕಾರಿ ಭೂಮಿಯನ್ನೇ ಹರಾಜಿಗಿಟ್ಟ ದುಷ್ಟ
...ಖ್ಯಮಂತ್ರಿ ಯಡಿಯೂರಪ್ಪನ ಕಣ್ಣೀಗ ಸರ್ಕಾರಿ
...ೀಪ್ ಫ್ಯಾಕ್ಟರಿಯ ಮೇಲೆ ಬಿದ್ದಿದೆ. ಅದಕ್ಕೆ
...ರ್ನಾಟಕದ ಪರಮಭ್ರಷ್ಟ ಐಎಎಸ್ ಅಧಿಕಾರಿ
...ಎಚ್. ಅನಿಲ್‌ಕುಮಾರ್‌ನೇ ಸೂತ್ರಧಾರ!

ಸದ್ಯ ಯಶವಂತಪುರದಲ್ಲಿರುವ ಕರ್ನಾಟಕ
...ೀಪ್ಸ್ ಅಂಡ್ ಡಿಟರ್ಜಂಟ್ ಲಿಮಿಟೆಡ್
...ದರೆ ಕೆಎಸ್‌ಡಿಎಲ್ ಕಾರ್ಖಾನೆಯ
...ವತ್ತೊಂಭತ್ತು ಎಕರೆ ಜಮೀನನ್ನು
...ಂಬಯಿಯ ಇಮಾಮಿ ಫಾರ್ಮಾಸ್ಯುಟಿಕಲ್ಸ್
...ಪನಿಗೆ ಮಾರಿ ಹಾಕಿದರೆ ಸಲೀಸಾಗಿ ಇನ್ನೂರು
...ೀಟಿಯ ಲಂಚ ಹುಟ್ಟುತ್ತದೆ. ಇದು ಯಡ್ಡಿಯ
...ರಾಶೆಯಾದರೆ, ವಿರೋಧಿ ಕಾಂಗ್ರೆಸ್‌ನ ಅಧಿಪತಿ
...ಆರ್.ವಿ. ದೇಶಪಾಂಡೆಯ ಪೌರೋಹಿತ್ಯವೂ
...ರಕ್ಕಿದೆ.


ಮೈಸೂರು ಸೋಪ್ಸ್ ಈ ದೇಶದ ಏಕೈಕ
...ರ್ಕಾರಿ ಒಡೆತನದ ಸಾಬೂನು ಕಾರ್ಖಾನೆ.
...ಸಂಖ್ಯಾತ ವಿದೇಶಿ
...ಂಡುಗಳು, ಪ್ರೊಕ್ಟೆರ್
...ಡ್ ಗ್ಯಾಂಬಲ್,
...ದೂಸ್ತಾನ್ ಲೀವರ್‌ನಂಥ
...ತ್ಯ ಬಹುರಾಷ್ಟ್ರೀಯ
...ಪನಿಗಳ ವಿರುದ್ಧದ
...ಡಿಗರ ರಣಕಹಳೆಯಂತೆ
...ಳಗುತ್ತಿರುವುದು
...ಶವಂತಪುರದ ಸೋಪ್
...ಕ್ಟರಿ ಮತ್ತದರ
...ತ್ಪನ್ನಗಳಾದ ಮೈಸೂರು
...ಂಡಲ್, ಮೈಸೂರು ಬಾರ್,
...ಂಡಲ್ ಪೌಂಡರ್,
...ಸೂರು ಜಾಸ್ಮಿನ್,
...ೀಸ್, ಕ್ಲಾಸಿಕ್ ಸ್ಯಾಂಡಲ್,
...ರ್ಸನಲ್ ಕೇರ್, ಬೇಬಿ ಪೌಡರ್ ಇತ್ಯಾದಿಗಳೆ.
...ದೇಶಾಭಿಮಾನಿಯೂ ಪ್ರೀತಿವಿಶ್ವಾಸವಿಟ್ಟೇ
...ೀಪ್ ಖರೀದಿಸುತ್ತಾನೆ. ಬೇರೆಲ್ಲ ಸರ್ಕಾರಿ
...ದ್ದಿಮೆಗಳು ಅಧಿಕಾರಶಾಹಿಯ ಭ್ರಷ್ಟಾಚಾರಕ್ಕೆ
...ಕಿ ಕಣ್ಣುಮುಚ್ಚಿಕೊಂಡಾಗಲೂ ಇದೆಲ್ಲವನ್ನೂ
...ಸಿಯೂ ಬದುಕುಳಿದದ್ದು ಕರ್ನಾಟಕ ಸಾಬೂನು
...ತ್ತು ಮಾರ್ಜಕ ಸಂಸ್ಥೆಯೊಂದೆ.

ವರ್ಷಕ್ಕೆ ಸರಾಸರಿ ಹತ್ತು ಕೋಟಿಯ ಲಾಭವುಳ್ಳ
...ಕಾರ್ಖಾನೆಯ ನಲವತ್ತೊಂಭತ್ತು ಎಕರೆ ಆಸ್ತಿಯನ್ನು
...ರಿಕೊಂಡು ಯಾರಿಗೇನೂ ಆಗಬೇಕಿಲ್ಲ, ಏಕೆಂದರೆ
...ದ ಉದ್ದಿಮೆಯಲ್ಲ, ಬೆಂಗಳೂರಿನ ನಟ್ಟ ನಡುವೆ
...ವತ್ತೊಂಭತ್ತು ಎಕರೆ ವಿಸ್ತೀರ್ಣದ ಜಮೀನಿರುವಾಗ
...ೀ ಕಾರ್ಖಾನೆಯನ್ನೇ ದಾಬಸ್‌ಪೇಟೆಗೆ ಸ್ಥಳಾಂತರಿಸಲು
...ರಣವೂ ಇಲ್ಲ. ಹೇಳಿಕೇಳಿ ಎಂಟುನೂರು ಮಂದಿ
...ರ್ಮಿಕರುಳ್ಳ ಸೋಪ್ ಫ್ಯಾಕ್ಟರಿಯನ್ನು ಇದ್ದಕ್ಕಿದ್ದಂತೆ
...ಂತರ ಮಾಡಿ ಇಲ್ಲಿರುವ ಭೂಮಿಯನ್ನು 698
...ೀಟಿ ರೂಪಾಯಿಗಳಿಗೆ ಮಾರಿ ಹಾಕುವ ಮನೆಹಾಳು
...ಸ್ತಾವನೆಯೊಂದನ್ನು, ಸದ್ಯ ಕೆಎಸ್‌ಡಿಎಲ್‌ನ
...ನೇಜಿಂಗ್ ಡೈರೆಕ್ಟರ್ ಬಿ.ಎಚ್. ಅನಿಲ್‌ಕುಮಾರ್
...ಸಿದ್ದಾದರೂ ಯಾವ ಕಾರಣಕ್ಕೆ?




ಯಡ್ಡಿ-ಅಡ್ವಾಣಿ ಜಂಟಿ ರಾಬರಿ

ಮೈಸೂರು ಸೋಪ್ಸ್: ಮತ್ತೊಂದು ಮಾವೆರಿಕ್




ಇದರಿಂದ ಯಡ್ಡಿಗೋ ಬಿಜೆಪಿಗೋ ಇನ್ನೂರು ಕೋಟಿ ಲಂಚ ಹುಟ್ಟಬಹುದೇ ಹೊರತು, ಅಡ್ವಾಣಿಯ ಸಂಬಂಧಿ ಇಮಾಮಿ ಕಂಪನಿಯ ಮಾರ್ವಾಡಿಗೆ ಇಡೀ ಆಸ್ತಿ ದಕ್ಕಬಹುದೇ ಹೊರತು ಸರ್ಕಾರಕ್ಕಾಗಲಿ, ಕನ್ನಡಿಗರಿಗಾಗಲಿ ಅಥವಾ ಸ್ವತಃ ಮೈಸೂರು ಸೋಪ್ಸ್‌ಗಾಗಲಿ ಇದರಿಂದ ಏನು ಲಾಭ?



■ ರಾ. ಸೋಮನಾಥ್

2008 ರ ಅಕ್ಟೋಬರ್ 11 ರಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಪರವಾಗಿ ಅದರ ಮುಖ್ಯಸ್ಥ ಮತ್ತು ಹಿರಿಯ ಐಎಎಸ್ ಖದೀಮ ಅನಿಲ್‌ಕುಮಾರ್ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಉಮೇಶ್ ಎಂಬ ಮತ್ತೊಬ್ಬ ಐಎಎಸ್ ಅಧಿಕಾರಿಗೆ ಕಳಿಸಿದ ಪ್ರಸ್ತಾವನೆಯ ವಿವರಗಳೇ ಸಾಕು, ಗಂಧದ ಗುಡಿಯ ಸುತ್ತ ಎಂತೆಂಥ ತೋಳುಗಳು ಜೊಲ್ಲು ಸುರಿಸುತ್ತಿವೆ ಎಂಬುದಕ್ಕೆ.

ಆ ಪ್ರಕಾರ ಕರ್ನಾಟಕ ಸೋಪ್ಸ್‌ನ ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗದ ಕಾರ್ಖಾನೆಗಳ ಆವರಣದ ಖಾಲಿ ಜಾಗಗಳನ್ನು ಮಾರಾಟಕ್ಕಿಟ್ಟು ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಬೇಕಂತೆ. ಹೀಗೆ ಉಳಿಕೆ ಭೂಮಿ ಮಾರಿ ಸಂಪನ್ಮೂಲ ಸಂಗ್ರಹಿಸುವ ಐಡಿಯಾ ಕೊಟ್ಟಿದ್ದು ಸರ್ಕಾರಿ ಒಡೆತನದ TECSOK ಎಂಬ ಮತ್ತೊಂದು ಮನೆಮುರುಕ ದಲ್ಲಾಳಿಗಳ ಕೂಟವಂತೆ. ಈ ಹಿಂದೆ ಎಂ.ಜಿ. ರಸ್ತೆಯಲ್ಲಿ ಪಾಲಿಕೆ ವರ್ಕ್‌ಶಾಪ್ ಆಗಿದ್ದ ಒಂಬತ್ತೆಕರೆಯ ಗರುಡಾಮಾಲ್‌ನ ಭೂಕಂಟಕ ಉದಯ್ ಗರುಡಾಚಾರ್‌ನ ಖಾಸಗಿ ಆಸ್ತಿಯನ್ನಾಗಿ ಲಪಟಾಯಿಸಲು, ಈಜಿಪುರದ ಬಡವರ ವಸತಿ ಸಮುಚ್ಛಯವಾಗಿದ್ದ ಹದಿನೈದೆಕರೆ ಪಾಲಿಕೆ ಆಸ್ತಿಯನ್ನು ಮತ್ತದೇ ಗರುಡಾಚಾರ್‌ನ ಮೇವರಿಕ್ ಹೋಲ್ಡಿಂಗ್ಸ್ ಪಾಲಾಗಲು ನೆರವಾಗಿದ್ದೇ ಈ TECSOK ಎಂಬ ಹುಟ್ಟುಕಳ್ಳರ ಏಜೆನ್ಸಿ.



ಮ್ಯಾನೇಜಿಂಗ್ ಡೈರೆಕ್ಟರ್ ಅನಿಲ್‌ಕುಮಾರ್

ಈಗ ಇದೇ TECSOK ಕರ್ನಾಟಕ ಸೋಪ್ಸ್‌ನ ಆಸ್ತಿಪಾಸ್ತಿಗಳಿಗೊಂದು ಗತಿ ಕಾಣಿಸಲೆಂದು JLLM ಅಂದರೆ ಮೆ. Jones Lang Lasalle Megharaj ಎಂಬ ಮುಂಬಯಿ ಮೂಲದ ರಿಯಲ್ ಎಸ್ಟೇಟ್ ಕಂಪೆನಿಯೊಂದಕ್ಕೆ ಗುತ್ತಿಗೆ ಕೊಟ್ಟಿದೆ. ಹೀಗೆ ಕರ್ನಾಟಕ ಸೋಪ್ಸ್‌ನ ಅಮೂಲ್ಯ ಆಸ್ತಿಯನ್ನು ಮಾರಿ ದುಡ್ಡೆಣಿಸಿಕೊಳ್ಳುವ ಮಾಸ್ಟರ್ ಪ್ಲಾನ್ ಹಾಕಿದ್ದು ಕುಮಾರಸ್ವಾಮಿ ಕಾಲಕ್ಕೆ ವಾಣಿಜ್ಯ ಇಲಾಖೆಗೆ ಪ್ರಿನ್ಸಿಪಲ್ ಸೆಕ್ರೆಟರಿಯಾಗಿದ್ದು ಸದ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವಾಲಯದ ಕಾರ್ಯದರ್ಶಿಯಾಗಿರುವ ಧೂರ್ತ ಐಎಎಸ್ ಬಿ.ಎಂ. ಶಿವಕುಮಾರ್.

ಬೆಂಗಳೂರು ಸುತ್ತಮುತ್ತಲ ಅಸಂಖ್ಯಾತ ರೈತರ ಭೂಮಿ ಕಿತ್ತು ಕಳ್ಳಕಂಪೆನಿಗಳ ಹೊಟ್ಟೆಗೆ ಹಾಕಿದ ಬಿ.ಎಂ. ಶಿವಕುಮಾರ್ ಕನ್ನಡಿಗರ ಹೆಮ್ಮೆಯ ಸಂಸ್ಥೆಗೊಂದು ಗತಿ ಕಾಣಿಸುವ ಸ್ಕೆಚ್ ಹಾಕಿಯೇ ಮುಂಬಯಿಯ ಇಮಾಮಿ ಕಂಪನಿಯ ಜೊತೆ ಡೀಲು ಕುದುರಿಸಿದ್ದ. ಇಂಥ ಮನೆಹಾಳು ಕೆಲಸಕ್ಕೆಂದೇ ಖದೀಮ ಐಎಎಸ್‌ಗಳು ಹುಟ್ಟುಹಾಕಿರುವ TECSOK ನ ಕಳ್ಳರು ಕೆಎಸ್‌ಡಿಎಲ್‌ನ ಆಸ್ತಿ ಪರಭಾರೆಯನ್ನು ನಿಭಾಯಿಸಲೆಂದು ಮುಂಬಯಿ ಮೂಲದ JLLM ಕಂಪನಿಯನ್ನು ಆಯ್ದುಕೊಂಡಿದ್ದಾದರೂ ಯಾವ ಆಧಾರದ ಮೇಲೆ?

ಹೀಗೆ ಶಿವಕುಮಾರ್ ಎಂಬ ಐಎಎಸ್‌ನ ಖದೀಮನ ಪಿತೂರಿಯ ಫಲವಾಗಿ ತಲೆ ಎತ್ತಿದ್ದ ಆಸ್ತಿ ಲೂಟಿಯ ಮಾಸ್ಟರ್ ಪ್ಲಾನ್‌ಗೆ ಸರ್ಕಾರಿ ಸಮ್ಮತಿ ಕೊಡಿಸಿದ್ದು ಇದೇ ಯಡ್ಡಿಯ ಪರಮನಿಷ್ಠರಾದ ವಿ.ಪಿ. ಬಳಿಗಾರ್.

ಇನ್ನು JLLM ಸೂಚಿಸಿರುವ ಮನೆಹಾಳ ಮಾರ್ಗೋಪಾಯಗಳಾದರೂ ಎಂಥದ್ದು?

ನಲವತ್ತೊಂಭತ್ತು ಎಕರೆಗಳ ಪೈಕಿ KSDL ಐದು ಎಕರೆಯನ್ನಷ್ಟೇ ಉಳಿಸಿಕೊಂಡು ಉಳಿಕೆ ಭೂಮಿಯನ್ನು 30 ವರ್ಷಗಳ ಮಟ್ಟಿಗೆ ಗುತ್ತಿಗೆಗೆ ಕೊಡುವುದು ಒಂದು ಯೋಜನೆಯಾದರೆ, ಇಡೀ ಕಾರ್ಖಾನೆಯನ್ನೇ ದಾಬಸ್‌ಪೇಟೆಗೆ ಸ್ಥಳಾಂತರಿಸಿ ತನ್ನ ಕಾರ್ಪೊರೇಟ್ ಕಚೇರಿಗಾಗಿ ಕೇವಲ 35,000 ಚದುರ ಅಡಿಗಳನ್ನಷ್ಟೇ ಇಟ್ಟುಕೊಳ್ಳುವುದು ಮತ್ತೊಂದು.

ಈ ಪೈಕಿ ಎರಡನೆಯದನ್ನೇ ಸರ್ಕಾರ ಆಯ್ಕೆ ಮಾಡಿಕೊಂಡಿದೆ. ಅಂದರೆ ಇಡೀ ಸೋಪ್ ಫ್ಯಾಕ್ಟರಿಯ 37 ಎಕರೆ ಭೂಮಿಯನ್ನು 30 ವರ್ಷದ ಮಟ್ಟಿಗೆ ಮುಂಬಯಿಯ ಇಮಾಮಿ ಕಂಪನಿಗೆ ಗುತ್ತಿಗೆಗೆ ಕೊಡುವುದು. ಉಳಿಕೆ ಭೂಮಿಯನ್ನು KSDL ತನ್ನ ಕಾರ್ಪೊರೇಟ್ ಕಚೇರಿಗಾಗಿ ಇಟ್ಟುಕೊಳ್ಳುವುದು. ಭೂಮಿಯ ಮಾಲೀಕತ್ವ ಮಾತ್ರ KSDL ಹೆಸರಲ್ಲಿರುತ್ತದೆ. 30 ವರ್ಷದ ತನಕ ಅದನ್ನು ಗುತ್ತಿಗೆ ಪಡೆದ ಕಂಪನಿ ತನಗಿಷ್ಟ ಬಂದು ಉದ್ದೇಶಕ್ಕೆ, ಅಂದರೆ ಐಟಿ, ಹೌಸಿಂಗ್, ಎಸ್‌ಇಝೆಡ್ ಯಾವುದಕ್ಕಾದರೂ ಬಳಸಬಹುದು. ಅದಕ್ಕೆಂದು 698 ಕೋಟಿ ರೂಪಾಯಿಗಳನ್ನು ಗುತ್ತಿಗೆದಾರ ಕೊಡಬೇಕು. ಅದಲ್ಲದೇ ಡಿವಿಡೆಂಡ್ ಆಗಿ ಪ್ರತಿ ಮೂರು ವರ್ಷಕ್ಕೊಮ್ಮೆ 30 ಕೋಟಿಯಂತೆ ಸರ್ಕಾರಕ್ಕೆ ಕಟ್ಟಬೇಕು. ಸಾಲದ್ದಕ್ಕೆ ಈಗಿರುವ ಇಡೀ ಕಾರ್ಖಾನೆಯನ್ನು ಸರಿಸುಮಾರು 66 ಕೋಟಿ ರೂಪಾಯಿಗಳ ವೆಚ್ಚದಲ್ಲಿ ತನ್ನದೇ ದುಡ್ಡು ಹಾಕಿ ದಾಬಸ್‌ಪೇಟೆಗೆ ಸ್ಥಳಾಂತರಿಸಬೇಕು.

ಇದು ಯಡ್ಡಿ ಸರ್ಕಾರದ ಗುತ್ತಿಗೆ ಷರತ್ತು. ಅಷ್ಟಕ್ಕೂ ಸಾಬೂನು ಕಾರ್ಖಾನೆಯನ್ನು ಸ್ಥಳಾಂತರ ಮಾಡಲು ಯಡ್ಡಿ ಸರ್ಕಾರ ಕೊಡುತ್ತಿರುವ ಕಾರಣವೇನು ಗೊತ್ತೆ? ವಾಯುಮಾಲಿನ್ಯವಂತೆ. ಪರಿಸರ ಮಾಲಿನ್ಯ ಮಂಡಳಿಯ ಆದೇಶದ ಪ್ರಕಾರ ಸಾಬೂನು ಕಾರ್ಖಾನೆಯ ಬಾಯ್ಲರ್‌ಗಳಿಗೆ ಕಲ್ಲಿದ್ದಲು ಮತ್ತು ಫರ್ನೆಸ್ ಬಳಸುವುದರಿಂದ ಪರಿಸರ ಮಾಲಿನ್ಯವಾಗುತ್ತಿರುವುದೇ ಸ್ಥಳಾಂತರಕ್ಕೆ ಕಾರಣವಂತೆ.

ಇದೊಂದೇ ಕಾರಣವಾಗಿದ್ದರೆ, ಯಡ್ಡಿ ಸರ್ಕಾರಕ್ಕೆ ನಿಜವಾದ ಜನಕಾಳಜಿಯೇ ಇದ್ದಿದ್ದರೆ ಕೇವಲ 3 ಕೋಟಿಯ ಖರ್ಚಿನಲ್ಲಿ ಇಡೀ ಬಾಯ್ಲರ್ ಘಟಕಕ್ಕೆ ಎಲ್‌ಪಿಜಿ ಗ್ಯಾಸ್ ಅಳವಡಿಸಿ ಬಿಟ್ಟರೆ ಸಮಸ್ಯೆ ತನ್ನಿಂತಾನೇ

ಅಡ್ವಾಣಿಯ ಇಮಾಮಿ ಡೀಲು

ಇಡೀ ಮೈಸೂರು ಸೋಪ್ಸ್ ಸಿಬ್ಬಂದಿಗಳಿಗೆಲ್ಲ ಗೊತ್ತಿರುವ ಸತ್ಯವೆಂದರೆ ಸದ್ಯ KSDL ನ 37 ಎಕರೆಗೆ ಕೈಹಾಕಿರುವವನು ಮುಂಬಯಿಯ ಇಮಾಮಿ ಕಂಪನಿಯ ಮಾರ್ವಾಡಿ ಧಣಿ. ಈತ ಬಿಜೆಪಿಯ ರಾಷ್ಟ್ರನಾಯಕ ಮತ್ತು ಅದರ ಭಾವಿ ಪ್ರಧಾನಿ ಎಲ್.ಕೆ. ಅಡ್ವಾಣಿಯ ರಕ್ತಸಂಬಂಧಿ.

ಇಮಾಮಿ ಸೋಪ್, ಹಮಾಮ್ ಅಲ್ಲದೇ ಮೈಸೂರು ಸೋಪ್ಸ್‌ನ ಅನೇಕ ಉತ್ಪನ್ನಗಳಿಗೆ ದೇಸಿ ಮಾರುಕಟ್ಟೆಯಲ್ಲಿ ಎದುರಾಳಿಯೇ ಈ ಇಮಾಮಿ. KSDL ಅನ್ನು ದಾಬಸ್ ಪೇಟೆಗೆ ಸಾಗಹಾಕಿ ಈಗಿರುವ ಕಾರ್ಖಾನೆಯನ್ನು ತನ್ನ ವಶಕ್ಕೆ ಪಡೆದು ಇದೇ ಕಾರ್ಖಾನೆಯಲ್ಲಿ ಇಮಾಮಿ ಸೋಪ್‌ನ ಉತ್ಪತ್ತಿ ಮಾಡುವುದು ಇಮಾಮಿ ಖದೀಮರ ಉದ್ದೇಶ. ಹೇಗೂ ಹದಿನೈದೆಕರೆ ಭೂಮಿ ಖಾಲಿಯಿದೆ. ಅಲ್ಲಿ ಹದಿನೈದಂತಸ್ತಿನ ಗಗನಚುಂಬಿ ಅಪಾರ್ಟ್‌ಮೆಂಟ್ ಎಬ್ಬಿಸಿ ಮಾರಿ ಹಾಕಿದರೆ ಅದೇ ಇಡೀ ಆಸ್ತಿಯ ರೇಟಾಗುತ್ತದೆ. ಎಕರೆಗಲ್ಲಿ ಸದ್ಯ ಹತ್ತು ಕೋಟಿಯ ಮಾರುಕಟ್ಟೆ ಬೆಲೆಯಿದೆ.

ಒಮ್ಮೆ ಸರ್ಕಾರಿ ಸಾಬೂನು ಕಾರ್ಖಾನೆ ಇಮಾಮಿ ಪಾಲಾಯಿತೆಂದರೆ ಅಲ್ಲಿನ ಬಾಯ್ಲರ್‌ಗಳಿಗೆ ಎಲ್‌ಪಿಜಿ ಅಳವಡಿಸಿ ತನ್ನದೇ ಬ್ರಾಂಡಿನ ಸೋಪ್ ತಯಾರಿಸಿ ಮಾರಲು ನಿಂತರೆ ಬೆಂಗಳೂರು ನಗರದಂಥ ದೊಡ್ಡ ಮಾರುಕಟ್ಟೆ ಹಿಡಿಯುವುದು ಯಾವ ಲೆಕ್ಕ? ಅಷ್ಟುಹೊತ್ತಿಗೆ ದಾಬಸ್‌ಪೇಟೆಯಿಂದ ಬೆಂಗಳೂರಿಗೆ ಸೋಪು ಸಾಗಿಸಲು KSDL ಸುಸ್ತಾಗಿ ಕಣ್ಣು ಮುಚ್ಚಿಕೊಳ್ಳುತ್ತದೆ. ಆಸ್ತಿಗೆ ಆಸ್ತಿಯೂ ಬಂತು. ಬೆಂಗಳೂರನ್ನು ಆಕ್ರಮಿಸಿಕೊಂಡಂತೆಯೂ ಆಯ್ತು. ಎದುರಾಳಿ ಕಂಪನಿಯನ್ನು ಕೊಲ್ಲುವುದೂ ಸಲೀಸು. ಇದು ಇಮಾಮಿ ಹುನ್ನಾರ. ನಿನ್ನೆಮೊನ್ನೆಯ ತನಕ ರಾಜೀವ್ ದೀಕ್ಷಿತನ ಸ್ವದೇಶಿ ಮಂತ್ರ ಪಠಿಸುತ್ತಿದ್ದ ಆರೆಸ್ಸೆಸ್ ಬುದ್ಧಿಜೀವಿಗಳಿಗೆ ಇನ್ನಾವ ಕಾಲಕ್ಕೆ ಜ್ಞಾನೋದಯವಾಗುತ್ತೋ? ■

ಬಗೆಹರಿದು ಬಿಡುತ್ತದೆ. 66 ಕೋಟಿ ಖರ್ಚು ಮಾಡಿ ದಾಬಸ್‌ಪೇಟೆಗೆ ಸ್ಥಳಾಂತರಿಸುವ ತಲೆನೋವೇ ಇಲ್ಲ, 37 ಎಕರೆ ಬೆಲೆ ಬಾಳುವ ಭೂಮಿ ಮಾರಿಕೊಳ್ಳಬೇಕಿಲ್ಲ, ಸಾಬೂನು ಕಾರ್ಖಾನೆಗೆಂದು ದಾಬಸ್‌ಪೇಟೆಯ ರೈತರ ಇಷ್ಟು ಎಕರೆಯನ್ನೂ ಕಿತ್ತುಕೊಳ್ಳಬೇಕಿಲ್ಲ, ಅದೂ ಕೇವಲ 3 ಕೋಟಿಯ ವೆಚ್ಚದಲ್ಲಿ!

ವರ್ಷಕ್ಕೆ ಹತ್ತರಿಂದ ಹದಿನೈದು ಕೋಟಿಯಷ್ಟು ಲಾಭ ತರುವ, ಜನರ ಒಡೆತನದಲ್ಲಿರುವ ಸಾಬೂನು ಕಾರ್ಖಾನೆಯನ್ನು ಅದರದೇ ಲಾಭದಲ್ಲಿ 3 ಕೋಟಿ ಖರ್ಚು ಮಾಡಿ ನವೀಕರಿಸುವ ಬದಲು 66 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಡೀ ಕಾರ್ಖಾನೆಯನ್ನೇ ಸ್ಥಳಾಂತರಿಸಿ ಅದರ ಭೂಮಿಯನ್ನೇ ರಿಯಲ್ ಎಸ್ಟೇಟ್ ಖದೀಮರಿಗೆ ಮಾರಿ ಹಾಕುವುದು ಮೂರ್ಖತನವಲ್ಲದೇ ಮತ್ತೇನು?

ಆದರೆ ಇದು ಸರ್ಕಾರದ ದುಷ್ಟತನ ಮತ್ತು ಜನರ ಸೊತ್ತನ್ನೇ ಕಬಳಿಸುವ ಹುನ್ನಾರ. ಗಣಿ ರೆಡ್ಡಿಗಾಗಿ ಕರ್ನಾಟಕದ ಗಡಿಯನ್ನೇ ಬದಲಾಯಿಸಿ ಸಾವಿರಾರು ಕೋಟಿಯ ಅದಿರು ದೋಚಿದ ಬಿಜೆಪಿಯ ದುಷ್ಟತನ ಸಾಬೂನು ಕಾರ್ಖಾನೆಯ ವಿಷಯದಲ್ಲೂ ಮುಂದುವರಿಯುತ್ತಿದೆ.

ಒಮ್ಮೆ ಕಾರ್ಖಾನೆ ಸ್ಥಳಾಂತರಗೊಂಡಿತೆಂದರೆ ಪ್ರತಿನಿತ್ಯ 800 ಮಂದಿ ಕಾರ್ಮಿಕರನ್ನು ಬೆಂಗಳೂರಿನಿಂದ ದಾಬಸ್‌ಪೇಟೆಗೆ ಕರೆದೊಯ್ದು ಮತ್ತೆ ವಾಪಸ್ಸು ತಂದು ಬಿಡಬೇಕೆಂದರೆ ಅದಕ್ಕೆಂದೇ ಐವತ್ತು ಬಸ್ಸುಗಳು ಬೇಕು. ಇಂಥ ಐವತ್ತು ಬಸ್ಸುಗಳು ಮಾಡುವ ವಾಯುಮಾಲಿನ್ಯದ ಮುಂದೆ ಬಾಯ್ಲರ್‌ಗಳು ಮಾಡುವ ಮಾಲಿನ್ಯ ಯಾವ ಲೆಕ್ಕ? ಹೀಗೆ ಕಾರ್ಮಿಕರನ್ನು ಬೆಂಗಳೂರಿನಿಂದ ದಾಬಸ್‌ಪೇಟೆಗೆ ಕರೆದೊಯ್ಯಲು ವರ್ಷವೊಂದಕ್ಕೆ ತಗಲುವ ವೆಚ್ಚವೇ ಎರಡೂವರೆ ಕೋಟಿ ರೂಪಾಯಿಗಳಾಗುತ್ತವೆ. ಇನ್ನು ಕಾರ್ಖಾನೆಯಲ್ಲಿ ಉತ್ಪಾದಿಸಿದ ಸೋಪು, ಪೌಡರ್, ಅಗರ್‌ಬತ್ತಿಗಳನ್ನು ಮಾರಬೇಕೆಂದರೆ ಮತ್ತೆ ಬೆಂಗಳೂರಿಗೆ ಬರಲೇಬೇಕು. ಉತ್ಪನ್ನಗಳನ್ನು ಮತ್ತೆ ಬೆಂಗಳೂರಿಗೆ ಸಾಗಿಸಲು ಸಾರಿಗೆ ವೆಚ್ಚವೇ ಇನ್ನೂ ಎರಡು ಕೋಟಿಯಷ್ಟಾಗುತ್ತದೆ?

ಕಾರ್ಮಿಕರನ್ನು ಸಾಗಿಸಲು ವರ್ಷಕ್ಕೆ ಎರಡೂವರೆ ಕೋಟಿ, ಉತ್ಪನ್ನಗಳನ್ನು ವಾಪಸ್ಸು ಬೆಂಗಳೂರಿಗೆ ಸಾಗಿಸಲು ಮತ್ತೆ ವರ್ಷಕ್ಕೆ ಎರಡು ಕೋಟಿ ಪೋಲಾದರೆ ಹತ್ತು ಕೋಟಿಯ ಲಾಭದಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಅನ್ಯಾಯವಾಗಿ ಮಣ್ಣುಪಾಲಾಗುತ್ತದೆ.

ಉಳಿಯುವುದು ಕೇವಲ ಐದೂವರೆ ಕೋಟಿ ಮಾತ್ರ!

ಒಮ್ಮೆ ಮೂರು ಕೋಟಿ ಖರ್ಚು ಮಾಡಿ ಬಾಯ್ಲರ್‌ಗಳಿಗೆ ಎಲ್‌ಪಿಜಿ ಅಳವಡಿಸುವುದು ಲಾಭವಾ? ಅಥವಾ ಫ್ಯಾಕ್ಟರಿಯನ್ನೇ ಎತ್ತಂಗಡಿ ಮಾಡಿ ಪ್ರತಿ ವರ್ಷಕ್ಕೆ ನಾಲ್ಕೂವರೆ ಕೋಟಿ ಕಳಕೊಳ್ಳುವುದು ಲಾಭವಾ?

ಇಂಥ ಸರಳ ಲೆಕ್ಕಾಚಾರ ಯಡ್ಡಿ ಸರ್ಕಾರಕ್ಕೆ ಗೊತ್ತಿಲ್ಲವೆಂದೇನಲ್ಲ, ಗೊತ್ತಿದೆ. ಆದರೆ ಇನ್ನೂರು ಕೋಟಿಯ ಲಂಚ ಹುಟ್ಟಬೇಕಲ್ಲ.


ಒಮ್ಮೆ 698 ಕೋಟಿ ಕೊಟ್ಟು 30 ವರ್ಷದ ಮಟ್ಟಿಗೆ 37 ಎಕರೆ ಬೆಲೆಬಾಳುವ ಭೂಮಿ ಗಿಟ್ಟಿಸಿದವನು built operate transfer ಅಂದರೆ BOT ನಿಬಂಧನೆಗೊಳಪಟ್ಟು 30 ವರ್ಷದ ನಂತರವೂ ಇಡೀ ಆಸ್ತಿಯನ್ನು ಸರ್ಕಾರಕ್ಕೆ ವಾಪಸ್ಸು ಮಾಡುತ್ತಾನೆ ಎಂದೇ ಇಟ್ಟುಕೊಳ್ಳೋಣ. ಅದರಿಂದ ಸರ್ಕಾರಕ್ಕಾಗುವ ಲಾಭ ಸೊನ್ನೆಯೇ!

ಏಕೆಂದರೆ ಒಮ್ಮೆ ಅಪಾರ್ಟ್‌ಮೆಂಟ್ ಕಟ್ಟಿಸಿ ಫ್ಲಾಟ್ ವಿಂಗಡಿಸಿ ಮಾರಿದಾತ ಅದನ್ನು ಜೀವನಪರ್ಯಂತದ ಲೀಸ್‌ಗೇ ಮಾರುತ್ತಾನೆ. ಕಾಂಪ್ಲೆಕ್ಸ್ ಕಟ್ಟಿಸಿ ಶಾಪಿಂಗ್ ಮಾಲ್ ಮಾಡಿದರೂ ಅದನ್ನು ತೊಂಭತ್ತು ವರ್ಷದ ಗುತ್ತಿಗೆಗೆ ಕೊಟ್ಟನೆಂದರೆ 30 ವರ್ಷದ ನಂತರ ಸರ್ಕಾರಕ್ಕೆ ಇಡೀ ಆಸ್ತಿ ಹಸ್ತಾಂತರವಾದರೂ ಫ್ಲಾಟ್ ಖರೀದಿಸಿದವರನ್ನು ಖಾಲಿ ಮಾಡಿಸಲಾಗದು. ಸರ್ಕಾರದ ಕೆಲ ಭ್ರಷ್ಟರಿಗಿಷ್ಟು ತಿನ್ನಿಸಿ ಕೋರ್ಟಿಗೆ ಹೋದನೆಂದರೆ 30 ವರ್ಷದ ನಂತರವೂ ಅದೇ ಗುತ್ತಿಗೆಯನ್ನು ನವೀಕರಿಸಲೇಬೇಕು.

ಇದರಿಂದ ಯಡ್ಡಿಗೋ ಬಿಜೆಪಿಗೋ ಇನ್ನೂರು ಕೋಟಿ ಲಂಚ ಹುಟ್ಟಬಹುದೇ ಹೊರತು, ಅಡ್ವಾಣಿಯ ಸಂಬಂಧಿ ಇಮಾಮಿ ಕಂಪನಿಯ ಮಾರ್ವಾಡಿಗೆ ಇಡೀ ಆಸ್ತಿ ದಕ್ಕಬಹುದೇ ಹೊರತು ಸರ್ಕಾರಕ್ಕಾಗಲಿ, ಕನ್ನಡಿಗರಿಗಾಗಲಿ ಅಥವಾ ಸ್ವತಃ ಮೈಸೂರು ಸೋಪ್ಸ್‌ಗಾಗಲಿ ಇದರಿಂದ ಏನು ಲಾಭ?

ಇದಕ್ಕೆ ಮುಖ್ಯಮಂತ್ರಿ ಯಡ್ಡಿಯ ಬಳಿ ಉತ್ತರವುಂಟೆ? ■

ಮೆಂಟಲ್ ಮಂತ್ರಿ ಬಚ್ಚೇಗೌಡ



ಮಾನ್ಯ ಯಡಿಯೂರಪ್ಪನವರ ಸಂಪುಟ ಸಹೋದ್ಯೋಗಿ ಕಾರ್ಮಿಕ ಸಚಿವ ಬಚ್ಚೇಗೌಡನಿಗೆ ಪೂರ್ತಿ ತಲೆ ಕೆಟ್ಟಿರುವಂತೆ ಕಾಣುತ್ತಿದೆ.

ಈತ ಹೇಳಿಕೊಳ್ಳಲಿಕ್ಕೆ ಕ್ಯಾಬಿನೆಟ್ ಸಚಿವ. ಕಳೆದ 30 ವರ್ಷಗಳಿಂದ ರಾಜಕಾರಣ ಮಾಡಿದ್ದಾನೆ. ಆದರೆ ಎಲ್ಲಿ, ಯಾವಾಗ, ಏನು ಮಾತನಾಡಬೇಕು ಎಂಬ ಕನಿಷ್ಠ ತಿಳಿವಳಿಕೆಯೂ ಇರದ ಮುಠ್ಠಾಳನಂತೆ ಜನರಿಗೆ ಕಾಣಿಸುತ್ತಿದ್ದಾನೆ.

ಜಾತ್ಯತೀತ ದಳದ ದೇವೇಗೌಡ ಮತ್ತವರ ಮಕ್ಕಳ ವಿರುದ್ಧ ಬಿಟ್ಟೂಬಿಡದೆ ಕೀಳು ದರ್ಜೆಯ ಹೇಳಿಕೆ ನೀಡುತ್ತಲೇ ಇರುವ ಬಚ್ಚೇಗೌಡನಲ್ಲಿ ಪ್ರಜಾಪ್ರಭುತ್ವದ ಕನಿಷ್ಠ ಸಭ್ಯಗುಣಗಳು ಉಳಿದಿರುವಂತಿಲ್ಲ. 'ದೇವೇಗೌಡ ಮಾಟ ಮಂತ್ರ ಮಾಡಿ ಒಕ್ಕಲಿಗ ಲೀಡರ್‌ಗಳನ್ನು ಮುಗಿಸಿದ್ದಾರೆ' ಎಂಬುದು ಈ ಅವಿವೇಕಿಯ ಅನುಮಾನ. ಈ ಕುತರ್ಕಕ್ಕೆ ಸಾಕ್ಷಿಯೆಂಬಂತೆ ವೈ.ಕೆ. ರಾಮಯ್ಯ, ಭೈರೇಗೌಡ, ವೆಂಕಟಗಿರಿಗೌಡರ ಸಾವುಗಳನ್ನು ಮಾಟದ ಪರಿಣಾಮ ಎಂಬಂತೆ ಕಲ್ಪಿಸಿಕೊಂಡು ಬೊಗಳಲು ಶುರು ಮಾಡಿದ್ದಾನೆ.



ಅಷ್ಟು ಸಾಲದೆಂಬಂತೆ 'ಗೌಡರೇನಾದರೂ ನನ್ನ ಮೇಲೂ ಮಾಟ ಮಾಡಿಸಿದರೆ ನಾನೂ ಅವರ ಮೇಲೆ ಮಾಟ ಮಾಡಿಸುತ್ತೇನೆ' ಎಂದು ತಿಕ್ಕಲನಂತೆ ಕಿರುಚಿಕೊಂಡಿದ್ದಾನೆ.

ಇದನ್ನೆಲ್ಲಾ ನೋಡಿ ಬೇಸತ್ತ ಮಾಗಡಿ ಶಾಸಕ ಬಾಲಕೃಷ್ಣ 'ಬಚ್ಚಾಗೌಡ'ನೆಂದು ಗೇಲಿ ಮಾಡಿದ್ದರಲ್ಲಿ ನಿಜ ಇದೆಯಾದರೂ ಹೇಳಬೇಕಾದ ವಿಚಾರ ಬೇರೆಯೇ ಇದೆ.

ಅದರಲ್ಲಿ ಮೊದಲನೆಯದು

ಈ ಬಚ್ಚೇಗೌಡ ಮಾದಕದ್ರವ್ಯ ವ್ಯಸನಿ ಎಂಬ ಅನುಮಾನ ಬಹುತೇಕರಿಗಿದೆ. ಇಲಾಖೆ ಸಭೆಗಳಿರಲಿ, ಬಹಿರಂಗ ಸಭೆಯೇ ಆಗಿರಲಿ ಬಚ್ಚೇಗೌಡನ ಸಮೀಪ ಹೋದವರಿಗೆ ಅವನು ಯಾವಾಗಲೂ ಅಮಲಿನಲ್ಲಿರುವವನಂತೆಯೇ ಕಾಣುತ್ತಿದ್ದಾನೆ.

ಅದೇನು ಎಣ್ಣೆ ಏಟೊ? ಗಾಂಜಾ ಪ್ರಭಾವವೋ ಅಥವಾ ಮತ್ತಿನ್ಯಾವ ದುಶ್ಚಟವೋ ಭಗವಂತನೇ ಬಲ್ಲ.

ಇದರ ಜೊತೆಗೆ ಬಚ್ಚೇಗೌಡನಿಗೆ ವಿಪರೀತ ಕಾಯಿಲೆಗಳಿವೆ. ಎಲೆಕ್ಷನ್‌ಗೂ ಮುನ್ನ ಅವನಿಗೆ ಕ್ಯಾನ್ಸರ್ ಆಗಿದೆ ಅನ್ನುತ್ತಿದ್ದರು. ಈಗ ಕಿಡ್ನಿ ಫೇಲ್ ಆಗಿದೆ, ಅಲ್ಲದೆ ಕಾಮಾಲೆಯೂ ಇದೆ ಎನ್ನಲಾಗುತ್ತಿದೆ. ಇದೆಲ್ಲ ದೇವೇಗೌಡರ ದೆಸೆಯಿಂದ ಆಗಿದೆ ಎಂದು ಬಚ್ಚೇಗೌಡ ನಂಬಿಕೊಂಡಿರಲೂಬಹುದು. ಆದರೆ ಮೊದಲಿನಿಂದಲೂ ಪುಂಡಾಟಿಕೆಯ ರಾಜಕೀಯವನ್ನೇ ಮಾಡಿಕೊಂಡು ಬಂದ ಬಚ್ಚೇಗೌಡನಿಗೆ ರಾಜಕೀಯ ಕೊಲೆ, ರಕ್ತದ ವಾಸನೆ, ದೌರ್ಜನ್ಯಗಳ ಹೀನಚರಿತ್ರೆ ಇದೆ. ಹೊಸಕೋಟೆಯ ರಾಜಕೀಯದಲ್ಲಿ ಚಿಕ್ಕೇಗೌಡ, ಕೋಡಳ್ಳಿ ಸೊಣ್ಣಪ್ಪ, ದೈರಿ ಮಂಜುನಾಥ ಹಾಗೂ ಬಚ್ಚೇಗೌಡನಿಂದ ಪ್ರಾಣ ಕಳೆದುಕೊಂಡವರ ಲೆಕ್ಕವೇ ಸಿಗುವುದಿಲ್ಲ.

ಬಚ್ಚೇಗೌಡನ ಮೆಂಟಲ್ ಪ್ರಾಬ್ಲಂನ ಮೂಲ ಇದೇ ಇರಬೇಕು.

ಇನ್ನು ಅಧಿಕಾರದ ವಿಚಾರಕ್ಕೆ ಬಂದರೆ ಯಡ್ಡಿ ಸಂಪುಟದಲ್ಲಿ ಬಚ್ಚೇಗೌಡನಿಗೆ ಸಿಕ್ಕಿರುವುದು ಕಾರ್ಮಿಕ ಖಾತೆ. ಇದಕ್ಕೆ ಅಂತ ಮಹಾನ್ ಕಿಮ್ಮತ್ತೇನೂ ಇಲ್ಲ, ಹಾಗಾಗಿ ದೇವೇಗೌಡರನ್ನು ಚೆನ್ನಾಗಿ ಬೈಯ್ದರೆ ಚೆಡ್ಡಿಗಳು ಒಂದೊಳ್ಳೆ ಖಾತೆ ಕೊಟ್ಟರೂ ಕೊಡಬಹುದೆಂಬ ವಕ್ರಬುದ್ಧಿಯೂ ಬಚ್ಚೇಗೌಡನಿಗಿರಬಹುದು. ಆದರೆ ಬಚ್ಚೇಗೌಡನ ಕೆಟ್ಟ ನೀಚ ಮಾತುಗಳು ಸ್ವತಃ ಯಡ್ಡಿಗೇ ಅಸಹ್ಯ ಉಂಟು ಮಾಡುತ್ತಿವೆ.

ಪುಂಡ ರಾಜಕಾರಣಿ ಬಚ್ಚೇಗೌಡ ಕಳೆದ ಮೇನಲ್ಲಿ ಎಲೆಕ್ಷನ್ ಗೆದ್ದ ನಂತರ ನಂದಗುಡಿಯಲ್ಲಿ ಯಾವುದೋ ಸಭೆಯಲ್ಲಿ "ಯಾರ್‍ಯಾರು ನನಗೆ ಓಟು ಹಾಕಿಲ್ಲ ಅಂತ ಗೊತ್ತಾಗಿದೆ. ಅಂತೋರಿಗೆ ಪಾಠ ಕಲಿಸ್ತೀನಿ" ಅಂತ ಧಮಕಿ ಹಾಕಿದ್ದ ಶುದ್ಧ ಪುಂಡನೊಬ್ಬ ಆಡಬಹುದಾದ ಮಾತಲ್ಲವಾ ಇದು. ಇವನೆಂಥ ಮಾನಗೆಟ್ಟವನೆಂದರೆ 'ದುಡ್ಡು ಕೊಟ್ಟು ಓಟು ಹಾಕಿಸಿಕೊಂಡೆ' ಎಂತಲೂ ಬೊಗಳಿದ್ದ.

ಇಂಥ ನಪ್ಪಲಾಲ್ ಬಚ್ಚೇಗೌಡ ಹೊಸಕೋಟೆ ಶಾಸಕನಾಗಿ ಈಗ ಮಂತ್ರಿಯೂ ಆಗಿದ್ದಾನೆ. ಕೈಗೆ ಅಧಿಕಾರ ಬಂದು ಜೊತೆಗೆ ಕೇಸರಿ ಅಫೀಮು ತಿಂದ ಕಾರಣಕ್ಕೋ ಏನೋ ಹೊಸಕೋಟೆಯ ಹಳ್ಳಿಗಾಡಿನ ಮುಸ್ಲಿಮರ ಮೇಲೆ ತನ್ನ ಚೇಲಾಗಳನ್ನು ಛೂಬಿಟ್ಟು ದೊಂಬಿ ಮಾಡಿಸುತ್ತಿದ್ದಾನೆ. ಕಳೆದ ಅಕ್ಟೋಬರ್ 5 ನೇ ತಾರೀಖು ಚಿಕ್ಕೊಂಡಹಳ್ಳಿಯ ಅಜೀಜ್ ಎಂಬುವರ ಮನೆಗೆ ನುಗ್ಗಿದ ಗಜೇಂದ್ರ, ಶ್ರೀನಿವಾಸ ಮುಂತಾದ ಬಚ್ಚೇಗೌಡನ ಗೂಂಡಾ ಭಂಟರು ಹಲ್ಲೆ ನಡೆಸಿ ಮನೆ ದೋಚಿ ಹೋಗಿದ್ದಾರೆ.


ಕೈಲಿರುವ ಖಾತೆಯ ಕಿಮ್ಮತ್ತು ಕಡಿಮೆಯದ್ದೇ ಆದರೂ ಕಳ್ಳತನದಲ್ಲಿ ಬಚ್ಚೇಗೌಡನೇನು ಕಮ್ಮಿಯಿಲ್ಲ-ತನ್ನ ಸ್ವಂತೂರು ಬೆಂಡಿಗಾನಹಳ್ಳಿಯ ಅರಣ್ಯ ಇಲಾಖೆಗೆ ಸೇರುವ 53 ಎಕರೆಗೆ ನಕಲಿ ದಾಖಲೆ ರೆಡಿ ಮಾಡಿ ಇತ್ತೀಚೆಗೆ ಬೇಲಿ ಹಾಕಿಕೊಂಡಿದ್ದಾನೆ. ಇನ್ನೊಬ್ಬ ಚಿಕ್ಕ ವೆಂಕಟೇಗೌಡನೆಂಬುವನು-ಇವನು ಬಚ್ಚೇಗೌಡನ ಚಿಕ್ಕಪ್ಪ-ನಂದಗುಡಿ SEZ ಹತ್ತಿರ 25 ಎಕರೆ ಅರಣ್ಯ ಭೂಮಿ ನುಂಗಿದ್ದಾನೆ.

ಹೀಗೆ ತಿಪ್ಪೇಹುಳುವಿನಂತೆ ಮೈತುಂಬಾ ಗೂಂಡಾಗಿರಿ, ಭ್ರಷ್ಟಾಚಾರ, ರಕ್ತಪಾತದ ಹೊಲಸು ನಾರುವ ಬಚ್ಚೇಗೌಡನಂಥವನೂ ಬಿಜೆಪಿಗಳಿಗೆ ಹೇಳಿ ಮಾಡಿಸಿದ ಜೊತೆಗಾರನಾಗಿದ್ದಾನೆ ಬಿಡಿ.

■ ಈಶ

ಯಡ್ಡಿ ಲಿಂಗಾಯತ ಲೀಡರ್‌ಗಳನ್ನು ಮುಗಿಸಲಿಲ್ಲವೆ?

ಇದು ತರ್ಕಕ್ಕೋಸ್ಕರ ತರ್ಕ ಎನ್ನುವ ಮಾತಲ್ಲ.



ದೇವೇಗೌಡರು ಒಕ್ಕಲಿಗ ಲೀಡರ್‌ಗಳನ್ನು ತುಳಿದರು ಎಂದು ಚೆಡ್ಡಿಗಳು ಬಚ್ಚೇಗೌಡನ ಮೂಲಕ ಹೇಳಿಸುತ್ತಿದ್ದಾರಲ್ಲವೆ. ಹಾಗಾದರೆ ಅದೇ ಚೆಡ್ಡಿಗಳ ನಾಯಕ ಯಡ್ಡಿ ಲಿಂಗಾಯತ ನಾಯಕರನ್ನೇನು ಹತ್ತಿರ ಕರೆದು ಬೆಳೆಸಿ ಮೆರೆಸುತ್ತಿದ್ದಾರಾ ಅಂತ?

ರಾಜ್ಯ ಬಿಜೆಪಿಗೆ ದಿಕ್ಕುದೆಸೆ ಒಂದೂ ಇರದಿದ್ದಾಗ ನಾಯಕತ್ವ ವಹಿಸಿಕೊಂಡು ಪಾರ್ಟಿ ಕಟ್ಟಿದವರು ಬಿ.ಬಿ. ಶಿವಪ್ಪ, ಬಸವರಾಜ ಪಾಟೀಲ್ ಸೇಡಂ, ಅವರೀಗ ಎಲ್ಲಿದ್ದಾರೆ. ತುಮಕೂರಿನ ಮಲ್ಲಿಕಾರ್ಜುನಯ್ಯ, ಚಿಕ್ಕಮಗಳೂರಿನ ಸಂಸದ ಶ್ರೀಕಂಠಯ್ಯ, ಇನ್ನೋರ್ವ ಸಂಸದ ಬಸವನಗೌಡ ಯತ್ನಾಳ್ ಇವತ್ತು ಯಾವ ಸ್ಥಿತಿ ತಲುಪಿದ್ದಾರೆ?

ಅದು ಹೋಗಲಿ ಬಿಡಿ, ಯಡ್ಡಿಗಿಂತ ಪ್ರಬಲ ಲಿಂಗಾಯತ ನಾಯಕರೆನಿಸಿಕೊಂಡಿದ್ದ ಜಗದೀಶ್ ಶೆಟ್ಟರ್ ಯಾಕಿವತ್ತು ಮೂಲೆಗುಂಪಾಗಿದ್ದಾರೆ?

ಇವರನ್ನೆಲ್ಲಾ ತುಳಿದು ಹಾಕಿದ್ದು ದೇವೇಗೌಡರಾ ಅಥವಾ ಯಡಿಯೂರಪ್ಪನಾ?


ಮನೋಹರ


ರವಿ


ದೇವಣ್ಣ

ನಕ್ಸಲ್ ಎನ್‌ಕೌಂಟರ್
ವ್ಯರ್ಥ ಬಲಿದಾನ!

■ ಪಾರ್ವತೀಶ

ಇದು ರುದ್ರ ನಾಟಕದ ಇನ್ನೊಂದು ದೃಶ್ಯದಂತಿದೆ.

ಕಳೆದ ಬುಧವಾರದ (ನವೆಂಬರ್19) ಬೆಳಗಿನ ಜಾವದಲ್ಲೇ ಹೀಗೊಂದು ನಕ್ಸಲ್ ಎನ್‌ಕೌಂಟರ್ ನಡೆಯಿತಂತೆ ಎಂಬ ಸುದ್ದಿ ರಾಜ್ಯಾದ್ಯಂತ ಹರಡಿತ್ತು, ನಾಡಿನ ಪ್ರಗತಿಪರ ವಲಯದಲ್ಲಿ ಸಾಕಷ್ಟು ಚಿರಪರಿಚಿತನಾಗಿದ್ದ ಸೊರಬದ ಮನೋಹರ ಈ ಎನ್‌ಕೌಂಟರ್‌ನಲ್ಲಿ ಮರಣದಂಡನೆಗೆ ಗುರಿಯಾಗಿರಬಹುದೆಂದು ಸುದ್ದಿಯೂ ಇತ್ತು.

ಕೊನೆಗದು ನಿಜವೇ ಆಗಿ ಹೋಗಿದೆ.

ಮನೋಹರ ಅಷ್ಟೇ ಅಲ್ಲ, ಮೂಡಿಗೆರೆಯ ದೇವಣ್ಣನೆಂಬ ಅಪರಂಜಿಯಂತ ತರುಣ, ರವಿಯೆಂಬ ಇನ್ನೂ ಎಳೆತನದ ದಿಟ್ಟ ಪ್ರಾಮಾಣಿಕ ಹೋರಾಟಗಾರರನ್ನು ಸರ್ಕಾರ ಹೊಸಕಿ ಹಾಕಿದೆ.

ಕಾನೂನನ್ನು ಮೀರಿ ತಾವೇ ತಮ್ಮದೇ ಕಾನೂನನ್ನು (ವ್ಯವಸ್ಥೆ) ಸೃಷ್ಟಿಸಲು ಹೊರಟಿದ್ದರೆಂಬ ಒಂದು ಆರೋಪ ಹೊರತುಪಡಿಸಿ ಇವರ ಮೇಲೆ ಬೇರಿನ್ಯಾವ ತಪ್ಪುಗಳನ್ನೂ ಹೊರಿಸುವಂತಿರಲಿಲ್ಲ. ಯಾರೇ ತಂದೆ ತಾಯಿ ಹೆಮ್ಮೆಪಡುವಂಥ ಮಕ್ಕಳಾಗಿದ್ದ, ಯಾವುದೇ ಹಳ್ಳಿ ಅಥವಾ ಸಮಾಜ ಪ್ರೀತಿ ಅಕ್ಕರೆಗಳಿಂದ ಸಲಹಿ ಕಾಪಾಡಿಕೊಳ್ಳಬೇಕಾದ 'ದೊಡ್ಡ ಪದಾರ್ಥ'ವಾಗಿದ್ದ ಈ ತರುಣರ ಸಾವು ನಾಡಿನ ಸಾವಿರಾರು ಸಹೃದಯರ ಮನ ಕಲಕಿಬಿಟ್ಟಿದೆ.

ಇದೇ ಎನ್‌ಕೌಂಟರ್‌ನಲ್ಲಿ ಹತ್ಯೆಯಾಗಿರುವ ಎಸ್‌ಟಿಎಫ್‌ನ ಕಮಾಂಡೋ ಪೇದೆ ಗುರುಪ್ರಸಾದ್ ಸಾವು ಕೂಡ ಅಷ್ಟೇ ವಿಷಾದಕರವಾಗಿದೆ. ಯಾವುದೇ ನಿಷ್ಠಾವಂತ ಪೊಲೀಸ್ ಕಾನ್ಸ್‌ಟೆಬಲ್‌ಗೆ ಇರಬಹುದಾದ ಸಾಧಾರಣ ಸ್ಥಿತಿಗತಿಯ ಕುಟುಂಬದ ಗುರುಪ್ರಸಾದ್ ಒಳಿತು ಕೆಡುಕಿನ ನಡುವಿನ ಸಂಘರ್ಷದ ನಡುವೆ ಸಿಕ್ಕು ಪ್ರಾಣ ಕಳೆದುಕೊಂಡಿದ್ದಾನೆ.

ನಕ್ಸಲೈಟ್ ಗೆರಿಲ್ಲಾಗಳ ಪ್ರತಿದಾಳಿಗೆ ಬಲಿಯಾಗುತ್ತಿರುವ ಎರಡನೇ ಪೊಲೀಸ್ ಸಿಬ್ಬಂದಿಯಾಗಿದ್ದಾರೆ ಈ ಗುರುಪ್ರಸಾದ್. ಕಳೆದ 2007ರ ಜುಲೈನಲ್ಲಿ ಆಗುಂಬೆ ಹತ್ತಿರದ ಎಣ್ಣೆಹಕ್ಕಬೈಲಿನಲ್ಲಿ ನಡೆದ ಇನ್ನೊಂದು ಚಕಮಕಿಯಲ್ಲಿ ಆಗುಂಬೆ ಠಾಣೆಯ ಎಎಸ್‌ಐ ವೆಂಕಟೇಶ್ ಪ್ರಾಣ ತೆತ್ತಿದ್ದರು.

ಇವತ್ತಿನ ಬರೋಬ್ಬರಿ ಲೆಕ್ಕಾಚಾರದಲ್ಲಿ ಹೇಳಬೇಕೆಂದರೆ ಮಲೆನಾಡಿನಲ್ಲಿ ಮಾವೋವಾದಿಗಳ presence ಬೆಳಕಿಗೆ ಬಂದು ಇಲ್ಲಿಗೆ ಆರೇಳು ವರ್ಷಗಳಾಗಿವೆ. ಈ ಅವಧಿಯಲ್ಲಿ ಹನ್ನೊಂದು ನಕ್ಸಲರೂ, ನಾಲ್ವರು ಸಹಾನುಭೂತಿಪರರು, ಒಂಭತ್ತು ಪೊಲೀಸರೂ, ಪೊಲೀಸ್ ಪರ ಅಥವಾ ಜನವಿರೋಧಿಗಳೆನಿಸಿಕೊಂಡಿದ್ದ ನಾಲ್ವರ ಜೀವ ಹೋಗಿದೆ. ಅಂದರೆ ಒಟ್ಟಾರೆ ಇಪ್ಪತ್ತೆಂಟು ಸಾವುಗಳು!

ಈ ಕ್ಷಣದಲ್ಲಿ ನಿಂತು ಹಿಂತಿರುಗಿ ನೋಡಿದರೆ ಹಾಗೆಯೇ ಭವಿಷ್ಯವನ್ನು ಕಲ್ಪಿಸಿಕೊಂಡರೆ ಈ ರುದ್ರ ನಾಟಕದಲ್ಲಿ ಇನ್ನಷ್ಟು ಹಿಂಸೆ, ರಕ್ತಪಾತದ ದೃಶ್ಯಗಳು ಅನಾವರಣಗೊಳ್ಳಲೂಬಹುದು ಎನಿಸುತ್ತದೆ.

ಅದು ಯಾಕೆಂದರೆ ಮಾವಿನಹೊಲ ಎನ್‌ಕೌಂಟರ್ ನಡೆದ ಎರಡನೇ ದಿನವೇ ಕುಂದಾಪುರದ ಅಮಾಸೆಬೈಲಿಗೆ ಹೋಗಿರುವ 15 ನಕ್ಸಲರ ತಂಡ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸುವ ಬ್ಯಾನರ್ ಹಾಕಿ ಕರಪತ್ರ ಹಂಚಿ ಹೋಗಿದ್ದಾರೆ. ಮನೋಹರ ಮತ್ತಿತರ ಸಂಗಾತಿಗಳ ಸಾವಿನಿಂದ ತಾವು ವಿಚಲಿತರಾಗಿಲ್ಲ ಎಂದು ಪ್ರದರ್ಶಿಸಿಕೊಳ್ಳುವ, ಧೈರ್ಯ ಪ್ರದರ್ಶಿಸುವ ಉದ್ದೇಶ ಇದಾಗಿರಬಹುದು. ಆದರೆ ನಕ್ಸಲರ ಧೈರ್ಯದ ಬಗ್ಗೆ ಯಾರಿಗೆ ಅನುಮಾನ ಇದೆ? ಇವತ್ತು ಹೆಚ್ಚೂಕಡಿಮೆ 30 ಗೆರಿಲ್ಲಾಗಳಿರಬಹುದಾದ ನಕ್ಸಲ್ ಚಳವಳಿ ವಿರುದ್ಧ ಒಂದೂವರೆ ಸಾವಿರದಷ್ಟು ಸಶಸ್ತ್ರ ಪೊಲೀಸ್ ಕಮ್ಯಾಂಡೋಗಳು ಅಖಾಡಕ್ಕಿಳಿದಿದ್ದಾರೆ. ಮಲೆನಾಡಿನ ಹದಿನೈದಿಪ್ಪತ್ತು ಸಾವಿರ ಜನಸಂಖ್ಯೆಯ ನಕ್ಸಲರ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ನೂರಾರು ಪೊಲೀಸ್ ಮಾಹಿತಿದಾರರು ಹುಟ್ಟಿಕೊಂಡಿದ್ದಾರೆ. ರಸ್ತೆ, ಫೋನುಗಳಂತೂ ಎಲ್ಲೆಡೆ ಇದೆ. ಇಂತವರಿಂದ ನಿತ್ಯ ಎದುರಾಗಬಹುದಾದ ಪ್ರಾಣಾಪಾಯದ ಹಂಗು ತೊರೆದು ಸಭೆ ನಡೆಸಿ ಕರಪತ್ರ ವಿತರಿಸಿ ಹೋಗುವುದೆಂದರೆ ಸುಲಭವಲ್ಲ. ಆದರೆ ಇನ್ನೊಂದು ಮಗ್ಗುಲಿನಿಂದ ಇವೇ ಚಟುವಟಿಕೆಗಳನ್ನು ನೋಡಿ ಕೇವಲ ಕರಪತ್ರ ವಿತರಿಸಿ ಆದಿವಾಸಿ ರೈತರೊಂದಿಗೆ ಮಾತಾನಾಡಲೂ ಹೋರಾಟಗಾರನೊಬ್ಬ ತನ್ನ ಪ್ರಾಣವನ್ನೇ ಪಣಕ್ಕಿಡಬೇಕೇ ಎನ್ನುವ ಪ್ರಶ್ನೆ ಬಾರದಿರದು.

ಮನೋಹರ, ದೇವಣ್ಣ, ರವಿ ಪ್ರಾಣ ನೀಗಿಕೊಳ್ಳಬೇಕಾಗಿ ಬಂದಿದ್ದೂ ಇದೇ ಸಂದರ್ಭದಲ್ಲಿ.

ಪೊಲೀಸರು ಮೊದಲೇ ತಯಾರು

ನವಂಬರ್ 18-19ರ ಮಂಗಳವಾರ ನಡುರಾತ್ರಿ ಈ ಎನ್‌ಕೌಂಟರ್ ನಡೆಯಿತೆಂದು ಪೊಲೀಸರು ಹೇಳುತ್ತಿದ್ದಾರಾದರೂ ಈ ಹತ್ಯೆಗಳು ಮಂಗಳವಾರ ರಾತ್ರಿ ಹತ್ತು ಗಂಟೆಗೇ ನಡೆದಿರುವ ಸಾಧ್ಯತೆಗಳಿವೆ. ಮನೋಹರ ಭೂಗತರಾದ ನಂತರ ನಕ್ಸಲರು ತಮ್ಮ ಮೇರುತಿ ದಳವನ್ನು ಪುನರ್‌ರಚಿಸಿ ಮನೋಹರ, ದೇವಣ್ಣ, ರವಿ, ಕನ್ಯಾಕುಮಾರಿ ಹಾಗೂ ಮತ್ತೊಬ್ಬರನ್ನು ಈ ದಳಕ್ಕೆ ನಿಯೋಜಿಸಿದ್ದರು ಎನ್ನಲಾಗಿದೆ. ಮೂಡಿಗೆರೆ, ಕಳಸ, ಹೊರನಾಡು ಪ್ರಾಂತ್ಯಗಳಲ್ಲಿ ಸಂಚರಿಸುತ್ತಿದ್ದ ಈ ದಳ ಕಳೆದ ಮಂಗಳವಾರ ರಾತ್ರಿ ಹೊರನಾಡಿಗೆ ಕೂಗಳತೆಯ ದೂರದಲ್ಲಿರುವ ಮಾವಿನಹೊಲಕ್ಕೆ ಬರುವುದಿತ್ತು, ಮತ್ತದು ಅದೇ ದಿನ ಸಂಜೆಯೇ ಪೊಲೀಸರಿಗೆ ಗೊತ್ತಾಗಿತ್ತು, ಹಿಂದಿನ 2 ದಿನದಿಂದಲೂ ANF ಬೆಟಾಲಿಯನ್ ಒಂದು ಅಲ್ಲೇ ಬೀಡುಬಿಟ್ಟಿತ್ತು, ಅಂದು ಸಂಜೆ 5 ಗಂಟೆ ಸುಮಾರಿಗೆ ಹೊರನಾಡಿನ ಪೊಲೀಸರ ಗಡಿಬಿಡಿಯ ಓಡಾಟ, ಅಂಬುಲೆನ್ಸ್ ಕರೆಸಿ ರೆಡಿಮಾಡಿಟ್ಟುಕೊಂಡಿದ್ದನ್ನು ಸ್ಥಳೀಯರು ಗಮನಿಸಿದ್ದಾರೆ. ಇದರ ಸುಳಿವೂ ಇರದ ಮೇರುತಿ ದಳದವರು ಮಾವಿನಹೊಲಕ್ಕೆ ಹೋಗಿ ಸಭೆ ನಡೆಸಿ ಕರಪತ್ರ ವಿತರಿಸಿ ಸಿಕ್ಕಷ್ಟು ಊಟಮಾಡಿ ಮರಳಿ ಕಾಡಿನ ಹಾದಿ ಹಿಡಿದಿದ್ದಾರೆ. ಬಹುಶಃ ಆಗ ರಾತ್ರಿ ಒಂಬತ್ತೂವರೆ. ಅಲ್ಲಿಂದ ಎನ್‌ಕೌಂಟರ್ ನಡೆದ ಸ್ಥಳ ತಲುಪಲು ಕೇವಲ ಇಪ್ಪತ್ತು ನಿಮಿಷ ಸಾಕೆಂಬಂತೆ ಇದೆ. ಅಷ್ಟೇ ಅಲ್ಲ ಅದೇ ರಾತ್ರಿ ಹತ್ತುಗಂಟೆ ಸುಮಾರಿಗೆ ಮಾವಿನಹೊಲದ ಕೆಲವರಿಗೆ ಗುಂಡಿನ ಸದ್ದೂ ಕೇಳಿಸಿದೆ.


ಪೇದೆ ಗುರುಪ್ರಸಾದ್

ಏನಾಗಿತ್ತೆಂದರೆ ಮನೋಹರ ತಂಡದವರ ಓಡಾಟದ ಬಗ್ಗೆ ಪಕ್ಕಾ ಮಾಹಿತಿ ಹೊಂದಿದ್ದ ಪೊಲೀಸರು ದಳ

▶▶▶13

ನಕ್ಸಲರ ಬಿಕ್ಕಟ್ಟುಗಳು

ಸಾಕಷ್ಟು ಪ್ರತಿರೋಧದ ಶಕ್ತಿ ಗಳಿಸುವ ಮುನ್ನವೇ ದೊಡ್ಡ ಸಂಖ್ಯೆಯಲ್ಲಿ ಪೊಲೀಸರನ್ನು ಕದನಕ್ಕೆ ಆಹ್ವಾನಿಸಿಕೊಂಡಿರುವುದು, ಜನಮಾನಸದ ಮನಸ್ಸಿನಲ್ಲಿ ನಕ್ಸಲರೆಂದರೆ ಜನಪರ ಕಾಳಜಿಗಳಿರುವ ಕ್ರಾಂತಿಕಾರಿ ಹೋರಾಟಗಾರರೆಂಬ ಅಭಿಪ್ರಾಯ ನೆಲೆಗೊಳ್ಳುವ ಮೊದಲೇ ಜನಸಮೂಹದಿಂದ Isolate ಆಗಿರುವುದು, ಕಾನೂನುಬದ್ಧ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕವೂ ಕೆಲಸ ಮಾಡಬಹುದಾದ ಎಲ್ಲಾ ಅವಕಾಶಗಳನ್ನು ತಾವೇ ತಮ್ಮ ಕೈಯಾರೆ ಇಲ್ಲವಾಗಿಸಿಕೊಂಡಿರುವುದು. ಈ ಮೇಲಿನ ಕಾರಣಗಳಿಂದಾಗಿಯೇ ಪಕ್ಷ ವಿಭಜನೆಯಾಗಿ ಇನ್ನಷ್ಟು ಅಸಹಾಯಕತೆ ಅನುಭವಿಸುತ್ತಿರುವುದು. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಕರ್ನಾಟಕದ ಮಾವೋವಾದಿಗಳ ಬಿಕ್ಕಟ್ಟುಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಹಾಗೆ ನೋಡಿದರೆ ಇದು ಕೇವಲ ಕರ್ನಾಟಕದ ಪರಿಸ್ಥಿತಿ ಮಾತ್ರವಲ್ಲ, ಇಂಡಿಯಾದ ಬಹುತೇಕ ಮಾವೋ ಚಳವಳಿ ಇದ್ದಡೆಯಲ್ಲೆಲ್ಲಾ ಇದೇ ಪರಿಸ್ಥಿತಿ ಉದ್ಭವಿಸಿವೆ.

ನೆರೆಯ ಆಂಧ್ರದ ಉತ್ತರ ತೆಲಂಗಾಣವನ್ನೇ ಉದಾಹರಣೆಯಾಗಿ ನೋಡಿದರೆ, ಎಂಟು ಜಿಲ್ಲೆಗಳಲ್ಲಿ ಹರಡಿಕೊಂಡಿದ್ದ ನಕ್ಸಲ್ ಚಳವಳಿ ಕೇವಲ ಎಂಟು ವರ್ಷಗಳ ಹಿಂದೆ ಗೆರಿಲ್ಲಾ ಜೋನ್ ಆಗಿದ್ದು ಮುಂದಿನ ಬೇಸ್ ಏರಿಯಾ ಎಂದೇ ಬಿಂಬಿತವಾಗಿತ್ತು, ಆದರಿವತ್ತು ಅಲ್ಲಿ ನಕ್ಸಲ್ ಹೋರಾಟದ ಶೇಷವೂ ಉಳಿದಿಲ್ಲ, ನಕ್ಸಲರ ಇನ್ನೊಂದು ಶಕ್ತಿಕೇಂದ್ರವಾಗಿದ್ದ ದಂಡಕಾರಣ್ಯ ಪ್ರದೇಶದಲ್ಲಿ ಸರ್ಕಾರಿ ಪಡೆಗಳು ಸಾಲ್ವಾಂಜುಡುಂ ದಳ ರಚಿಸಿ ಆದಿವಾಸಿಗಳನ್ನೇ ನಕ್ಸಲರ ವಿರುದ್ಧ ಎತ್ತಿಕಟ್ಟಿದ್ದಾರೆ. ಒಂದು ಜಾರ್ಖಂಡ್ ಇನ್ನೊಂದು ಛತ್ತೀಸ್‌ಗಡದ ಕೆಲ ಏರಿಯಾ ಬಿಟ್ಟರೆ ನಕ್ಸಲರ ಭದ್ರನೆಲೆ ಎನ್ನಬಹುದಾದ ಸ್ಥಳಗಳೇ ಇಂದು ಉಳಿದಿಲ್ಲ. ಇದರರ್ಥ ಜನರಿಗೆ ನಕ್ಸಲರ ಬಗ್ಗೆ ಆಶಾವಾದ ನಂಬಿಕೆ ಇಲ್ಲ ಎಂದಲ್ಲ, ಆದರೆ ಅಂತಾ ನಂಬಿಕೆ ಬೆಂಬಲಗಳು ತಮ್ಮ ಪ್ರಾಣಕ್ಕೇ ಆಪತ್ತು ತರುತ್ತವೆಂದಾದರೆ, ಯಾವನೇ ಸಾಮಾನ್ಯ ಮನುಷ್ಯ ಹೇಗೆ ಹಿಂಜರಿಯುತ್ತಾನೋ ಅದೇ ಈಗ ಕರ್ನಾಟಕದಲ್ಲೂ ಕಾಣುತ್ತಿದೆ.


ಇಷ್ಟಕ್ಕೂ ಮಾರ್ಕ್ಸಿಸ್ಟ್ ವಲಯಗಳಿಂದಲೇ ನಕ್ಸಲರ ಈ ಗೆರಿಲ್ಲಾ ಜೋನ್, ಬೇಸ್ ಏರಿಯಾ ಇವೇ ಮುಂತಾದ ಭವಿಷ್ಯದ ಯುದ್ಧತಂತ್ರಗಳ ಬಗ್ಗೆ ಅನೇಕ ಪ್ರಶ್ನೆ ಅನುಮಾನಗಳಿವೆ. ಮೂಲಭೂತವಾಗಿ ಇವೆಲ್ಲಾ 1949ರ ಚೀನಾ ಕ್ರಾಂತಿಯ ಪ್ರಕ್ರಿಯೆಯಲ್ಲಿ ಮಾವೋತ್ಸೆ ತುಂಗ್ ಹುಡುಕಿದ ಪರಿಹಾರಗಳಾಗಿದ್ದವು. ಆದರೆ 2008ರಲ್ಲಿ ಭಾರತ 1949ರ ಚೀನಾಗಿಂತ ಏಕದಂ ಬೇರೆಯೇ ಆಗಿಲ್ಲವೇ ಎಂಬ ಪ್ರಶ್ನೆಗಳಿವೆ.

ಭಾರತವನ್ನು ಬದಲಾಯಿಸಲು ಚೀನಾ ಮಾಡಲನ್ನೇ ಯಾಕೆ ಕುರುಡು ಕುರುಡಾಗಿ ಅನುಸರಿಸಬೇಕೆಂಬ ಭಿನ್ನಾಭಿಪ್ರಾಯಗಳೂ ಇವೆ.

ಆದರೆ ಕಳೆದ ಮೂರ್ನಾಲ್ಕು ದಶಕಗಳಿಂದ ಬೇಸ್ ಏರಿಯಾ, ಗೆರಿಲ್ಲಾ ಜೋನ್‌ಗಳೆಂಬ ಒಂದೇ ಸೂತ್ರದ ದಿಕ್ಕಿನಲ್ಲಿ ಸರಿ-ತಪ್ಪು ಪಾಸು-ಫೇಲುಗಳನ್ನು ಮೌಲ್ಯಮಾಪನ ಮಾಡದೆ ಮಾವೋವಾದಿಗಳು ಹಠದ ದಾರಿ ಹಿಡಿದಿದ್ದಾರೆ. ಹುತಾತ್ಮರ ಪಟ್ಟಿ ಬೆಳೆಯುತ್ತಲೇ ಇದೆ. ಈ ಪ್ರಕ್ರಿಯೆಯಲ್ಲಿ ಬರೀ ಕರ್ನಾಟಕದ ಜನ ಮಾತ್ರವಲ್ಲ, ಇಡೀ ಭಾರತದ ಪ್ರಜೆಗಳೇ ಮೂಕಪ್ರೇಕ್ಷಕರಾಗಿ ಉಳಿದುಬಿಟ್ಟಿದ್ದಾರೆ.

ಈ ಬಿಕ್ಕಟ್ಟುಗಳಿಂದ ಹೊರಬರಲು, ನಿರರ್ಥಕ ಬಲಿದಾನಗಳಿಂದ ನಕ್ಸಲರನ್ನು ಪಾರುಮಾಡಲು ಸಂವಾದ ನಡೆಯಬೇಕಷ್ಟೇ? ■

ಮನೋಹರ ಭೂಗತನಾಗಿದ್ದೇಕೆ?



ಕ್ರಾಂತಿಕಾರಿ ಹೋರಾಟ ನಡೆಸಲು ಎಂಬ ರೆಡಿಮೆಡ್ ಉತ್ತರ ಇದಕ್ಕಿದ್ದೇ ಇರದೆ. ಆದರೆ ಕ್ರಾಂತಿಕಾರಿ ಹೋರಾಟ ಎಂದರೆ ಕಾಡಿಗೆ ಹೋಗಿ ಗನ್ ಹಿಡಿದು ಗೆರಿಲ್ಲಾ ಆಗುವುದು ಮಾತ್ರವಾ? ಸಮಾಜದ ಮುಖ್ಯವಾಹಿನಿಯೊಳಗೇ ಜನರಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವ, ಅವರನ್ನು ವ್ಯವಸ್ಥೆಯ ಕ್ರೌರ್ಯ, ಅಸಮಾನತೆಗಳ ವಿರುದ್ಧ ಹೋರಾಟಕ್ಕೆ ಸಜ್ಜುಗೊಳಿಸುವ ಕೆಲಸ ಮುಂದೊಂದು ದಿನ ಸಂಭವಿಸಬಹುದಾದ ಕ್ರಾಂತಿಗೆ ಪೂರಕ ಕೆಲಸವೇ ಅಲ್ಲವಾ ಎಂಬ ಪ್ರಶ್ನೆಗಳಿವೆ.

ಈ ಪ್ರಶ್ನೆ ಈಗೇಕೆಂದರೆ, ಮನೋಹರ ಇವೆರಡೂ ವಲಯಗಳಲ್ಲಿ ಒಡನಾಡಿದ್ದಾತ. ರಾಯಚೂರಿನ ನಕ್ಸಲ್ ಹೋರಾಟದಲ್ಲಿ ಭಾಗಿಯಾಗಿ ನಾಲ್ಕುವರ್ಷ ಸೆರೆವಾಸದಲ್ಲಿದ್ದು ಕೊನೆಗೆ ಬಿಡುಗಡೆಯಾಗಿ ಬಂದು ಶಿವಮೊಗ್ಗದಲ್ಲಿ ಪ್ರಗತಿಪರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಮನೋಹರ್‌ಗೆ ಭೂಗತ ಹೋರಾಟದೆಡೆಗಿನ ಸೆಳೆತದಿಂದ ಹೊರಬರಲು ಅಸಾಧ್ಯವಾಯಿತಾ? ಅಥವಾ ಭೂಗತ ಮತ್ತು ಬಹಿರಂಗ ಕೆಲಸಗಳ ನಡುವಿನ ಒಂದು ಸ್ಪಷ್ಟ Demarkationನ ಅರಿವಾಗಲಿಲ್ಲವೋ? ಇಲ್ಲಾ ಅಂತರ ಕಾಪಾಡಿಕೊಳ್ಳುವ ಅವಕಾಶವನ್ನು ನಿರಾಕರಿಸಲಾಯಿತೋ..ಏನೋ.. ಅಂತೂ ಶಿವಮೊಗ್ಗ ಪೊಲೀಸರಿಗೆ ಮನೋಹರ್ ಬಗ್ಗೆ ವಿಪರೀತ ಅನುಮಾನಗಳು ಹುಟ್ಟಿಕೊಂಡಿದ್ದವು. ಅದು ಬಂಧನದವರೆಗೆ ಹೊರಳುತ್ತದೆ ಎಂಬ ಅನುಮಾನ ಬಂತೇನೋ. ಮನೋಹರ ಈಗ್ಗೆ ಒಂದು ವರ್ಷದ ಹಿಂದೆ ಕಣ್ಮರೆಯಾದ. ಆದರೆ ಅವತ್ತು ಪೊಲೀಸರ ಹಿಡಿತಕ್ಕೆ ಸಿಲುಕದೆ ಮನೋಹರ ಪಾರಾದನಾದರೂ ಈಗ ತೆರಬೇಕಾಗಿ ಬಂದ ಬೆಲೆ ಏನು?


ಇದಕ್ಕೆ ಪೊಲೀಸರು ಮಾತ್ರ ಹೊಣೆಯಾ? ಅಥವಾ ಪೂರ್ವಾಪರ ಯೋಚನೆಗಳೇ ಇರದಂತೆ ತಮ್ಮ ಕಾರ್ಯಕರ್ತರ ಜೀವಗಳನ್ನು ಪದೇಪದೆ ಹೀಗೆ ವಿನಾಕಾರಣ ಪ್ರಾಣದ ಆಪತ್ತಿಗೆ, ಅರೆಸ್ಟುಗಳಿಗೆ ಈಡುಮಾಡುತ್ತಿರುವ ನಾಯಕತ್ವದ ಹೊಣೆಯೂ ಇದೆಯಾ?

ನಕ್ಸಲರ ಲೆಕ್ಕಾಚಾರ ಹೀಗೆ ಎಲ್ಲೋ ನಿಯಂತ್ರಣಕ್ಕೆ ಸಿಗದಂತೆ ತಪ್ಪುತ್ತಿದೆ ಎನ್ನಲು ಇತ್ತೀಚೆಗೆ ನಡೆದ ಶಿವಮೊಗ್ಗದ ಜಗನ್ನಾಥನ ಬಂಧನವೂ ಉದಾಹರಣೆಯಾಗಿದೆ.

ಈಗ್ಗೆ 2 ವರ್ಷಗಳ ಹಿಂದೆ ನಾಪತ್ತೆಯಾಗಿದ್ದ ಜಗನ್ನಾಥ ಮನೆಯವರಿಗೆ, ಗೆಳೆಯರಿಗೆ ತಾನು ಬೇರೆಲ್ಲೋ ಕೆಲಸಕ್ಕೆ ಸೇರಿದ್ದೇನೆ ಎಂದು ಹೇಳಿಕೊಂಡೇ ಹೋಗಿದ್ದರೂ ಪೊಲೀಸರಾದಿಯಾಗಿ ಪ್ರತಿಯೊಬ್ಬರಿಗೂ ಜಗನ್ನಾಥ ಎಲ್ಲಿದ್ದ ಎಂಬುದು ಗೊತ್ತಿತ್ತು. ಸ್ವತಃ ಆದಿವಾಸಿ ಜನ ಹಾಗೂ ಅರೆಸ್ಟ್ ಆಗಿದ್ದ ಕೃಷ್ಣ ಪೊಲೀಸರಿಗೆ ಇದನ್ನು ಹೇಳಿದ್ದರು.

ಹೀಗೆ 2 ವರ್ಷ ಕಳೆದ ಈತ ನಾಲ್ಕೈದು ತಿಂಗಳ ಹಿಂದೆ ಮತ್ತೆ ಶಿವಮೊಗ್ಗದಲ್ಲಿ ಪ್ರತ್ಯಕ್ಷನಾದ. ಪೊಲೀಸರ ಕಣ್ಣು ಕೈಗಳ ಉದ್ದ ಅಗಲದ ಅರಿವೇ ಇರದಿದ್ದ ಈ ಪೆದ್ದು ಹೋರಾಟಗಾರ ಇಷ್ಟು ದಿನ ತಾನೆಲ್ಲಿದ್ದೆ, ಏನು ಮಾಡುತ್ತಿದ್ದೆ ಎಂಬ ಬಗ್ಗೆ ಜನ ನಂಬಬಹುದಾದ ಒಂದು ಕತೆಯನ್ನೂ ತಲೆಯಲ್ಲಿಟ್ಟುಕೊಳ್ಳದೆ ಬಹಿರಂಗವಾಗಿ ಕಾಣಿಸಿಕೊಂಡಿದ್ದ. ಬಹುಶಃ ಕರ್ನಾಟಕದ ಮಾವೋವಾದಿ ಹೋರಾಟದ ಚರಿತ್ರೆಯಲ್ಲೇ ಇಂತಾ ಇನ್ನೊಂದು ಹಾಸ್ಯಾಸ್ಪದ ಘಟನೆ ನಡೆದಿರಲು ಸಾಧ್ಯವಿಲ್ಲ.


ಕೆಲವು ದಿನ ಜಗನ್ನಾಥನ ಹಿಂದೆ ಬಿದ್ದು ನಿಗಾ ಇಟ್ಟ ಪೊಲೀಸರು ಇನ್ನೇನೂ ಹೆಚ್ಚಿನ ಲಿಂಕ್ ಸಿಗಲಾರದೆನಿಸಿ ಈಗ Prevention of Unlawful Activities Act ನಡಿ ಕೇಸು ಹಾಕಿ ಜೈಲಿಗಟ್ಟಿದ್ದಾರೆ. ಜಗನ್ನಾಥನೊಂದಿಗೆ ಅಲ್ಲಲ್ಲಿ ಕಾಣಿಸಿಕೊಂಡ ಒಂದೇ ತಪ್ಪಿಗಾಗಿ ಶಿವಮೊಗ್ಗದ ಅನಿತಾ ಎಂಬುವವರ ಮೇಲೂ ಅದೇ ಕೇಸು ಬದ್ದಿದೆ. ಅನಿತಾ ಈಗ ನಾಪತ್ತೆ.



ಇದರಲ್ಲಿ ಮಾನವ ಹಕ್ಕಿನ ಪ್ರಶ್ನೆ ಎಷ್ಟಿದೆ? ಪೊಲೀಸರ ಅತಿರೇಕದ ನಡವಳಿಕೆ ಎಷ್ಟಿದೆ? ನಕ್ಸಲ್ ನಾಯಕತ್ವದ ದುಡುಕು, ವಿವೇಚನಾರಹಿತ ಯೋಚನೆ ತೀರ್ಮಾನಗಳ ಪಾಲೆಷ್ಟಿರಬಹುದು?

ಮುಂದೆ ಜಗನ್ನಾಥ ಕೆಲ ದಿನ ಜೈಲಿನಲ್ಲಿದ್ದು ಹಿಂತಿರುಗಬಹುದು. ಅನಿತಾಗೆ ಜಾಮೀನು ಸಿಕ್ಕರೂ ಸಿಗಬಹುದು. ಆದರೆ ಮನೋಹರ ಮಾತ್ರ ಎಂದೆಂದೂ ಹಿಂತಿರುಗಲಾರ.

ಮನೋಹರನದ್ದು ಹತ್ಯೆ ಮಾತ್ರವಲ್ಲ ಆತ್ಮಹತ್ಯೆಯೂ ಆಗಿದ್ದಿರಬಹುದೆನ್ನಲು ಈ ಘಟನಾವಳಿಗಳೇ ಸಾಕ್ಷಿಯಾಗಿವೆ. ■



ಟೆರರಿಸ್ಟ್ ಲಿಂಕ್

ಯಾತ ಇಂತಹವೊಂದು ಆತಂಕಕಾರಿ ಸುದ್ದಿಯನ್ನು ...ನಿರೀಕ್ಷಿಸಿರಲಿಲ್ಲವೇನೋ? ಅವರಲ್ಲೂ ಆರ್ಟ್ ಆಫ್ ... ಬಗ್ಗೆ ಸಣ್ಣ ಭಕ್ತಿ ಇಟ್ಟುಕೊಂಡ ಜನರಂತೂ ಆಘಾತಕಾರಿ ಸುದ್ದಿಯೊಂದನ್ನು ಕನಸಿನಲ್ಲೂ ...ದ್ದಿರಲಿಲ್ಲವೇನೋ?

...ದೂ ಸುದ್ದಿ ಹೊರಬಿದ್ದಿದೆ. ಇತ್ತೀಚೆಗೆ ದೇಶಾದ್ಯಂತ ...ಸ್ಫೋಟಿಸಿ ನೂರಾರು ಮುಗ್ಧ ಜೀವಗಳನ್ನು ...ದುಕೊಂಡ ಶ್ರೀಕಾಂತ್ ಪುರೋಹಿತ್ ಆರ್ಟ್ ...ಲಿವಿಂಗ್‌ನ ಮಧ್ಯಪ್ರದೇಶ ಘಟಕದಲ್ಲಿ ಉಗ್ರರಿಗಾಗಿ ಶಿಬಿರ ನಡೆಸಿದ್ದಾಗಿ ಮುಂಬೈ ಪರೀಕ್ಷೆಯಲ್ಲಿ ...ನೆ. 'ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ'ದ ಹೆಸರಿನಲ್ಲಿ ... ಉಗ್ರರ ತರಬೇತಿ ಶಿಬಿರಕ್ಕೆ ಖುದ್ದು ರವಿಶಂಕರ್ ... ನೀಡಿದ್ದ ಎಂಬುದನ್ನೂ ಆತ ಹೇಳಿದ್ದಾನೆ.

...ಗೆ ರವಿಶಂಕರ್ ಹಾಕಿಕೊಂಡಿದ್ದ ಕೊನೆಯ ...ಡವೂ ಕಳಚಿಬಿದ್ದಂತಾಗಿದೆ. ಅದರೊಂದಿಗೆ ... ಶಾಂತಿ ಪುರಸ್ಕಾರ ಪಡೆಯಬೇಕೆಂಬ ಅವನ ...ಸೆಗೂ ಕೊನೆಯ ಕಲ್ಲು ಬಿದ್ದಿದೆ. ಇದರರ್ಥ ...ಬೆಂಗಳೂರು ಹೊರವಲಯದ ಆರ್ಟ್ ಆಫ್ ... ಎಂಬ ತನ್ನ ಅಡ್ಡೆಯಲ್ಲಿ ಶಿರಸಾಸನ ಮಾಡಿಕೊಂಡಿ...ರುವುದೇ ಅವನಿಗುಳಿದಿರುವ ದಾರಿ!

...ದ ಸೆಪ್ಟೆಂಬರ್ 29ರಂದು ಮಹಾರಾಷ್ಟ್ರದ ...ಗಾಂವ್‌ನಲ್ಲಿ ನಡೆದ ಸ್ಫೋಟದ ತನಿಖೆ ನಡೆಸುತ್ತಿರುವ ...ಬೈಯ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ...ಲ್ಲಿ ಭಾಗಿಯಾಗಿದ್ದಾರೆಂಬ ಆರೋಪದ ಮೇಲೆ ...ದೇಶದ ಕಾವಿಧಾರಿ ಸಾಧ್ವಿ ಪ್ರಗ್ಯಾ ಸಿಂಗ್‌ಳನ್ನು ...ತು. ವಾಸ್ತವದಲ್ಲಿ ಇದೂ ಒಂದು ಅಚ್ಚರಿಯೇ. ...ಲ್ಲಿ ಬಾಂಬುಗಳನ್ನು ಸ್ಫೋಟಿಸಿ ಅಮಾಯಕರನ್ನು ...ದಯವಾಗಿ ಕೊಲ್ಲುವುದು ಕೇವಲ ಮುಸ್ಲಿಮರ ...ಬ ಮನಸ್ಥಿತಿಯ ಜನರಿಗೆ ಆದೊಂದು ಆಘಾತ ...ಯೇ ಆಗಿತ್ತು. ತನಿಖೆಯನ್ನು ಮುಂದುವರೆಸಿದಂತೆ ...ತ್ವ ಭಯೋತ್ಪಾದಕರ ವಿಸ್ತೃತ ಜಾಲವೇ ಭಯೋ... ನಿಗ್ರಹ ದಳದೆದುರು ಅನಾವರಣಗೊಂಡಿತು. ... ಸಾಧ್ವಿ ಪ್ರಗ್ಯಾ ಸಿಂಗ್ ಮಾತ್ರವಲ್ಲ, ಆಕೆಯ ... ಭಾರತ್ ಸಂಘಟನೆಯನ್ನೂ ಒಳಗೊಂಡಂತೆ ಸಂಘಪರಿವಾರದ ಹಿಂದೂತ್ವ ಸಂಘಟನೆಗಳು ... ಅವುಗಳ ನಾಯಕರು ಈ ಸ್ಫೋಟಗಳಲ್ಲಿ ...ಗಿರುವುದು ಬೆಳಕಿಗೆ ಬಂತು. ಅಷ್ಟೇ ಅಲ್ಲ ...ಗಾಂವ್‌ನಲ್ಲಿ ನಡೆದ ಸ್ಫೋಟದಲ್ಲಿ ಮಾತ್ರವಲ್ಲ, ...ಷ್ಟ್ರದ ನಾಂದೇಡ್‌ನಲ್ಲಿ, ಗುಜರಾತ್‌ನ ಮೊಡ... ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ, ...ದ ಅಜ್ಮೇರ್‌ನಲ್ಲಿ ನಡೆದ ಬಾಂಬ್ ಸ್ಫೋಟಗಳಲ್ಲೂ ... ಭಾರತ-ಪಾಕ್ ನಡುವೆ ಸ್ನೇಹಸೇತುವೆಯಾಗಿ ...ತ್ತಿದ್ದ ಸಂಜೋತಾ ಎಕ್ಸ್‌ಪ್ರೆಸ್ ರೈಲನ್ನು ...ಣಾದಲ್ಲಿ ಸ್ಫೋಟಿಸಿರುವುದರಲ್ಲೂ ಈ ...ತ್ವ ಸಂಘಟನೆಗಳ ಕೈವಾಡವಿದೆ ...ದು ಎಟಿಎಸ್ ಪ್ರಾಥಮಿಕ ತನಿಖೆ ...ಹೊರಬಿತ್ತು.



...ಸಿರಲಿ ಕಳೆದ ವರ್ಷ ಫೆಬ್ರವರಿ ... ಹರಿಯಾಣದಲ್ಲಿ ನಡೆದ ಸಂಜೋತಾ ... ರೈಲು ಸ್ಫೋಟವೊಂದರಲ್ಲೇ ಕನಿಷ್ಠ ...ದು ಸ್ಥಳದಲ್ಲಿಯೇ ಸುಟ್ಟು ಕರಕಲಾಗಿ ...ಕ್ಕವಿಲ್ಲದಷ್ಟು ಜನ ಕೈಕಾಲುಗಳನ್ನು ...ಕೊಂಡು ಅಂಗವಿಕಲರಾದರು. ಸ್ಫೋಟ ಸಂಭವಿಸು...ವೇ ಇದೇ ಸಂಘಪರಿವಾರ ಅದನ್ನು ಇಸ್ಲಾಮಿಕ್ ...ಗಳ ತಲೆಗೆ ಕಟ್ಟಿ ಭಾರೀ ಗದ್ದಲವೆಬ್ಬಿಸಿತ್ತು.

...ಷಿಯ ಜಾಡನ್ನು ಹಿಡಿದು ಮುನ್ನಡೆಯುತ್ತಿದ್ದ ...ತ್ಪಾದನಾ ನಿಗ್ರಹಕ್ಕೆ ಎರಡನೆಯ ಆಘಾತಕಾರಿ ...ಂದು ಕಾದಿತ್ತು. ಅದೆಂದರೆ, ಹಿಂದೂತ್ವ ಸಂಘಟನೆ ...ವಿಧಾರಿ ಸ್ವಾಮಿಗಳ ಈ ಭಯೋತ್ಪಾದನೆಯಲ್ಲಿ ... ಸೇನೆಯ ಹಾಲಿ ಮತ್ತು ಮಾಜಿ ಸೈನ್ಯಾಧಿಕಾರಿ...ಗಳೂ ಭಾಗಿಯಾಗಿರುವುದು. ಈ ಸಂಬಂಧ "ಹಾಲಿ ...ಕಾರಿಯಾಗಿರುವ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ್, ನಿವೃತ್ತ ಮೇಜರ್ ರಮೇಶ್ ಶಿವಾಜಿ ಉಪಾಧ್ಯಾಯ ಮುಂತಾದವರನ್ನು ಎಟಿಎಸ್ ಬಂಧಿಸಿದೆ. ಸ್ಫೋಟ ನಡೆಸುವುದಕ್ಕೆ ಜಮ್ಮು ಮತ್ತು ಕಾಶ್ಮೀರದ ಸೈನಿಕ ಶಸ್ತ್ರಾಗಾರದದಿಂದ ಆರ್‌ಡಿಎಕ್ಸ್ ಅನ್ನು ಕದ್ದು ತಂದು ನಂತರ ಅದನ್ನು ಅಭಿನವ ಭಾರತ ಸಂಘಟನೆಯ ನಾಯಕರಿಗೆ ಕೊಟ್ಟಿರುವುದಾಗಿ ಶ್ರೀಕಾಂತ್ ಪುರೋಹಿತ್ ತನಿಖೆ ಸಮಯದಲ್ಲಿ ಒಪ್ಪಿಕೊಂಡಿದ್ದಾನೆ. ಇದು ಇನ್ನೂ ಆತಂಕಕಾರಿ ಸುದ್ದಿಯಾಗಿತ್ತು. ಏಕೆಂದರೆ, ಒಟ್ಟು ಇಪ್ಪತ್ತೈದು ಲಕ್ಷದಷ್ಟು ಸಂಖ್ಯೆಯ ಯೋಧರನ್ನು, ಸಿಬ್ಬಂದಿಗಳನ್ನು, ಅಪಾರ ಪ್ರಮಾಣದ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಪ್ರಪಂಚದಲ್ಲಿಯೇ ಎರಡನೇ ಅತಿದೊಡ್ಡ ಸೈನ್ಯವಾಗಿ ಹೊರಹೊಮ್ಮಿರುವ, ಯಾವುದೇ ಸಮುದಾಯದ ತತ್ವ ಸಿದ್ಧಾಂತಗಳಿಗೆ ಅಂಟಿಕೊಳ್ಳದೇ ಸಂವಿಧಾನದ ಜಾತ್ಯತೀತ ಮೌಲ್ಯಗಳನ್ನು ಆಚರಿಸುತ್ತಿರುವ ಭಾರತೀಯ ಸೇನೆ ಕೇಸರಿಪಡೆಯಾಗಿ ಪರಿವರ್ತನೆಗೊಳ್ಳುತ್ತಿರುವುದನ್ನು ಇದು ಪ್ರತಿನಿಧಿಸುತ್ತಿತ್ತು.

ಈಗ ಹೊರಬಿದ್ದಿರುವುದು ಮೂರನೇ ಆಘಾತಕಾರಿ ಸುದ್ದಿ. ಈ ಹಿಂದೂತ್ವ ಸಿದ್ಧಾಂತಿಗಳ ಕೇಸರಿ ಭಯೋತ್ಪಾದನೆಯಲ್ಲಿ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್‌ನಂಥವರೂ ಭಾಗಿಯಾಗಿರುವುದು.

ರವಿಶಂಕರ್ ಒಬ್ಬ ಪಕ್ಕಾ ಭೂಗಳ್ಳ ಎಂಬುದು ಎಲ್ಲರಿಗೂ ಗೊತ್ತಿದೆ; ಬೆಂಗಳೂರಿನ ಹೊರವಲಯದಲ್ಲಿ ಆರ್ಟ್ ಆಫ್ ಲಿವಿಂಗ್ ಕಟ್ಟಿಕೊಳ್ಳುವುದಕ್ಕೆ ಆತ ಆಕ್ರಮಿಸಿಕೊಂಡಿರುವ ನೂರಾರು ಎಕರೆ ಜಮೀನೇ ಇದಕ್ಕೆ ದಿನನಿತ್ಯ ಸಾಕ್ಷಿ ಹೇಳುತ್ತಿತ್ತು.

ರವಿಶಂಕರ್ ಪ್ರಚಾರಕ್ಕಾಗಿ ಹಪಹಪಿಸುತ್ತಿರುವ ಪ್ರಚಾರದಾಹಿ ವ್ಯಕ್ತಿ ಎಂಬುದೂ ಗೊತ್ತಿತ್ತು; ವಾರಕ್ಕೆ ಮೂರುಬಾರಿ ರಾಜಕಾರಣಿಗಳ ನಡುವೆ, ಉನ್ನತ ಅಧಿಕಾರಿಗಳ ನಡುವೆ, ದೇಶವಿದೇಶಗಳ ಮಂತ್ರಿಮಹೋದಯರ ನಡುವೆ ವಯ್ಯಾರದಿಂದ ನಿಂತು ಫೋಟೋ ಕ್ಲಿಕ್ಕಿಸಿಕೊಂಡು ಮಾಧ್ಯಮಗಳಿಗೆ, ಟಿವಿಗಳಿಗೆ ಕೊಡುತ್ತಿದ್ದುದು ಇದಕ್ಕೊಂದು ನಿದರ್ಶನದಂತಿತ್ತು.

ರವಿಶಂಕರ್ ಒಬ್ಬ ಜೇಬುಗಳ್ಳ ಎಂಬುದೂ ಗೊತ್ತಿತ್ತು; ಯೋಗ, ಧ್ಯಾನ, ವ್ಯಕ್ತಿತ್ವ ವಿಕಸನ ಅದೂ ಇದೂ ಅಂತ ಹಾಳುಮೂಳುಗಳನ್ನೆಲ್ಲಾ ಐಟಿ-ಬಿಟಿ ಟೆಕ್ಕಿಗಳ ತಲೆಗೆ ತುಂಬಿ ಅವರ ಜೇಬು ಖಾಲಿ ಮಾಡುವುದು, ದೊಡ್ಡ ದೊಡ್ಡ ಜಾತ್ರೆಗಳನ್ನು ನಡೆಸಿ ದೊಡ್ಡ ದೊಡ್ಡ ಕುಳಗಳ ಜೇಬಿಗೆ ಕೈಹಾಕುವುದು, ತನ್ನ ಜೇಬುಗಳ್ಳತನದ ಈ ಕುಲಕಸುಬಿನ ವಿಸ್ತರಣೆಗಾಗಿ ಭಾರತದಾದ್ಯಂತ ಮಾತ್ರವಲ್ಲ ವಿಶ್ವದಾದ್ಯಂತ ಅನೇಕ ದೇಶಗಳ ನಗರಗಳನ್ನೂ ಆರ್ಟ್ ಆಫ್ ಲಿವಿಂಗ್ ಎಂಬ ಬ್ಲೇಡ್ ಅಂಗಡಿಗಳನ್ನು ಪ್ರಾರಂಭಿಸಿರುವುದು ಇದಕ್ಕೊಂದು ಪುರಾವೆಯಂತಿತ್ತು.



ರವಿಶಂಕರ್ ವಿಶ್ವದ ಪ್ರತಿಷ್ಠಿತ ನೊಬೆಲ್ ಶಾಂತಿ ಪುರಸ್ಕಾರ ಪಡೆಯಬೇಕೆಂದು ಹಪಹಪಿಸುತ್ತಿರುವುದೂ ಗೊತ್ತಿತ್ತು. ಕಾಶ್ಮೀರ, ಬಿಹಾರ, ಅಸ್ಸಾಂ, ಇರಾಕ್, ಆಫಘಾನಿಸ್ತಾನ್, ಲೆಬನಾನ್, ಇಸ್ರೇಲ್, ಶ್ರೀಲಂಕಾ - ಹೀಗೆ ವಿಶ್ವದ ಯಾವುದೇ ಮೂಲೆಯಲ್ಲಿ ಸಶಸ್ತ್ರ ಹೋರಾಟಗಳ ಕಾರಣದಿಂದಾಗಿಯೋ, ಬಲಿಷ್ಠರ ಆಕ್ರಮಣಗಳ ಕಾರಣದಿಂದಾಗಿಯೋ ಯುದ್ಧ, ಅಶಾಂತಿ, ಸಂಘರ್ಷಗಳು ತಾಂಡವವಾಡುತ್ತಿರುವ ಎಲ್ಲಾ ಪ್ರದೇಶಗಳಿಗೂ ಶಾಂತಿಧೂತನಂತೆ ಹೋಗಿ ಜನರಿಗೆ ಶಿರಸಾಸನ ಮಾಡುವುದನ್ನು ಹೇಳಿಕೊಟ್ಟು ಬಂದಿರುವುದು ಅದನ್ನು ಎತ್ತಿ ಎತ್ತಿ ಹೇಳುತ್ತಿತ್ತು.

ಆದರೆ, ಬಿಳಿ ಡ್ರೆಸ್ ಹಾಕಿಕೊಂಡು ಶಾಂತಿಧೂತನ ಪೋಸು ಕೊಡುವ ರವಿಶಂಕರ್ ಎಂಬ ಅರ್ಧಂಬರ್ಧ ಗಂಡಸು ಬಗಲಲ್ಲಿ ಬಾಂಬ್ ಇಟ್ಟುಕೊಂಡಿದ್ದಾನೆ ಎಂಬುದು ಗೊತ್ತಿರಲಿಲ್ಲ, ಆರ್ಟ್ ಆಫ್ ಲಿವಿಂಗ್ ಎಂಬ ಅವನ ಶಿರಸಾಸನದ ಜಾಗ ಭಯೋತ್ಪಾದಕರ ಅಡ್ಡೆಯಾಗಿದ್ದ ಎಂಬುದೂ ಗೊತ್ತಿರಲಿಲ್ಲ, ಅದೀಗ ಗೊತ್ತಾಗಿದೆ.

ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಬಂಧಿತನಾಗಿರುವ ಸೈನ್ಯಾಧಿಕಾರಿ ಶ್ರೀಕಾಂತ್ ಪುರೋಹಿತ್ ತನಿಖೆಯ ವೇಳೆಯಲ್ಲಿ ಅದನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾನೆ. ಮೊನ್ನೆ ಮೊನ್ನೆ ಜೂನ್ 23ರಂದು ತಾನು ನಿವೃತ್ತ ಸೇನಾಧಿಕಾರಿ ರಮೇಶ್ ಉಪಾಧ್ಯಾಯ ಹಾಗೂ ಭರತ್‌ರೊಂದಿಗೆ ಬೆಂಗಳೂರಿಗೆ ಹೋಗಿ ರವಿಶಂಕರ್ ಅವರನ್ನು ಭೇಟಿಯಾಗಿದ್ದನೆಂದೂ, ಮಧ್ಯಪ್ರದೇಶದ ಪಂಚಮಡಿಯಲ್ಲಿರುವ ಆರ್ಟ್ ಆಫ್ ಲಿವಿಂಗ್‌ನಲ್ಲಿ ಶಿಬಿರ ನಡೆಸುವುದಕ್ಕೆ ತಾನು ಕೇಳಿದ ಅನುಮತಿಗೆ ರವಿಶಂಕರ್ ಒಪ್ಪಿದರೆಂದೂ, ಯೋಜನೆಯಂತೆ ಅಕ್ಟೋಬರ್ 16 ರಿಂದ 20ರ ತನಕ 'ವ್ಯಕ್ತಿತ್ವ ವಿಕಸನ ಶಿಬಿರ'ದ ಹೆಸರಿನಲ್ಲಿ ತರಬೇತಿ ಶಿಬಿರ ನಡೆಯಿತೆಂದೂ, ಅದರಲ್ಲಿ 49 ಜನ ಭಾಗವಹಿಸಿದ್ದರೆಂದೂ, ಈ ಶಿಬಿರಾರ್ಥಿಗಳಿಗೆ ಹಗಲಿನಲ್ಲಿ ಯೋಗ, ಧ್ಯಾನ, ವ್ಯಕ್ತಿತ್ವ ವಿಕಸನದ ಬಗ್ಗೆ ತರಬೇತಿ ನೀಡಲಾಗುತ್ತಿತ್ತೆಂದೂ, ರಾತ್ರಿ 9 ರಿಂದ 10ರವರೆಗೆ ಇಸ್ಲಾಂ, ಕ್ರಿಶ್ಚಿಯನ್ ಮತ್ತಿತರ ಹಿಂದೂಯೇತರ ಧರ್ಮಗಳ ವಿರುದ್ಧ ಯುವಕರಿಗೆ ಪ್ರಚೋದನಾಕಾರಿ ಭಾಷಣ ಮಾಡಲಾಗುತ್ತಿತ್ತೆಂದೂ, ಆಯ್ದ ಹತ್ತು ಯುವಕರಿಗೆ ಮಾರಕಾಸ್ತ್ರ ಬಳಸುವ ಹಾಗೂ ಬಾಂಬ್ ತಯಾರಿಸುವ ತರಬೇತಿ ನೀಡಲಾಗುತ್ತಿತ್ತೆಂದೂ ಶ್ರೀಕಾಂತ್ ಪುರೋಹಿತ್ ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾನೆ. ಇದಕ್ಕೂ ಮೊದಲು ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಬಂಧಿತನಾಗಿರುವ ಸುಧಾಕರ್ ಚತುರ್ವೇದಿ ಕೂಡ ಇದನ್ನು ಬಹಿರಂಗಪಡಿಸಿದ್ದ.

ಅತ್ತ ಶ್ರೀಕಾಂತ್ ಪುರೋಹಿತ್‌ನ ಹೇಳಿಕೆ ಬಹಿರಂಗವಾಗುತ್ತಿದ್ದಂತೆ ಇತ್ತ ಬೆಂಗಳೂರಿನಲ್ಲಿ ತಲೆಕೆಳಗಾಗಿ ಶಿರಸಾಸನದಲ್ಲಿದ್ದ ರವಿಶಂಕರ್ ತೊಡೆಯಲ್ಲಿ ನಡುಕ ಶುರುವಾಗಿ ದೊಪ್ಪನೆ ಬಿದ್ದಿದ್ದಾನೆ. ಎದ್ದು ಬಡಬಡಿಸುತ್ತಾ ಬಂದು ಮೊದಮೊದಲು ಅದನ್ನು ಖಂಡತುಂಡವಾಗಿ ಖಂಡಿಸಿದ. ಯಾವಾಗ ತನ್ನ ಹುಳುಕು ಇನ್ನಷ್ಟು ಬಯಲಾಗಲಿದೆ ಎಂಬುದು ಅರಿವಾಯಿತೋ "ಶ್ರೀಕಾಂತ್ ಪುರೋಹಿತ್ ನನ್ನನ್ನು ಭೇಟಿಯಾಗಿದ್ದು ನಿಜ. ಮಧ್ಯಪ್ರದೇಶದ ಪಂಚಮಡಿಯ ಆರ್ಟ್ ಆಫ್ ಲಿವಿಂಗ್‌ನಲ್ಲಿ ತರಬೇತಿ ನಡೆದದ್ದೂ ಹೌದು. ಆದರೆ, ಅದು ಇಂತಹ ತರಬೇತಿ ಎಂಬುದು ಗೊತ್ತಿರಲಿಲ್ಲ" ಎಂದು ಜಾರಿಕೊಳ್ಳಲು ಪ್ರಯತ್ನ ನಡೆಸಿದ್ದಾನೆ.

ಇನ್ನೊಂದೆಡೆಗೆ, ಆರ್ಟ್ ಆಫ್ ಲಿವಿಂಗ್‌ನ ತರಬೇತುದಾರ ಮತ್ತು ಶಿಬಿರದ ಸಂಯೋಜಕ ಜಿಗ್ನೇಶ್ ಭಾಯ್ ಕೂಡ "ಶ್ರೀಕಾಂತ್ ಪುರೋಹಿತ್ ಇಲ್ಲಿಗೆ ಬಂದಿದ್ದರು, ಯುವಕರಿಗೆ ದೇಶಪ್ರೇಮದ ಪಾಠ ಹೇಳಿಕೊಡುತ್ತೇವೆ ಹಾಗೂ ದೈಹಿಕ ತರಬೇತಿ ನೀಡುತ್ತೇವೆ ಎಂದಿದ್ದರು" ಎಂದು ಶಿಬಿರ ನಡೆದಿರುವುದನ್ನು ದೃಢೀಕರಿಸಿದ್ದಾನೆ.

ಪ್ರಕರಣದ ತನಿಖೆ ನಡೆಸುತ್ತಿರುವ ಭಯೋತ್ಪಾದನೆ ನಿಗ್ರಹ ದಳ ಕೈಯಲ್ಲಿ ಕೋಳ ಹಿಡಿದುಕೊಂಡು ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್‌ನತ್ತ ಬರುವ ಸಾಧ್ಯತೆಯಿದೆ. ಅದನ್ನು ಕಲ್ಪಿಸಿಕೊಂಡೇ ರವಿಶಂಕರ್ ಗುರೂಜಿಯ ಕಾಲುಗಳು ಜೋರಾಗಿ ಕಂಪಿಸುತ್ತಿವೆ. ಕಂಪಿಸುವ ಕಾಲುಗಳನ್ನಿಟ್ಟುಕೊಂಡು ಅದ್ಹೇಗೆ ಶಿರಸಾಸನ ಮಾಡುತ್ತಾನೋ ಗೊತ್ತಿಲ್ಲ. ಎಟಿಎಸ್‌ನವರು ರವಿಶಂಕರ್ ಕುಂಡಿಗೆ ಎರಡು ಬಾರಿಸಿದರೆ ಸಾಕು ಸತ್ಯ ಹೊರಬರುತ್ತದೆ.

ಆರ್ಟ್ ಆಫ್ ಲಿವಿಂಗ್ ಎದುರು ಕುರಿಗಳಂತೆ ನಿಲ್ಲುವ ಐಟಿ-ಬಿಟಿ ಟೆಕ್ಕಿಗಳು ಇನ್ನಾದರೂ ಎಚ್ಚರದಿಂದಿರಲಿ. ಆದರ ಕಡೆ ತಲೆ ಹಾಕಿ ಮಲಗುವುದನ್ನು ಇನ್ನಾದರೂ ಬಿಡಲಿ. ಇಲ್ಲದಿದ್ದರೆ ಈ ಓಳು ಗುರೂಜಿಯ ಕೇಸರಿ ಭಯೋತ್ಪಾದನೆಯಲ್ಲಿ ತಾವೂ ಭಾಗವಹಿಸಿದಂತಾಗುತ್ತದೆ. ಆರ್ಟ್ ಆಫ್ ಲಿವಿಂಗ್‌ನಿಂದ ಈ ದಗಲ್ಬಾಜಿ ಗುರೂಜಿ ಗೆಬರುವ ದುಡ್ಡಾದರೂ ಜೇಬಲ್ಲಿ ಉಳಿಯುತ್ತದೆ.

■ ಕುಮಾರ್ ಬುರಡಿಕಟ್ಟಿ

...ನೊಬೆಲ್‌ಗಾಗಿ ಏನೆಲ್ಲಾ ಸರ್ಕಸ್?

...ಹೆಸರಿಗೆ ಹಾಗೊಬ್ಬ ನೊಬೆಲ್ ಅವಾರ್ಡ್ ಆಗಬೇಕೆಂಬ ಹುಚ್ಚು ರವಿಶಂಕರ್ ತಲೆಗಿಳಿದುಬಿಟ್ಟಿದೆ. ಅದಕ್ಕಾಗಿ ...ಮಾಡುತ್ತಿರುವ ಸರ್ಕಸ್‌ಗಳನ್ನು ನೋಡಿದರೆ ನಗುಬರುತ್ತದೆ.

...ನಮ್ಮ ಸಮಸ್ಯೆಯನ್ನು ನಿವಾರಿಸಿ ಎಂದು ಈತನನ್ನು ಯಾರೂ ಕರೆಯದಿದ್ದರೂ ರವಿಶಂಕರ್ ಅಲ್ಲಿಗೆ ಓಡಿಹೋಗಿ ...ಸ ಗಿಟ್ಟಿಸುತ್ತಾನೆ. ಅದಕ್ಕೆ ಒಂದಾ ಎರಡಾ ಉದಾಹರಣೆ? ರಾಜಸ್ಥಾನದ ಗುಜ್ಜಾರರು ತಮಗೆ ಸೂಕ್ತ ...ಮೀಸಲಾತಿ ಬೇಕೆಂದು ಪ್ರತಿಭಟನೆಯ ದಾರಿ ಹಿಡಿದರೆ ಈತ ಅಲ್ಲಿಗೆ ಹೋಗಿ ಯೋಗ ಮಾಡುವಂತೆ ಉಪದೇಶ ...ಕೊಟ್ಟು ಬರುತ್ತಾನೆ. ಆಂಧ್ರದಲ್ಲಿ ನಕ್ಸಲೀಯರು ಬಂದೂಕಿನ ನಳಿಕೆಯ ಮೂಲಕ ಬದಲಾವಣೆ ತರುತ್ತೇವೆಂದು ...ಹೋರಾಟಕ್ಕಿಳಿದರೆ ಅವರಿಗೂ ಧ್ಯಾನ ಮಾಡುವಂತೆ ಉಪದೇಶಿಸುತ್ತಾನೆ. ಅಸ್ಸಾಂ, ಮಣಿಪುರ, ನಾಗಾಲ್ಯಾಂಡ್, ...ನ ಮುಂತಾದ ಈಶಾನ್ಯ ಭಾರತದ ರಾಜ್ಯಗಳು ಭಾರತದಿಂದ ಪ್ರತ್ಯೇಕಗೊಂಡು ಸ್ವತಂತ್ರ ದೇಶಗಳಾಗಬೇಕೆಂದು ...ಹೋರಾಡುತ್ತಿದ್ದರೆ ಅವರಿಗೆ ಮಂತ್ರ ಹೇಳಿಕೊಡುತ್ತೇನೆ ಎನ್ನುತ್ತಾನೆ. ಕಾಶ್ಮೀರದ ಜನ ಭಾರತ ಸೇನೆಯ ದೌರ್ಜನ್ಯಗಳಿಂದ ...ರೋಸಿಹೋಗಿದ್ದರೆ ಅವರಿಗೆ ಈತ ಶಾಂತಿಮಂತ್ರ ಪಠಿಸುತ್ತಾನೆ. ಸ್ವತಂತ್ರ ನಾಡಿಗಾಗಿ ಶ್ರೀಲಂಕಾದಲ್ಲಿ ತಮಿಳರು ...ಹೋರಾಡುತ್ತಿದ್ದರೆ ಅವರಿಗೆ ಅಹಿಂಸೆಯ ಪಾಠ ಮಾಡುತ್ತಾನೆ. ಅಫಘಾನಿಯರ ಮೇಲೆ, ಇರಾಕಿಯರ ಮೇಲೆ ...ಕದ ಸೈನ್ಯ ಬಾಂಬುಗಳನ್ನು ಎಸೆಯುತ್ತಿದ್ದರೆ ಅವರಿಗೆ ಶಿರಸಾಸನ ಮಾಡಿ ತೋರಿಸುತ್ತಾನೆ.

ಇಷ್ಟೆಲ್ಲಾ ಯಾತಕ್ಕೆಂದರೆ ಅಶಾಂತಿಯ ವಿಶ್ವದಲ್ಲಿ ಶಾಂತಿ ಸ್ಥಾಪಿಸಿದ ಶಾಂತಿಧೂತ ಎಂದು ಹೆಸರು ಮಾಡುವುದಕ್ಕೆ. ಆ ಮೂಲಕ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಅರ್ಜಿ ಹಾಕುವುದಕ್ಕೆ.

ಈಗಾಗಲೇ ಈತ ಅರ್ಜಿ ಹಾಕಿಯಾಗಿದೆ. ಅದಕ್ಕಾಗಿ ಲಾಬಿ ನಡೆಸುವುದಕ್ಕೆ ಈತ ನೊಬೆಲ್ ಪಾರಿತೋಷಕ ಕೊಡುವ ಟೀಮಿನ ಆಯಕಟ್ಟಿನ ಜಾಗದಲ್ಲಿ ತನ್ನ ಚೇಲಾಗಳನ್ನು ತುಂಬಿಕೊಂಡಿದ್ದಾನೆ. ಒಂದು ಉದಾಹರಣೆಯನ್ನು ನೋಡಿ. ರಾಮಚಂದ್ರ ಗುಹಾ ಅವರು ನಾರ್ವೆಗೆ ಹೋಗಿದ್ದಾಗ ತನ್ನನ್ನು ವೈದ್ಯಳೆಂದು ಪರಿಚಯಿಸಿಕೊಂಡ ಮಹಿಳೆಯೊಬ್ಬಳು ರವಿಶಂಕರ್ ಕಾಶ್ಮೀರದಲ್ಲಿ ಶಾಂತಿ ಸ್ಥಾಪಿಸಿದ್ದಾರೆ, ಭಾರತದ ಸಾವಿರಾರು ಹಳ್ಳಿಗಳಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡಿದ್ದಾರೆ, ಅವರಿಗೆ ನೊಬೆಲ್ ಶಾಂತಿಪುರಸ್ಕಾರ ಸಿಗಬೇಕಲ್ಲವೆ? ಎಂದು ಚರ್ಚಿಸಿದ್ದಾಳೆ.

ಕಾಶ್ಮೀರದಲ್ಲಿ ಶಾಂತಿಯೂ ನೆಲೆಸಿಲ್ಲ ಹಾಗೂ ಭಾರತದ ಹಳ್ಳಿಗಳು ಸಾವಿರಾರು ವರ್ಷಗಳಿಂದ ಯಾವುದೇ ರಾಸಾಯನಿಕ ಇಲ್ಲದೇ ಸಾವಯವ ಕೃಷಿಯನ್ನೇ ನಡೆಸಿಕೊಂಡು ಬಂದಿರುವುದರಿಂದ ಅದು ಹೊಸತೇನೂ ಅಲ್ಲ ಎಂದು ಆಕೆಗೂ, ಆಕೆಯ ಗುರು ರವಿಶಂಕರ್‌ಗೂ ಗುಹಾ ಮಂಗಳಾರತಿ ಮಾಡಿದ್ದಾರೆ.

ಇತ್ತ ಮುಂಬಯಿಯ ಭಯೋತ್ಪಾದಕ ನಿಗ್ರಹದಳ ದೇಶಾದ್ಯಂತ ನಡೆದ ಬಾಂಬ್ ಸ್ಫೋಟಗಳಲ್ಲಿ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಪಾತ್ರವನ್ನು ಬಯಲಿಗೆಳೆಯುತ್ತಿದೆ. ಈತ ಶಾಂತಿಧೂತನಲ್ಲ, ಭಯೋತ್ಪಾದಕ ಎಂಬುದು [illegible] ಬಯಲಾಗುತ್ತಿದೆ. ಹೀಗಾದರೆ, ರವಿಶಂಕರ್‌ಗೆ ನೊಬೆಲ್ ಮರೀಚಿಕೆಯೆ. ಪಾಪ, ರವಿಶಂಕರ್ [illegible] ಹೋಗಿ ಕಷ್ಟ ಪಟ್ಟು ಶಿರಸಾಸನ ಮಾಡಿ ಬಂದಿದ್ದು ಹೊಳೆಯಲ್ಲಿ ಹುಣಿಸೆಹಣ್ಣು ಕಿವುಚಿದಂತಾಗಿದೆ! [illegible] ದಿನ ಭಯೋತ್ಪಾದನೆಯ ಉತ್ತೇಜನಕ್ಕೇನಾದರೂ ಭಯೋತ್ಪಾದನಾ ಪ್ರಶಸ್ತಿ ಅಂತೇನಾದರೂ ಇಟ್ಟರೆ ಅದಕ್ಕೆ ಈತ [illegible] ಮಾಡಬಹುದು.

ವಿ.ಕ.ದಿಂದ ಇನ್ನೊಂದು ದಾಖಲೆ!

ಈ ಬಾರಿ ಭಂಡತನದಲ್ಲಿ

.... ಆದರೆ ಇದು ಭಂಡತನವಷ್ಟೇ ಅಲ್ಲ

'ಹಿಂದೂಗಳಷ್ಟು ಉದಾರಿಗಳು ಜಗತ್ತಿನಲ್ಲಿ ಬೇರೆ ಯಾವ ಮತ ಧರ್ಮದಲ್ಲೂ ಇಲ್ಲ.

'ಹಿಂದೂಗಳು ಎಂದೂ ಯಾರ ಮೇಲೂ ಆಕ್ರಮಣ ನಡೆಸಿಲ್ಲ.'

'ಹಿಂದೂಗಳ ಸ್ವಭಾವದಲ್ಲೇ ಅಹಿಂಸೆ, ಸಹಬಾಳ್ವೆ ಮತ್ತು ಸಹನೆಯ ಗುಣಗಳಿವೆ.'

'ಹಿಂದೂ ಧರ್ಮ ಮಾತ್ರ ಒಂದು ಜೀವನಕ್ರಮ ಮತ್ತು ಆಧ್ಯಾತ್ಮಜ್ಞಾನ; ಕ್ರೈಸ್ತ ಇಸ್ಲಾಂ ಇತ್ಯಾದಿಗಳೆಲ್ಲ ಕೇವಲ ರಿಲಿಜನ್ನುಗಳು.'


'ಹಿಂದೂ ಧರ್ಮವೇ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಧರ್ಮ.'

ಎಲ್ಲಿಂದ ಹೆಕ್ಕಿ ತೆಗೆದ ಅಣಿಮುತ್ತುಗಳು ಇವು ಎಂಬುದನ್ನು ನೀವು ಈಗಾಗಲೇ ಊಹಿಸಿರುತ್ತೀರಿ. ವಿ.ಕ.ದ. ಪುಟಗಳಲ್ಲಿ ಕಳೆದ ಒಂದು ತಿಂಗಳಿನಿಂದ ನಡೆದ ಮತಾಂತರ ಕುರಿತ 'ಸಂವಾದ'ದಲ್ಲಿ ಭೈರಪ್ಪ ಮತ್ತು ಅವರ ಬೆಂಬಲಿಗರ ಬರಹಗಳಿಂದ ಸಂಗ್ರಹಿಸಿರುವ ಸುಭಾಷಿತಗಳು ಇವು. ಆತ್ಮವಿಮರ್ಶೆಗೆ ಎರವಾದ ಸ್ವಮತ ಪರಿಪಾದನೆ ಮತ್ತು ಎಗ್ಗಿಲ್ಲದ ಇಸ್ಲಾಂ ಮತ್ತು ಕ್ರೈಸ್ತ ಮತಗಳ ದೂಷಣೆ, ಈ ಎಲ್ಲ ಬರಹಗಳಲ್ಲೂ ಎದ್ದು ಕಾಣುವ ಅಂಶಗಳು. ತಮ್ಮ ಅನ್ಯಮತ ಖಂಡನೆಯಲ್ಲಿ ಈ ಮಂದಿ ಆ ಮತಗಳ ಪವಿತ್ರ ಗ್ರಂಥ ಮತ್ತು ದೇವರುಗಳನ್ನೂ ಬಿಟ್ಟಿಲ್ಲ. ಆರ್‌ಎಸ್‌ಎಸ್‌ನ 'ಬೌದ್ಧಿಕ್'ಗಳಲ್ಲಿ ಮಾತ್ರ ಸಲ್ಲಬಹುದಾದ ಈ ಬಗೆಯ ಮಾತುಗಾರಿಕೆ, ಕರ್ನಾಟಕದ ಅತ್ಯಧಿಕ ಪ್ರಸಾರದ ದಿನಪತ್ರಿಕೆಯ ಕಾಲಮ್ಮುಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಪಾಂಡಿತ್ಯಪೂರ್ಣ ಮಂಡನೆ ಎಂಬಂತೆ ಪ್ರಕಟವಾಗಿದೆ. ಅಪಾತ್ರರು ಗದ್ದುಗೆಗೆ ಏರುವುದನ್ನು ನಾಯಿ ಪಲ್ಲಕ್ಕಿ ಹತ್ತಿದ ಹಾಗೆ ಎಂದು ವರ್ಣಿಸುವುದುಂಟು. ವಿಜಯ ಕರ್ನಾಟಕದಲ್ಲಿ ಆರ್‌ಎಸ್‌ಎಸ್ ವಿಚಾರಧಾರೆಗೆ ಸಿಕ್ಕಿರುವ ಸ್ಥಾನವೂ ಇದೇ ಬಗೆಯದ್ದು. 150 ವರ್ಷಗಳ ಕನ್ನಡ ಪತ್ರಿಕಾರಂಗದ ಚರಿತ್ರೆಯಲ್ಲಿ ಇಂತಹ ಒಂದು ವಿದ್ಯಮಾನ ಸಂಭವಿಸುತ್ತಿರುವುದು ಇದೇ ಮೊದಲು. ಇಂತಹದ್ದೊಂದು ದಾಖಲೆ ನಿರ್ಮಿಸಿದ ತನ್ನ ಸಾಧನೆ ಬಗ್ಗೆ ವಿ.ಕ. ಸಂಪಾದಕರು ಸಕಾರಣವಾಗಿ ಹೆಮ್ಮೆ ಪಟ್ಟುಕೊಳ್ಳಬಹುದು!

ಸದ್ರಿ ಸಂಪಾದಕರು ಇದೀಗ ಭಂಡತನದಲ್ಲೂ ಒಂದು ದಾಖಲೆ ನಿರ್ಮಿಸಿದ್ದಾರೆ. ತಮ್ಮ ಪತ್ರಿಕೆ ಪ್ರಾಯೋಜಿಸಿರುವ "ಹಿಂದೂ ಧರ್ಮ ಮೇಲೋ, "ಕ್ರೈಸ್ತ ಧರ್ಮ ಮೇಲೋ" ಎಂಬ ಹೈಸ್ಕೂಲು ಚರ್ಚಾ ಸ್ಪರ್ಧೆಯಲ್ಲಿ ವಿ.ಕ. ಸಂಪಾದಕರು, ತಾರಿಣಿ ಚಿದಾನಂದ ಅವರ "ಮಗಳು ಕಂಡ ಕುವೆಂಪು" ಪುಸ್ತಕದಿಂದ, ಲೇಖಕಿಯ ಅನುಮತಿ ಇಲ್ಲದೆ ಒಂದು ಅಧ್ಯಾಯವನ್ನು ಪ್ರಕಟಿಸುವ ಭಂಡ ಧೈರ್ಯ ತೋರಿಸಿದ್ದಾರೆ! ಈ ಹಲ್ಕಾ ಕೆಲಸ ಮಾಡಿದ್ದಕ್ಕಾಗಿ ತಾರಿಣಿ ಚಿದಾನಂದ, ಸಂಪಾದಕರನ್ನು ಅತ್ಯಂತ ಸಭ್ಯ ಭಾಷೆಯಲ್ಲಿ ಚೆನ್ನಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಮಾನವಂತರಿಗೆ ಅಷ್ಟು ಸಾಕು. ಆದರೆ ವಿ.ಕ. ಸಂಪಾದಕರು ಮಾತ್ರ ಮುಖಕ್ಕೆ ಉಗುಳಿದರೂ, ಮುಖ ಒರೆಸಿಕೊಂಡು, ತನ್ನ ಅಕೃತ್ಯವನ್ನು ಸಮರ್ಥಿಸಿಕೊಂಡಿದ್ದಾರೆ! ಪುಸ್ತಕ ಒಂದರ ಅಧ್ಯಾಯ, ಸ್ವತಂತ್ರ ಲೇಖನ ಮತ್ತು ಲೇಖನಗಳ ಉದ್ಧೃತ-ಇವುಗಳ ನಡುವೆ ವ್ಯತ್ಯಾಸವೇ ಇಲ್ಲವೆಂಬಂತೆ ಸಂಪಾದಕರು ತನ್ನ ದಗಲ್ಬಾಜಿ ಕೆಲಸಕ್ಕೆ ಸಮಜಾಯಿಷಿ ನೀಡಿದ್ದಾರೆ (ವಿಜಯ ಕರ್ನಾಟಕ ತಾ. 18.11.08. ಪುಟ 7). ಬಹುಶಃ ತಾನು ಈ ಬರಹವನ್ನು ಪ್ರಕಟಿಸುವ ಮೂಲಕ ಕುವೆಂಪು ಮತ್ತು ಅವರ ಮಗಳಿಗೆ ಉಪಕಾರವನ್ನೇ ಮಾಡುತ್ತಿದ್ದೇನೆ ಎಂದೂ ಈ ಭಂಡ ಭಾವಿಸಿರಬಹುದು. ಅದಕ್ಕೆಂದೇ ಅವರ ವಿವರಣೆಯಲ್ಲಿ, ಸೌಜನ್ಯಕ್ಕಾದರೂ ಲೇಖಕಿಯ ಕ್ಷಮೆ ಕೇಳುವ ಒಂದು ಮಾತೂ ಇಲ್ಲ!

ವಿ.ಕ.ದ ಸಂಪಾದಕ ಕೇವಲ ಭಂಡನಷ್ಟೇ ಆಗಿದ್ದರೆ ಅದೊಂದು ದೊಡ್ಡ ಸಮಸ್ಯೆಯೇ ಅಲ್ಲ. ಭಂಡರ ಜೊತೆ ಬಾಳುವೆ ನಡೆಸಬಹುದು. ಒಂದು ಮಟ್ಟದ ಭಂಡತನವಿಲ್ಲದೆ ಈ ಕಾಲದಲ್ಲಿ ಬದುಕುವುದೇ ಅಸಾಧ್ಯ ಎಂಬುದು ಅನುಭವಿಗಳು ಹೇಳುವ ಮಾತು. ಆದರೆ ಕ್ರೂರಿಗಳು, ನರಹಂತಕರು ಮತ್ತು ಜನಾಂಗದ್ವೇಷಿಗಳ ಜೊತೆ ಏಗುವುದು ಕಷ್ಟ. ವಿಜಯ ಕರ್ನಾಟಕ ಪ್ರತಿನಿತ್ಯವೂ ಪ್ರತಿಪಾದಿಸುವುದು ಈ ನರಹತ್ಯೆ ಮತ್ತು ಜನಾಂಗ ದ್ವೇಷದ ಆರ್‌ಎಸ್‌ಎಸ್ ಸಿದ್ಧಾಂತವನ್ನು. ಧರ್ಮ ಮತ್ತು ರಾಷ್ಟ್ರದ ಕುರಿತ ಆರ್‌ಎಸ್‌ಎಸ್ ಸಿದ್ಧಾಂತದಲ್ಲಿ ಸಂದೇಹ, ಸ್ವವಿಮರ್ಶೆ ಹಾಗೂ 'ಅನ್ಯ'ದ ಕುರಿತ ಕಾಳಜಿ ಮತ್ತು ತಿಳಿವಳಿಕೆಗಳಿಗೆ ಸ್ಥಾನವೇ ಇಲ್ಲ. ಮಹಾತ್ಮಾ ಗಾಂಧಿಯವರ ಹತ್ಯೆಯಿಂದ ಹಿಡಿದು ಒರಿಸ್ಸಾದ ಇತ್ತೀಚಿಗಿನ ಹತ್ಯಾಕಾಂಡದವರೆಗೆ, ತಾನು ಕಾರಣವಾದ ಅಪಾರ ಜೀವ ಹತ್ಯೆಯ ಬಗ್ಗೆ ಆರ್‌ಎಸ್‌ಎಸ್‌ಗೆ ಅಪರಾಧಿಭಾವವೂ ಇಲ್ಲ; ಪಶ್ಚಾತ್ತಾಪವೂ ಇಲ್ಲ; ಅದು ಕ್ಷಮೆ ಯಾಚಿಸುವುದೂ ಇಲ್ಲ. 'ತಾನು ಎಂದಿಗೂ ತಪ್ಪು ಮಾಡಲಾರೆ; ತನ್ನ ಯಾವ ಕೃತ್ಯವೂ ಅನ್ಯಾಯವಲ್ಲ, ಹಿಂಸೆಯಲ್ಲ' ಎಂಬ ದೃಢ ನಂಬಿಕೆ ಆರ್‌ಎಸ್‌ಎಸ್ ಸಿದ್ಧಾಂತದ ಭಾಗವೇ ಆಗಿದೆ. ಆದ್ದರಿಂದ ವಿ.ಕೆ. ಸಂಪಾದಕರ ನಡವಳಿಕೆ, ಕೇವಲ ಅಸಭ್ಯತನ ಎಂದು ಭಾವಿಸಬಾರದು. ಹಾಗೆ ನೋಡಿದರೆ ವಿ.ಕ. ಸಂಪಾದಕರು ಸೀನು ಬಂದರೆ ಕರ್ಚೀಫ್ ಮೂಗಿಗೆ ಅಡ್ಡ ಹಿಡಿಯುವಷ್ಟು ಸಭ್ಯರು; ಅವರು ನಾಗರಿಕರ ಹಾಗೆ ನೀಟಾಗಿ ಬಟ್ಟೆ ಹಾಕಿಕೊಳ್ಳುತ್ತಾರೆ. ಸಾಹಿತ್ಯ ಸಂಗೀತ ಇತ್ಯಾದಿಗಳಲ್ಲೂ ಅವರಿಗೆ ಒಂದು ಮಟ್ಟದ ಅಭಿರುಚಿ ಇರುವಂತೆ ಕಾಣುತ್ತದೆ. ಜರ್ಮನಿಯಲ್ಲಿ ಐದು ಮಿಲಿಯ ಯಹೂದಿಗಳ ನರಮೇಧ ನಡೆಸಿದ ನಾಝಿಗಳೂ ತಮ್ಮತಮ್ಮ ವೈಯಕ್ತಿಕ ಬದುಕಿನಲ್ಲಿ ಥೇಟು ವಿ.ಕ. ಸಂಪಾದಕರ ಹಾಗೆಯೇ ಸಭ್ಯಗೃಹಸ್ಥರಾಗಿದ್ದರು. ಅವರಲ್ಲಿ ಅನೇಕರು ಸಾಹಿತ್ಯ ಕಲೆ, ನಾಟಕಗಳ ರಸಿಕರೂ ಆಗಿದ್ದರು. ಕ್ಷಮಾಯಾಚನೆ ನಾಝಿಗಳ ಸಿದ್ಧಾಂತದಲ್ಲೂ ಇಲ್ಲ.

ತನ್ನ ವಾದವೇ ಸರಿ ಎಂಬ ಹಠ; 'ಅನ್ಯ'ದ ಕುರಿತ ಅತೀವ ಅಸಹನೆ ಹಾಗೂ ಕ್ಷಮಾಯಾಚನೆ- ಇವು ಒಂದಕ್ಕೊಂದು ವಿರುದ್ಧವಾಗಿರುವಂತಹವು. ಒರಿಸ್ಸಾದಲ್ಲಿ ಕ್ರೈಸ್ತ ಸಮುದಾಯದ ಮೇಲೆ ಸಾಮೂಹಿಕ ಹಿಂಸಾಚಾರ ಮತ್ತು ಕರ್ನಾಟಕದಲ್ಲಿ ಕ್ರೈಸ್ತ ಧಾರ್ಮಿಕ ಕೇಂದ್ರಗಳ ಮೇಲೆ ದಾಳಿಗಳು ನಡೆದ ಬೆನ್ನಿಗೇ ವಿಜಯ ಕರ್ನಾಟಕ ಮತಾಂತರ ಕುರಿತ ಈ ಸಂವಾದವನ್ನು ಹುಟ್ಟುಹಾಕಿವೆ. ಈ ಸಂವಾದಕ್ಕೆ ಚಾಲನೆ ನೀಡಿದ ಭೈರಪ್ಪನವರಾಗಲೀ, ಅವರ ಬೆಂಬಲಿಗರಾಗಲೀ ಒರಿಸ್ಸಾ, ಕರ್ನಾಟಕಗಳಲ್ಲಿ ನೊಂದ ಕ್ರೈಸ್ತರ ಬಗ್ಗೆ ಸಹಾನುಭೂತಿಯ ಒಂದು ಮಾತನ್ನೂ ಆಡಿಲ್ಲ; ದಾಳಿಕೋರರರನ್ನೂ ಖಂಡಿಸಿಲ್ಲ. ಈ ವಿಷಯವನ್ನೇ ಬದಿಗೊತ್ತಿ ಇವರು 'ಮತಾಂತರ'ದ ಸಮಸ್ಯೆಯನ್ನು-ಅದು ಸಮಸ್ಯೆಯೇ ಹೌದಾದರೆ-ಇಷ್ಟು ದೊಡ್ಡದಾಗಿ ಬೆಳೆಸುತ್ತಿರುವುದೇಕೆ? ಭಾರತದ ಇತರ ಕೆಲವು ರಾಜ್ಯಗಳ ಮಾದರಿಯಲ್ಲಿ ಕರ್ನಾಟಕದಲ್ಲೂ ಮತಾಂತರ ನಿಷೇಧ ಕಾನೂನನ್ನು ಜಾರಿಗೊಳಿಸುವ ಸಂಘ ಪರಿವಾರದ ಕಾರ್ಯಕ್ರಮಕ್ಕೆ ವಿಜಯ ಕರ್ನಾಟಕ ತನ್ನ ಈ ಸಂವಾದದ ಮುಖಾಂತರ ಒಂದು ವೇದಿಕೆಯನ್ನು ಒದಗಿಸಿದೆ. ಮತಾಂತರ ನಿಷೇಧ ಕಾನೂನು-ಈಗಾಗಲೇ ಗುಜರಾತ್, ಮಧ್ಯಪ್ರದೇಶ, ಒರಿಸ್ಸಾ ಮತ್ತು ಇತರ ರಾಜ್ಯಗಳಲ್ಲಿರುವಂತೆ-ಪ್ರಜೆಗಳ ನಂಬಿಕೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ನಿರಾಕರಿಸುತ್ತದೆ. ಆಮಿಷದ ಮತಾಂತರಗಳನ್ನು ನಿಷೇಧಿಸುವ ನೆವದಲ್ಲಿ ಈ ಕಾನೂನು ಪ್ರಜೆಗಳ ವೈಯಕ್ತಿಕ ವ್ಯವಹಾರಗಳಲ್ಲಿ ಪ್ರಭುತ್ವ ಮೂಗು ತೂರಲು ಅವಕಾಶ ಕಲ್ಪಿಸಿಕೊಡುತ್ತದೆ. ಹಿಂದೂ ಧರ್ಮವೇ ಈ ನಾಡಿನ 'ಪ್ರಧಾನ' ಹಾಗೂ 'ಮೂಲ ಧರ್ಮ'ವೆಂದೂ, ಇತರ ಎಲ್ಲ ಮತ ಧರ್ಮಗಳೂ ಹೊರಗಿನಿಂದ ಬಂದ 'ಅನ್ಯಮತ'ಗಳೆಂದೂ ಭಾವಿಸುವ ಸಂಘ ಪರಿವಾರದ ನಿಲುವನ್ನು ಮತಾಂತರ ನಿಷೇಧ ಕಾನೂನು ಶಾಸನಬದ್ಧಗೊಳಿಸುತ್ತದೆ. ವಿಜಯ ಕರ್ನಾಟಕ ಈಗ ಇಂತಹ ಒಂದು ಕರಾಳ ಕಾನೂನಿನ ಹೆರಿಗೆಗೆ ಸೂಲಗಿತ್ತಿಯಂತೆ ವರ್ತಿಸುತ್ತಿದೆ!


ಭೈರಪ್ಪ


ಅದಕ್ಕೆ ಸರಿಯಾಗಿ ಈ ಸಂವಾದದಲ್ಲಿ ಭೈರಪ್ಪ ಮತ್ತು ಅವರ ಸಂಗಡಿಗರು ಭಾರತೀಯರಿಗೆ ಹಿಂದೂ ಧರ್ಮ ಹುಟ್ಟಿನಿಂದಲೇ ಬಂದದ್ದು; ಆದರೆ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಹೊರಗಿನಿಂದ ಬಂದ "ಅನ್ಯಮತಗಳು"- ಹಾಗಾಗಿ ಇಲ್ಲಿನ ಕ್ರೈಸ್ತರು ಮತ್ತು ಮುಸ್ಲಿಮರು ಮತಾಂತರಗೊಂಡವರು ಎಂದು ವಾದಿಸುತ್ತಿದ್ದಾರೆ. ಯಾವುದೇ ಧರ್ಮ ಹುಟ್ಟಿನಿಂದಲೇ ಬರುತ್ತದೆ ಅಥವಾ 'ರಕ್ತದಲ್ಲೇ ಅದು ಬೆರೆತಿದೆ' ಎಂದು ವಾದಿಸುವುದೇ ಜನಾಂಗವಾದದ ತಿರುಳು. ವಿ.ಕ.ದ ಸಂಪಾದಕರು ಹಾಗೂ ಭೈರಪ್ಪ ಮತ್ತು ಅವರ ಬೆಂಬಲಿಗರು ಪ್ರಚ್ಛನ್ನ ನಾಝಿಗಳು. ಅದೃಷ್ಟವಶಾತ್ ಜಗತ್ತಿನ ಬೇರೆ ಭಾಷೆಗಳಲ್ಲಿ ಮಾತ್ರವಲ್ಲ ಕನ್ನಡದಲ್ಲಿ ಕೂಡ 'ಮತ' ಮತ್ತು 'ಮತಾಂತರ' ಕುರಿತು ಭೈರಪ್ಪ ಮತ್ತು ಇತರ ಗೊಡ್ಡು ಪಂಡಿತರ ನಿರೂಪಣೆಗಳಿಗಿಂತ ಸಂಪೂರ್ಣವಾಗಿ ಬೇರೆಯಾದ ನಿರೂಪಣೆಗಳು ಮತ್ತು ಕಥನಗಳಿವೆ. ಶಿವರಾಮ ಕಾರಂತರ 'ಚೋಮನದುಡಿ'ಯಲ್ಲಿ ಬರುವ ಮತಾಂತರ ನಿರೂಪಣೆ, ಅಸಾಧಾರಣ ಕಲಾತ್ಮಕತೆ ಮತ್ತು ಮಾನವೀಯ ಸಂವೇದನೆಗಳನ್ನು ಮೈಗೂಡಿಸಿಕೊಂಡಿರುವ ಮತ್ತು ಇಂದಿಗೂ ಪ್ರಸ್ತುತವಾಗಿರುವ ಒಂದು ಸಾಮಾಜಿಕ ದಾಖಲೆ. ಶಿವರಾಮ ಕಾರಂತರು ಮತಾಂತರವನ್ನು ಸಮರ್ಥಿಸುವುದಿಲ್ಲ, ಆದರೆ ಮತಾಂತರ ನಡೆಯುವ ಸಾಮಾಜಿಕ ಸಂದರ್ಭವನ್ನು ಅವರು ವಸ್ತುನಿಷ್ಠವಾಗಿ ಚಿತ್ರಿಸುತ್ತಾರೆ. ಚೋಮನಂತಹವರಿಗೆ ಅವರ ಸ್ವಧರ್ಮವೇ ಒಂದು ಸೆರೆಮನೆಯಾಗುವ ವಾಸ್ತವವನ್ನು ಕಾರಂತರು ನಿಷ್ಠುರವಾಗಿ,

ವಿಜಯ ಕರ್ನಾಟಕ

ಆದರೆ ಸಂವೇದನಶೀಲತೆಯೊಂದಿಗೆ ನಿರೂಪಿಸುತ್ತಾರೆ. ಮತಾಂತರದ ಪ್ರಶ್ನೆ ಕಾರಂತರಿಗೆ, 'ಹಿಂದೂ ಧರ್ಮ ಮೇಲೋ ಕ್ರೈಸ್ತಧರ್ಮ ಮೇಲೋ?' ಎಂಬ ಡಿಬೇಟಿನ ವಿಷಯವೇ ಅಲ್ಲ; 'ಚೋಮನದುಡಿ'ಯಲ್ಲಿ ಅದು ಮನುಷ್ಯ ಸ್ವಾತಂತ್ರ್ಯ ಮತ್ತು ಮಿತಿಗಳ ಶೋಧನೆಯಾಗಿದೆ.

ಮತಾಂತರದ ಕುರಿತ ಇಷ್ಟೇ ಮಾನವೀಯವಾದ ನಿರೂಪಣೆ ನಮಗೆ ದೊರೆಯುವುದು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಹಾಗೂ ಅವರ ಆತ್ಮಕಥನ 'ನೆನಪಿನ ದೋಣಿಯಲ್ಲಿ' ಕೃತಿಯಲ್ಲಿ. ಕುವೆಂಪು ಮತಾಂತರವನ್ನು ಖಂಡಿಸುತ್ತಾರೆ. ಆದರೆ ಅದು ಅವರ ಪ್ರಕಾರ ಅನ್ಯಧರ್ಮಗಳ ಆಕ್ರಮಣ ಶೀಲತೆಗಿಂತ ಹೆಚ್ಚಾಗಿ ಹಿಂದೂ ಧರ್ಮದ ಘೋರ ಅಸಮಾನತೆಗಳಿಂದ ತಲೆದೋರಿರುವ ಸಮಸ್ಯೆ. ಕ್ರೈಸ್ತ ಸಮುದಾಯವನ್ನು ಅಮೂರ್ತವಾಗಿ ಕಾಣದೆ, ಬಿಡಿಬಿಡಿ ವ್ಯಕ್ತಿಗಳು, ಕುಟುಂಬಗಳು ಮತ್ತು ಅನಂತರ ಒಂದು ಸಮುದಾಯವಾಗಿ ಚಿತ್ರಿಸಿರುವ ನಾ. ಡಿಸೋಜರ ಕತೆ ಕಾದಂಬರಿಗಳೂ ಆ ಸಮುದಾಯದ ವಸ್ತುನಿಷ್ಠ ನಿರೂಪಣೆಗಳಾಗಿವೆ.

ಹಾಗೆಯೇ ಮತಾಂತರಕ್ಕೆ ಪ್ರೇರಣೆ ನೀಡುವ ಸಾಮಾಜಿಕ, ಸಾಂಸ್ಕೃತಿಕ ಒತ್ತಾಸೆಗಳೇನು ಎಂಬುದನ್ನು ಮನವರಿಕೆ ಮಾಡಿಕೊಳ್ಳಲು ಪಂಡಿತ ರಮಾಬಾಯಿ (1858-1922)ಯವರ ಜೀವನವೇ ನಮ್ಮೆದುರು ತೆರೆದ ಪುಸ್ತಕವಾಗಿದೆ. ಪಂಡಿತ ರಮಾಬಾಯಿ ಕರ್ನಾಟಕದವರು; ದ.ಕ. ಜಿಲ್ಲೆಯವರು. ಕರ್ಮಠ ಚಿತ್ಪಾವನ ಬ್ರಾಹ್ಮಣ ಕುಟುಂಬವೊಂದರಲ್ಲಿ ಹುಟ್ಟಿದ ರಮಾಬಾಯಿ, ಅಂದಿನ ವಾಡಿಕೆಯಂತೆ ಬಾಲ್ಯದಲ್ಲೇ ವಿವಾಹವಾಗಿ, ಅಕಾಲದಲ್ಲಿ ವಿಧವೆಯಾದರು: ಅವರು ಪುನರ್ ವಿವಾಹ-ಅದೂ ಬ್ರಾಹ್ಮಣೇತರನೊಬ್ಬನ ಜೊತೆ-ಮಾಡಿಕೊಳ್ಳುವ ಅಸಾಧಾರಣ ಧೈರ್ಯ ತೋರಿಸಿದ ಮಹಿಳೆ. ರಮಾಬಾಯಿಯವರ ಕುಟುಂಬದವರೂ, ಸ್ವಜಾತಿ ಬಾಂಧವರೂ ಆಕೆಯನ್ನು ಬಹಿಷ್ಕರಿಸಿದಾಗ ರಮಾಬಾಯಿ ಕ್ರೈಸ್ತಧರ್ಮಕ್ಕೆ ಮತಾಂತರ


ವಿಶ್ವೇಶ್ವ

ಗೊಂಡರು. ಅವರ ಬದುಕೇ ಒಂದು ರೋ ಕತೆ. 1884-1886 ರ ಅವಧಿಯಲ್ಲಿ ಆಕೆ ಇ ಸಂಸ್ಕೃತ ಪ್ರಾಧ್ಯಾಪಕಿಯೂ ಆಗಿದ್ದರು. ಪುಣೆಯ ಮಹಿಳಾ ಸಮಾಜ ಎಂಬ ಶಿಕ್ಷಣ ಸಂ ಭಾರತದ ಪ್ರಥಮ ಮಹಿಳಾ ವಿಶ್ವವಿದ್ಯಾಲ ಸ್ಥಾಪಿಸಿದ್ದ ರಮಾಬಾಯಿ, ತನ್ನ ಇಡೀ ವಿಧವೆಯರು, ರೋಗಿಷ್ಠ ಮಹಿಳೆಯರು ಪತಿತೆಯರ ಕಲ್ಯಾಣಕ್ಕಾಗಿ ಮೀಸಲಾಗಿಟ್ಟವರ ಆಗಲೂ ಬಾಲಗಂಗಾಧರ ತಿಲಕರಂತಹ ಬಲ ಪ್ರತಿಗಾಮಿಗಳು ಆಕೆಯನ್ನು ಮತಾ ತೊಡಗಿದ್ದಾರೆ ಎಂದು ಆಪಾದಿಸಿದ್ದರು. ಭೈ ಗಾಗಲೀ, ಅವರ ಅನುಯಾಯಿಗಳಿಗಾಗಲಿ ಬಾಯಿಯವರ ನೆನಪೇ ಆಗಲಿಲ್ಲ! ತಮ್ಮ ಕೊಟ್ಟಿರುವ ಆದಾರಗ್ರಂಥಗಳ ಪಟ್ಟಿ ನೋಡಿದ ಅಜ್ಞಾನದ ಬಗ್ಗೆ ಕನಿಕರವಾಗುತ್ತದೆ. ಫ್ರೋಜರ್ ನವರತ್ನ ರಾಜಾರಾಮ್, ಸೀತಾರಾಮ್ ಗೋ ಫ್ರಾನ್ಸ್ವಾ ಗೋಥಿಯೆ!- ಎಲ್ಲರೂ ನಾಲ್ಕನೆಯ ಆರ್‌ಎಸ್‌ಎಸ್ ಕರಪತ್ರಗಳ ಬರಹಗಾರರು

ಭಾರತದ ಅತ್ಯಂತ ಕಿರಿಯ ಮತ್ತು ಸ ದಾಯಗಳಲ್ಲಿ ಒಂದಾದ ಕ್ರೈಸ್ತರ ಮೇಲ ಹಿಂಸಾಚಾರದ ಬಗ್ಗೆ ಒಂದು ಆಡದೆ ವಿ.ಕ. ಸಂಪಾದಕರು ತರದ ಕುರಿತು "ಮುಕ್ತ ನಡೆಯಲಿ" ಎಂದು ಕರೆ ನಿ ಗುಜರಾತ್ ನರಮೇಧಕ್ಕೆ ಪೂ ಯಾಗಿ ಅಲ್ಲಿನ ಡಾಂಗ್ಸ್ ಕ್ರೈಸ್ತರ ಮೇಲೆ ಹಿಂಸಾಚಾರ ನಡೆದಾಗಲೂ, ಗ್ರಹಾಂ ಸ್ಟೇನ್ಸ್ ಮತ್ತು ಆತನ ಮಕ್ಕಳ ಹತ್ಯೆ ನಡೆ ಸಂಘ ಪರಿವಾರ ಇದೇ ಕರೆಯನ್ನು ಕೊಟ್ಟಿತು ಪರಿವಾರದ ಆಶಯಕ್ಕೆ ತಕ್ಕ ಹಾಗೆಯೇ ಭೈರ ಕಂಪೆನಿ ಈ ಚರ್ಚೆಯನ್ನು ನಡೆಸಿಕೊಟ್ಟಿದೆ. ಈ ಚರ್ಚೆಯಲ್ಲಿ ಒಂದು ಅಮೂಲ್ಯವಾದ ತಿಯೂ ಹೊರಬಿದ್ದಿದೆ. ಬೌದ್ಧಧರ್ಮ ಧರ್ಮದ್ದೇ ಒಂದೇ ಭಾಗವಂತೆ! ಇದನ ಗಳೆಯಲು ಸದ್ಯಕ್ಕೆ ಭಾರತದಲ್ಲಿ 'ಮೂಲಬೌದ್ಧ' ಮತಾಂತರಗೊಂಡು ಬೌದ್ಧರಾದವರಲ್ಲ ಅರ್ಥದಲ್ಲಿ) ಉಳಿದಿಲ್ಲ. ನಮ್ಮ ಭಾಷಿಕ ಸಂಸ್ಕೃ ಆ ಧರ್ಮದ ನೆನಪು ಉಳಿದಿಲ್ಲ. ಹಾಗ ಸಂಶೋಧನೆಯನ್ನು ಅಲ್ಲಗಳೆಯುವವರು ಭಾ ಯಾರೂ ಇಲ್ಲ. ಇನ್ನು ಶ್ರೀಲಂಕಾ, ಥೈ ಕ್ಯಾಂಬೋಡಿಯಾ, ಬರ್ಮಾ, ಜಪಾನ್ ಮ ದೇಶಗಳ ಬೌದ್ಧರು ತಾವು ಹಿಂದೂಗಳು ಒಪ್ಪಿಕೊಳ್ಳುತ್ತಾರೋ? ಇತರ ದೇಶಗಳ ಅಭಿಪ್ರಾಯ ಹೇಗೂ ಇರಲಿ, ಶ್ರೀಲಂಕಾದ ಬೌ ತಮ್ಮನ್ನು ತಾವು ಹಿಂದೂಗಳು ಎಂದು ಕೊಳ್ಳುವುದು ಕಷ್ಟ. ಯಾಕೆಂದರೆ ಆ ದೇಶದ ಮೂಲದ ಪ್ರಜೆಗಳನ್ನು-ಅವರಲ್ಲಿ ಹೆಚ್ಚಿನವರು ಗಳು-ಅಲ್ಲಿನ ಬೌದ್ಧಪ್ರಜೆಗಳು ತಮ್ಮ ಶತ್ರು ಪರಿಗಣಿಸುತ್ತಾರೆ.

ಮತಾಂತರ ಸಮಸ್ಯೆಯ ಮಾನವೀಯ ಆ ಗಳನ್ನು ಸಂಪೂರ್ಣವಾಗಿ ಕಡೆಗಣಿಸಿ, ಹಿಂದೂ ಧ ಹೆಗ್ಗಳಿಕೆ ಮತ್ತು ಅನ್ಯಮತಗಳ ನಿಂದನೆಗೆ ಅದನ ನೆಪವಾಗಿಸಿಕೊಂಡ ಭೈರಪ್ಪ ಮತ್ತು ಇತರ ಪ ಭಯಂಕರರ ವಾದ ವೈಖರಿ ಹಳೆಯ beechi ಒಂದನ್ನು ನೆನಪಿಗೆ ತರುತ್ತದೆ.

"ತಿಂಮ ನೋಡುವುದಕ್ಕೆ ಮನ್ಮಥನ ಹಾಗ

"ಯಾವ ಬೇಕೂಫ ಹಾಗಂದೋನು?"

"ತಿಂಮ."

-ಜಿ. ರಾಜಶೇ






...ಾವಳಿ ಅಲೆ' ಮೇಲೆ ಮತ್ತೆ ದಾಳಿ

...ಮ ಪ್ರಗತಿಪರ ದಿನಪತ್ರಿಕೆ 'ಕರಾವಳಿ ಅಲೆ' ಮೇಲೆ ಮತ್ತೆ ... ಮಾಡಿದ್ದಾರೆ. ಮೊನ್ನೆ ನವೆಂಬರ್ 17ರ ಬೆಳಗಿನ ಜಾವ ...ಾರಿಗೆ ಕಾರಿನಲ್ಲಿ ಮುಸುಕು ಹಾಕಿಕೊಂಡು ಬಂದ ...ತಂಡ ಪತ್ರಿಕಾ ಕಚೇರಿಯ ಗೇಟನ್ನು ಒಡೆದು ಸೆಕ್ಯೂರಿಟಿ ... ರಕ್ಷಣೆಗಿದ್ದ ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಹಲ್ಲೆ ...ಿ ಗಾಜು ಮತ್ತು ಫಿಟ್ಟಿಂಗ್‌ಗಳನ್ನು ಪುಡಿ ಪುಡಿ ...ಮನಗೈದಿದ್ದಾರೆ.

...ವಳಿಯೇ ಕೋಮುವಾದಿಗಳ ಅಡ್ಡೆಯಾಗಿ ಹೋಗಿರುವ ...ದುಲ್ಲಿ ಕೋಮು ಸೌಹಾರ್ದತೆಯ ಭರವಸೆಯನ್ನು ...ಿ. ಕೆಲವೇ ಕೆಲವು ಶಾಂತಿಪ್ರಿಯರಲ್ಲಿ 'ಕರಾವಳಿ ಅಲೆ' ... ಭಜರಂಗ ದಳ ಮತ್ತು ವಿಎಚ್‌ಪಿಯ ಮಂಗಗಳು ... ದಳ್ಳುರಿ ಹಚ್ಚಿದರೂ ಅದನ್ನು ಖಂಡತುಂಡವಾಗಿ ... ಸೌಹಾರ್ದತೆ ನೆಲೆಸುವಂತೆ ಮಾಡುವಲ್ಲಿ ಈ ಪತ್ರಿಕೆಗೆ ...ಾತ್ರವಿತ್ತು. ಇತ್ತೀಚೆಗೆ ...ತ ಚೆಡ್ಡಿಗಳು ಚರ್ಚು ...ಾಳಿ ನಡೆಸಿದಾಗಲೂ ...ತಿಯಾಗಿ ಘಟನೆಗಳ ...ೊಟ್ಟಿತ್ತು. ಆ ಕಾರಣ ... ಕೋಮುವಾದಿಗಳ ...ಯಾಗಿತ್ತು. 'ಕರಾವಳಿ ...'ಗೊಂಡಂತೆ ಕೋಮು ...ಕಾಪಾಡಲು ಶ್ರಮಿಸು ...ಯ ಪ್ರಗತಿಪರರನ್ನು, ... ಹೊಸಕಿಹಾಕುವುದಕ್ಕೆ ...ಪ್ರಯತ್ನ ಮಾಡುತ್ತಲೇ ...ದ ಮುಂದುವರೆದ ... 'ಕರಾವಳಿ ಅಲೆ' ಮೇಲೆ ನಡೆದಿರುವ ದಾಳಿ.

...ದ ಆರಂಭದಲ್ಲಿಯೂ ಚೆಡ್ಡಿಗಳು, ಚೆಡ್ಡಿ ಪತ್ರಕರ್ತರು, ... 'ಕರಾವಳಿ ಅಲೆ'ಯ ಮೇಲೆ ಮುಗಿಬಿದ್ದಿದ್ದರು. ಜೈನ ...ಗರ ಎಂಬ ಅವಿವೇಕಿ ಬಟ್ಟೆಯನ್ನೆಲ್ಲಾ ಬಿಚ್ಚಿ ಕರ್ನಾಟಕದ ... ಅಲೆದಾಡುತ್ತಿದ್ದ ಸಂದರ್ಭವದು. ಬೆತ್ತಲೆ ತಿರುಗುವುದು ...ಯಲ್ಲಿ ಅಪರಾಧವೆಂದೂ, ಬೆತ್ತಲೆ ಪೂಜೆಯನ್ನು ...ಾವು ತರುಣ ಸಾಗರನ ಬೆತ್ತಲೆ ಪ್ರದರ್ಶನವನ್ನೇಕೆ ...ಂದಷ್ಟೇ ಸೀತಾರಾಂ ತಮ್ಮ ಪತ್ರಿಕೆಯಲ್ಲಿ ಬರೆದಿದ್ದರು. ...ಗಳಿಗೆ ಬೆಂಕಿ ಹಚ್ಚಲು. ಯಾವನೋ ತಿರಬೋಕಿಯಿಂದ ...ಡಿಸಿ ಪತ್ರಿಕೆಯ ಮಾಲಿಕ ಬಿ.ವಿ.ಸೀತಾರಾಂ ಮತ್ತು ...ೋಹಿಣಿಯನ್ನು ಎರಡೆರಡು ಬಾರಿ ಅರೆಸ್ಟ್ ಮಾಡಿಸಿ ...ದುರಂತ ಎಂದರೆ, ಪತ್ರಕರ್ತನೊಬ್ಬನ ಮೇಲೆ ಹೀಗೆ ...ಗಿಬಿದ್ದಾಗ ಅಲ್ಲಿನ ಕಾರ್ಯನಿರತ ಪತ್ರಕರ್ತರ ಸಂಘವೂ ... ಚಕಾರವೆತ್ತಿರಲಿಲ್ಲ.



ಸಚಿವ ಪಾಲೇಮಾರ್ 'ಕರಾವಳಿ ಅಲೆ' ಕಚೇರಿಗೆ ಭೇಟಿ ಇತ್ತಾಗ...

ಸೀತಾರಾಂ ಮತ್ತು ರೋಹಿಣಿಯವರು ಹಾಗೂಹೀಗೂ ಜಾಮೀನಿನ ಮೇಲೆ ಹೊರಬಂದ ಮೇಲೂ ಚೆಡ್ಡಿಗಳ ಕಾಟ ತಪ್ಪಿರಲಿಲ್ಲ; ಫೋನಿನ ಮೇಲೆ ಫೋನು ಕರೆಗಳನ್ನು ಮಾಡಿ ಅವರಿಗೆ ಧಮಕಿ ಹಾಕುವುದು, ಬೆದರಿಸುವುದನ್ನು ಮುಂದುವರೆಸಿಯೇ ಇದ್ದರು. ಏಕೆಂದರೆ, ಸೀತಾರಾಂ ಅವರ ಲೇಖನಿ ಕೋಮು ಸೌಹಾರ್ದಕ್ಕಾಗಿ ಬರೆಯುವುದನ್ನು ನಿಲ್ಲಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಸೀತಾರಾಂ ಅವರು ಜಿಲ್ಲಾಡಳಿತದಿಂದ ರಕ್ಷಣೆ ಕೋರಿದ್ದರು. 'ಕರಾವಳಿ ಅಲೆ'ಗೆ ಸೂಕ್ತ ರಕ್ಷಣೆ ನೀಡುವಂತೆ ಖುದ್ದು ಡಿಜಿಪಿಯವರೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಆದೇಶವಿತ್ತಿದ್ದರು.

ಆಗಲೂ ಚೆಡ್ಡಿಗಳಿಂದ ಸೀತಾರಾಂಗೆ ಕಿರುಕುಳ ತಪ್ಪಿರಲಿಲ್ಲ. ಮೊನ್ನೆ 'ಕರಾವಳಿ ಅಲೆ'ಯ ಕಚೇರಿಯನ್ನು ಧ್ವಂಸಗೊಳಿಸಿರುವುದು ಅದರ ಮುಂದುವರೆದ ಭಾಗ. ಇದು ಇಲ್ಲಿಗೇ ನಿಲ್ಲುವುದೂ ಇಲ್ಲ.

ಪೊಲೀಸ್ ರಕ್ಷಣೆಯಿದ್ದಾಗಲೂ ದಾಳಿ ಮಾಡುತ್ತಾರೆಂದರೆ ಇದನ್ನು ಪೊಲೀಸರ ವೈಫಲ್ಯ ಎಂದಷ್ಟೇ ಹೇಳಬೇಕೋ ಅಥವ ಪೊಲೀಸರು ಖಾಕಿ ಯೂನಿಫಾರ್ಮ್ ಒಳಗೆ ಖಾಕಿ ಚೆಡ್ಡಿಯನ್ನೂ ತೊಟ್ಟಿದ್ದಾರೆಂದು ಅನುಮಾನ ಪಡಬೇಕೋ? ಎರಡನೆಯದೇ ಸೂಕ್ತವೆನಿಸುತ್ತದೆ. 'ನೀನು ಸತ್ತಂಗೆ ಮಾಡು ನಾನು ಅತ್ತಂಗೆ ಮಾಡ್ತೀನಿ' ಎಂಬುದು ಸಂಘಪರಿವಾರ ಮತ್ತು ಪೊಲೀಸ್ ವ್ಯವಸ್ಥೆಯ ನಡುವಿನ ಅಲಿಖಿತ ಒಡಂಬಡಿಕೆ. ಈ ಅನೈತಿಕ ಸಂಬಂಧವೇ ಸಂಘಪರಿವಾರಿ ದಾಳಿಕೋರರಿಗೆ ಎಲ್ಲಿಲ್ಲದ ಕಸುವನ್ನು ತಂದುಕೊಡುತ್ತದೆ.

ಇನ್ನೊಂದೆಡೆ ಬಿಜೆಪಿಗಳೂ ಈಗ ಮೊಸಳೆ ಕಣ್ಣೀರು ಸುರಿಸಲಾರಂಭಿಸಿದ್ದಾರೆ. ಘಟನೆ ನಡೆದ 'ಕರಾವಳಿ ಅಲೆ'ಯ ಬೈಕಂಪಾಡಿ ಪತ್ರಿಕಾ ಕಚೇರಿಗೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಪಾಲೇಮಾರ್ "ಪೊಲೀಸರ ಮೇಲೆ ಹಲ್ಲೆ ನಡೆಸಿ, ಪತ್ರಿಕಾ ಕಚೇರಿ ಮೇಲೆ ದಾಳಿ ಮಾಡಿರುವುದು ಖಂಡನೀಯ. ಇಂತಹ ಸಂದರ್ಭದಲ್ಲಿ 'ಕರಾವಳಿ ಅಲೆ' ಪತ್ರಿಕೆಗೆ ಇನ್ನಷ್ಟು ಭದ್ರತೆ ನೀಡುವ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ಕೊಡಲಾಗುವುದು" ಎಂದು ಹೇಳಿಹೋಗಿದ್ದಾನೆ. ಆದರೆ ಈತನಕ ಕೆಲಸ ಮಾತ್ರ ಏನೂ ಆಗಿಲ್ಲ.

ಗೊಬ್ಬರ ಕೇಳಿದ ರೈತರಿಗೆ ಗುಂಡು ಕೊಟ್ಟದ್ದಾಯಿತು. ಚರ್ಚುಗಳ ಮೇಲೆ ನಿರಂತರವಾಗಿ ದಾಳಿ ಮಾಡಿದ್ದಾಯಿತು. ಈಗ ಪ್ರಗತಿಪರ ಪತ್ರಕರ್ತರನ್ನು ಅಟಕಾಯಿಸಿಕೊಳ್ಳುತ್ತಿದ್ದಾರೆ. ಯಡ್ಡಿ ಸರ್ಕಾರದ ಐದು ವರ್ಷಗಳಲ್ಲಿ ಇನ್ನೇನು ನೋಡಬೇಕಿದೆಯೋ?

ಕುಮಾರ್ ಬುರಡಿಕಟ್ಟಿ

...ರ್ಥ ಬಲಿದಾನ!

...0

...ಸುದಾದ ಎರಡು ರೂಟ್‌ಗಳನ್ನು ಗುರುತಿಸಿ ಆ ಎರಡೂ ...ಗಳನ್ನು ತುಂದಿರಿಸಿದ್ದರು. ಪೊಲೀಸರು ನಿರೀಕ್ಷಿಸಿದಂತೆ ಹಿಡಿದು ದಳ ಬಂದಾಗ ಗುಂಡಿಗೆ ಬಿಟ್ಟು ಅವರಿಗೆ ಬೇರೆ ಆಯ್ಕೆಯೇ ಇರಲಿಲ್ಲ. ...ವ ಮೊದಲೇ ಸ್ಥಳದಲ್ಲಿದ್ದ ಪೊಲೀಸರು ...ಹಲ್ಲೇ ಚಿಕ್ಕ ಬಯಲಿನಂತಾ ಪ್ರದೇಶಕ್ಕೆ ...ಗ ದಳದ ಪ್ರತಿಯೊಬ್ಬನೂ ಕಣ್ಣಿಗೆ ಕಾಣುವಂತಾ ...ದ ಜಾಗದಲ್ಲಿ ಅದಾಗಲೇ ಪೊಜಿಷನ್ ...ಡ್ಡ ಗೆರಿಲ್ಲಾಗಳ ಮೇಲಿನ ಗುರಿ ತಪ್ಪದಂತೆ ...ಪೊಲೀಸರು ... ಇದ್ದವು.

...ಕಮಾಂಡೋ ಪೊಲೀಸರ ಈ ಗೆರಿಲ್ಲಾಗಳ ... [illegible]



ಯಾಕೆಂದರೆ ಪೊಲೀಸಿನವರದೂ ಸೇರಿದಂತೆ ಈ ಸಾವುಗಳೆಲ್ಲವೂ ವ್ಯರ್ಥ ಬಲಿದಾನವಾಗಿದೆ.

ಜನತೆಯ ನೆಮ್ಮದಿಗಾಗಿಯೇ ಈ ಹೋರಾಟ-ಪ್ರತಿ ಹೋರಾಟಗಳು ನಡೆಯುತ್ತಿವೆಯೆಂದು ಒಂದು ಕಡೆ ನಕ್ಸಲರೂ ಮತ್ತೊಂದೆಡೆ ಪೊಲೀಸರೂ ಹೇಳಿಕೊಳ್ಳುತ್ತಿದ್ದಾರೆ.

ಇದರಲ್ಲಿ ಪೊಲೀಸರ ಮಾತು ನಂಬಿಕೆಗೆ ಅನರ್ಹವಾದದ್ದಲ್ಲ ಬಿಡಿ. ಆದರೆ ಯಾವ ಜನರಿಗಾಗಿ ಹೋರಾಡುತ್ತಿದ್ದೇವೆಂದು ಇವರು ನಕ್ಸಲರು ಹೇಳಿಕೊಳ್ಳುತ್ತಿದ್ದಾರೆಯೋ ಆ ಗ್ರಾಮೀಣ ಜನರು ಹಾಗೂ ಕರ್ನಾಟಕದ ಜನ ಈ ವಿದ್ಯಮಾನಗಳಿಗೆ ಕೇವಲ ಪ್ರೇಕ್ಷಕರಂತಾಗಿ ಮಾತ್ರ ಉಳಿಯಬೇಕಾಗಿ ಬಂದಿರುವುದೂ ದುರಂತ.

ಈ ಸರಣಿ ಹತ್ಯಾಕಾಂಡಗಳೆಂಬ ರುದ್ರ ಭಯಾನಕ ನಾಟಕದಲ್ಲಿ ಪೊಲೀಸರು ಪ್ರತಿ ಬಾರಿ ತೆರೆ ಮೇಲೇಳುತ್ತಾ ಹೋದಂತೆ ಹುತಾತ್ಮ ನಕ್ಸಲರ ಹೊಸ ದೃಶ್ಯಗಳು ಗೋಚರಿಸುತ್ತಿವೆ.

ಸಂಘ ಪರಿವಾರಿಗಳಿಗೆ ಸಂತಸವನ್ನು, ಸಾಮಾಜಿಕ ಕಾಳಜಿಯುಳ್ಳವರಿಗೆ ... [illegible] ■


ಹಾಲಿ-ಮಾಜಿ ಎಮ್ಮೆಲ್ಲೆಗಳ ಗುದ್ದಾಟದಲ್ಲಿ ಪ್ರದೀಪ್ ಗಾಯಬ್!



ಬಾಲರಾಜ್



ಧ್ರುವನಾರಾಯಣ್



ಪ್ರದೀಪ್



ಪರಮೇಶ್ವರಯ್ಯ

ರಾಜಕೀಯ ಎಷ್ಟು ಗಬ್ಬೆದ್ದು ಹೋಗಿದೆ ಎಂಬುದಕ್ಕೆ ಇದು ಇನ್ನೊಂದು ನಿದರ್ಶನ. ದುಡ್ಡು ಕೊಟ್ಟು ಜನಪ್ರತಿನಿಧಿಗಳನ್ನು ಖರೀದಿ ಮಾಡುವ ಕೆಟ್ಟ ಸಂಸ್ಕೃತಿ ಈಗ ಜಿಲ್ಲೆಜಿಲ್ಲೆಗೂ ಕಾಲರಾದಂತೆ ವ್ಯಾಪಿಸುತ್ತಿದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಕೊಳ್ಳೇಗಾಲ ನಗರಸಭಾ ಸದಸ್ಯರ ಖರೀದಿ. ನಗರಸಭೆ ಗದ್ದುಗೆ ಹಿಡಿಯುವ ದಕ್ಕಾಗಿ ಸದಸ್ಯರ ಖರೀದಿ ಭರಾಟೆಯಲ್ಲಿರುವ ಹಾಲಿ ಶಾಸಕ ಕಾಂಗ್ರೆಸ್‌ನ ಧ್ರುವನಾರಾಯಣ್ ಹಾಗೂ ಮಾಜಿ ಶಾಸಕ ಜೆಡಿಎಸ್‌ನ ಬಾಲರಾಜ್ ನಡುವಿನ ತಿಕ್ಕಾಟ ತಾರಕಕ್ಕೇರಿದೆ. ಈ ತಿಕ್ಕಾಟದಲ್ಲಿಯೇ ನಗರಸಭಾ ಸದಸ್ಯ ಮಹದೇವ ಪ್ರಸಾದ್ (ಪ್ರದೀಪ್) ಗಾಯಬ್ ಆಗಿದ್ದಾನೆ. ಆತನನ್ನು ಮಾಜಿ ಶಾಸಕ ಬಾಲರಾಜ್ ಕಿಡ್ನಾಪ್ ಮಾಡಿದ್ದಾನೆಂದು ಆತನ ಪತ್ನಿ ರತ್ನ ದಿನಕ್ಕೊಂದು ಪತ್ರಿಕಾಗೋಷ್ಠಿ ಮಾಡಿ ಹೇಳುತ್ತಿರುವುದಲ್ಲದೇ ಈ ಸಂಬಂಧ ಪೊಲೀಸರಿಗೆ ದೂರು ನೀಡಿದ್ದಾಳೆ. ಇದಕ್ಕೆ ಪ್ರತಿಯಾಗಿ, ಪ್ರದೀಪ್‌ನನ್ನು ಕಿಡ್ನಾಪ್ ಮಾಡಿಲ್ಲ, ಆತ ನಮ್ಮೊಂದಿಗಿದ್ದಾನಷ್ಟೇ ಎಂದು ಬಾಲರಾಜ್ ಹೇಳುತ್ತಿದ್ದಾನೆ. ಒಟ್ಟಿನಲ್ಲಿ ಪ್ರದೀಪ್ ಗಾಯಬ್ ಆಗಿ ಬಾಲರಾಜ್‌ನ ತೊಡೆಯ ಮೇಲೆ ಮಲಗಿರುವುದಂತೂ ಸತ್ಯ.

ನಡೆದಿದ್ದೇನು?

ಈ ಹಿಂದೆ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿ ಗೆದ್ದು ಶಾಸಕನಾಗಿದ್ದ ಬಾಲರಾಜ್ ಆನಂತರ ಜೆಡಿಎಸ್ ಸೇರಿ ನಂತರ ನಡೆದ ನಗರಸಭಾ ಚುನಾವಣೆಯಲ್ಲಿ ಜೆಡಿಎಸ್‌ನ 16 ಸದಸ್ಯರನ್ನು ಗೆಲ್ಲಿಸಿಕೊಂಡು ಬಂದಿದ್ದ. ಕಾಂಗ್ರೆಸ್‌ಗೆ ಕೇವಲ 10 ಸೀಟುಗಳು ದೊರಕಿದ್ದರೆ, ಒಂದು ಬಿಜೆಪಿ, ಒಂದು ಎಸ್ಪಿ ಹಾಗೂ ಮೂವರು ಪಕ್ಷೇತರ ಕ್ಯಾಂಡಿಡೇಟುಗಳು ಆಯ್ಕೆಯಾಗಿದ್ದರು. 31 ಸದಸ್ಯರ ಕೊಳ್ಳೇಗಾಲ ನಗರಸಭೆಯಲ್ಲಿ ಅರ್ಧಕ್ಕಿಂತ ಹೆಚ್ಚು ಸೀಟುಗಳನ್ನು ಗೆಲ್ಲಿಸಿದ್ದ ಬಾಲರಾಜ್ ಮೊನ್ನೆ ನಡೆದ ಚುನಾವಣೆಯ ಹೊತ್ತಿನಲ್ಲಿ ಮತ್ತೆ ಪಕ್ಷ ತೊರೆದು ಪಕ್ಷೇತರನಾಗಿ ಸ್ಪರ್ಧಿಸಿ ಸೋತ. ಕಾಂಗ್ರೆಸ್‌ನ ಧ್ರುವನಾರಾಯಣ್ ಶಾಸಕನಾಗಿ ಆಯ್ಕೆಯಾದ. ಬಾಲರಾಜ್ ಸೋತ ಮೇಲೆ ಮತ್ತೆ ಜೆಡಿಎಸ್ ಸೇರಿಕೊಂಡ.

ಶಾಸಕನಾಗಿ ಆಯ್ಕೆಯಾಗುತ್ತಿದ್ದಂತೆಯೇ ಧ್ರುವನಾರಾಯಣ್ ಜೆಡಿಎಸ್ ಕೈಯಲ್ಲಿರುವ ಕೊಳ್ಳೇಗಾಲ ನಗರಸಭೆಯನ್ನು ಕಿತ್ತುಕೊಳ್ಳುವುದಕ್ಕಾಗಿ ಹವಣಿಸುತ್ತಲೇ ಇದ್ದ. ಜೆಡಿಎಸ್ ನಗರಸಭಾ ಸದಸ್ಯರೊಂದಿಗೆ ಪ್ರತ್ಯೇಕವಾಗಿ ಮಾತನಾಡುವುದು, ಅವರ ಕೆಲಸಗಳನ್ನು ಮಾಡಿಸಿಕೊಡುವುದು, ದುಡ್ಡಿನ ಆಮಿಷ ತೋರಿಸುವುದು - ಹೀಗೆ ಧ್ರುವನಾರಾಯಣ್‌ನ ಪ್ರಯತ್ನ ನಡೆದೇ ಇತ್ತು. ಇತ್ತೀಚೆಗಂತೂ ಶಾಸಕನ ಈ 'ಸದಸ್ಯರ ಖರೀದಿ ಕಾರ್ಯಕ್ರಮ' ಬಿರುಸಾಗಿ ನಡೆದಿತ್ತು. ಪರಿಣಾಮವಾಗಿ ನಗರಸಭಾ ಅಧ್ಯಕ್ಷ ಎಂ.ವಿ.ಪರಮೇಶ್ವರಯ್ಯ ಎಂಬ ಸಾಪೇಕ್ಷವಾಗಿ ನಿಷ್ಕಳಂಕವಾಗಿರುವ ವ್ಯಕ್ತಿಯ ವಿರುದ್ಧದ ಅವಿಶ್ವಾಸಮತ ಗೊತ್ತುವಳಿಗೆ ಇಪ್ಪತ್ತಕ್ಕಿಂತ ಹೆಚ್ಚು ಜನರ ಸಹಿಬಿದ್ದಿತು!

ಆಗ ಶುರುವಾಗಿದ್ದೆ ಮಾಜಿ ಶಾಸಕ ಬಾಲರಾಜ್ ಮತ್ತು ಹಾಲಿ ಶಾಸಕ ಧ್ರುವನಾರಾಯಣ್ ಅವರ ನಡುವಿನ ತೆರೆಮರೆಯ ತಿಕ್ಕಾಟ. ಧ್ರುವನಾರಾಯಣ್‌ನಿಂದ ದುಡ್ಡು ತಿಂದ ಜೆಡಿಎಸ್ ಸದಸ್ಯರಲ್ಲಿ ಕಾಂಗ್ರೆಸ್‌ಗೆ ಜೈ ಎನ್ನಲು ಕೆಲವರು ಸಿದ್ಧರಾದರೆ ಇನ್ನು ಕೆಲವರು ದುಡ್ಡು ನುಂಗಿ ಕಾಂಗ್ರೆಸ್‌ಗೆ 'ಕೈ' ಎತ್ತಿ ಜೆಡಿಎಸ್‌ಗೆ 'ಜೈ' ಎನ್ನಲು ತಯಾರಾದರು. ಈ ಡಬಲ್‌ಗೇಮ್ ವೀರರಲ್ಲಿ ಬಹುಮುಖ್ಯ ವ್ಯಕ್ತಿ ಎಂದರೆ ಮುಡಿಗುಂಡ ವಾರ್ಡ್‌ನಿಂದ ಆಯ್ಕೆಯಾಗಿರುವ ಮಹದೇವ್ ಪ್ರಸಾದ್ (ಪ್ರದೀಪ್). ಅಸಲಿಗೆ ಇವನೊಂಥರಾ ತಿಕ್ಕಲು ಮನುಷ್ಯ. ಈಗ ಅವನ ಅಪಹರಣವಾಗಿದೆ ಎಂದರೆ ಇವನನ್ನು ಆಯ್ಕೆ ಮಾಡಿದ ಜನರೇ ಇದೊಂದು ಹೊಸ ನಾಟಕ ಎನ್ನುತ್ತಾರೆ. ಅದು ಸತ್ಯವೂ ಹೌದು. ಸ್ವಭಾವತಃ ಗೆದ್ದೆತ್ತಿನ ಬಾಲ ಹಿಡಿಯುವ ಜಾಯಮಾನದವನಾದ ಈತ ಜೆಡಿಎಸ್‌ನಿಂದ ಸ್ಪರ್ಧಿಸಿ ಗೆದ್ದ ತಕ್ಷಣ ಆಗ ಶಾಸಕನಾಗಿದ್ದ ಬಾಲರಾಜ್‌ನ ಹಿಂದುಮುಂದು ಸುತ್ತಾಡಿಕೊಂಡಿದ್ದ. ಯಾವಾಗ ಕಳೆದ ಚುನಾವಣೆಯಲ್ಲಿ ಬಾಲರಾಜ ನೆಲಕಚ್ಚಿದನೋ ಆಗ ಗೆದ್ದೆತ್ತಿನ ಧ್ರುವನಾರಾಯಣನ ಬಾಲ ಹಿಡಿದುಬಿಟ್ಟ. ಖುದ್ದು ಜೆಡಿಎಸ್‌ನಲ್ಲಿದ್ದರೂ ಕಾಂಗ್ರೆಸ್‌ನ ಧ್ರುವನಾರಾಯಣ್ ಹಿಂದುಮುಂದು ಕಾಂಗ್ರೆಸ್ಸಿನ ಸದಸ್ಯರೇ ನಾಚುವಂತೆ ಸುತ್ತಾಡುತ್ತಿದ್ದ. ಇದಕ್ಕೆ ಪ್ರತಿಯಾಗಿ ಧ್ರುವನಾರಾಯಣ್ ಕೂಡ ಪ್ರದೀಪನ ಕೆಲಸಕಾರ್ಯಗಳು ಸಾಂಗವಾಗಿ ನಡೆಯುವಂತೆ ನೋಡಿಕೊಂಡಿದ್ದ. ಯಾವಾಗ ನಗರಸಭೆ ಕ್ಯಾಪ್ಚರ್ ಮಾಡುವುದಕ್ಕೆ ಧ್ರುವನಾರಾಯಣ್ ಸ್ಕೆಚ್ ಹಾಕಿದರೋ ಪ್ರದೀಪನಿಗೆ ಮತ್ತೊಂದಿಷ್ಟು ದುಡ್ಡು ಸುರಿದು ಬುಟ್ಟಿಗೆ ಹಾಕಿಕೊಂಡುಬಿಟ್ಟರು.

ಧ್ರುವನಾರಾಯಣ್ ಸದಸ್ಯರ ಖರೀದಿಯಲ್ಲಿ ತೊಡಗಿರುವ ವಾಸನೆ ಹೇಗೋ ಬಾಲರಾಜ್ ಬಡಿದಿದ್ದೆ ತಡ, ಅವನೂ ಎಚ್ಚೆತ್ತುಕೊಂಡುಬಿಟ್ಟ. ರಾಜ್ಯಮಟ್ಟದಲ್ಲಿ ಎಮ್ಮೆಲ್ಲೆಗಳ ರೆಸಾರ್ಟ್ ಜಾತ್ರೆಯಿಂದ, ಗೋವಾ ಯಾತ್ರೆಯಿಂದ ಸ್ಫೂರ್ತಿ ಪಡೆದಿದ್ದ ಬಾಲರಾಜ್ ಜೆಡಿಎಸ್‌ನಿಂದ ಆಯ್ಕೆಯಾಗಿದ್ದ ಎಲ್ಲಾ ಸದಸ್ಯರನ್ನೂ ಒಟ್ಟಿಗೆ ಸೇರಿಸಿಕೊಂಡು ಒಂದೆಡೆ ಹಿಡಿದಿಟ್ಟುಕೊಂಡಿದ್ದಾನೆ. ಅದರಲ್ಲಿ ಈ ಪ್ರದೀಪ್ ಕೂಡ ಒಬ್ಬ. ಇತ್ತ ಜೆಡಿಎಸ್ ಸದಸ್ಯರಿಗೆ ದುಡ್ಡುಕೊಟ್ಟು ನಾಮಬಳಿಸಿಕೊಂಡವನಂತೆ ಧ್ರುವನಾರಾಯಣ್ ಪೆಚ್ಚುಮೋರೆ ಹಾಕಿಕೊಂಡಿದ್ದರೆ ಅತ್ತ ಅವಿಶ್ವಾಸಮತ ಗೊತ್ತುವಳಿಯಲ್ಲಿ ಗೆದ್ದೇಗೆಲ್ಲುತ್ತೇವೆಂದು ಬಾಲರಾಜ್ ಹೂಂಕರಿಸುತ್ತಿದ್ದಾನೆ. ಸದ್ಯಕ್ಕೆ ಈಗ ಬಾಲರಾಜ್‌ನ ಆತಿಥ್ಯದಲ್ಲಿರುವ ಪ್ರದೀಪ್ ಮೊಬೈಲ್ ಮೂಲಕ ತನ್ನ ರತ್ನಾಗೆ ಫೋನ್ ಮಾಡಿ ಬಾಲರಾಜ್ ತನ್ನನ್ನು ಅಪಹರಿಸಿದ್ದಾನೆಂದು ಪ್ರಚಾರ ಮಾಡುವಂತೆ, ಪೊಲೀಸರಿಗೆ ದೂರು ನೀಡುವಂತೆ ಹೇಳಿದ್ದಾನೆ.

ವಾಸ್ತವದಲ್ಲಿ ಇದೂ ಒಂದು ರೀತಿಯ ನಾಟಕವಷ್ಟೆ. ಧ್ರುವನಾರಾಯಣ್‌ನಿಂದ ಕಂಠಪೂರ್ತಿ ದುಡ್ಡು ತಿಂದಿದ್ದಕ್ಕಾಗಿ ಅವರ ಕಾಂಗ್ರೆಸ್ ಪಕ್ಷದ ... ಕಾಣಬಂದೇನೂ ಅವನಿಗಿಲ್ಲ. ಇದು ತನ್ನ ಮೇಲೆ ಬರಲಿರುವ ಧ್ರುವನಾರಾಯಣ್‌ನ ... ಸಿಟ್ಟನ್ನು ಬಾಲರಾಜ್ ಮೇಲೆ ತಿರುಗಿಸುವ ಹುನ್ನಾರವಷ್ಟೆ. ... [illegible]

■ [illegible]

ವರ್ಣಮಯ ಗಾಯಕ
ಭೀಮಸೇನ ಜೋಶಿ

ರಾತ್ರಿ, ಹತ್ತಾದರೂ ನಾಲ್ಕು ವರ್ಷದ ಮಗ ಇನ್ನೂ ಮನೆಗೆ ಬಂದಿರಲಿಲ್ಲ. "ಮನೆಗೆ ಬರಲಿ. ಈ ಸಲ ಚೆನ್ನಾಗಿ ಥಳಿಸ್ತೀನಿ. ಬಿಸಿ ಹತ್ತಿದರ ಬೆಣ್ಣೆ ಕರಗತದ" ಎಂದು ತಂದೆಯ ಆಕ್ರೋಶ. ಅದನ್ನು ಕೇಳಿದ ನೆರೆಮನೆ ಮಿತ್ರನೆಂದ: "ಏನು ಹುಚ್ಚುತನ ಅಂತೀನಿ. ಹೊಡೆಯೂದು ಬಿಡೂದು ಆಂವ ಮನೆಗೆ ಬಂದ ಮ್ಯಾಲ. ಅವನ್ನ ಮೊದಲು ಹುಡುಕಬೇಕು, ಹೌದಲ್ಲ!" ಇಬ್ಬರೂ ಪೊಲೀಸ ಸ್ಟೇಷನ್‌ಗೆ ತೆರಳಿ ಹುಡುಗನ ಚಹರೆ ಪಟ್ಟಿ ವಿವರಿಸಿ ಸ್ವಲ್ಪ ಹೊತ್ತು ಕುಳಿತುಕೊಂಡರು. ಅಷ್ಟರಲ್ಲೊಬ್ಬ ಒಬ್ಬ ಹುಡುಗನನ್ನು ಹೆಗಲ ಮೇಲೆ ಹೊತ್ತುಕೊಂಡು ಬಂದ: "ನಮ್ಮ ಮನ್ಯಾಗ ಕಾರಣ ಇತ್ರಿ. ಎಂಟು ಗಂಟೆಗೆ ಮ್ಯಾಳದವರ ಕೂಡ ಬಂದು ಈ ಹುಡುಗ ಅವರೆದುರಿಗೇ ಗೋಣು ಹಾಕ್ಕೊಂತ ಕೈಲೆ ತಾಳ ಹಿಡಕೊಂಡು ಕುಂತಿತ್ರಿ. ಆಮ್ಯಾಲ ಅಲ್ಲಿಯೇ ಮಲಗಿಬಿಟ್ಟತ್ರಿ. ಯಾರದೊ ಏನೊ? ಅದಕ ಹಾಣೇಕ್ಕ ತಂದೀನಿ."

ತಮ್ಮ ಹುಡುಗನೇನೊ ಎಂದು ತಂದೆ ಎದ್ದುಹೋಗಿ ನೋಡುತ್ತಾರೆ. ಹೌದಾಗಿದೆ. ತಮ್ಮ ಮಗನನ್ನು ತಮ್ಮ ಹೆಗಲಿಗೇರಿಸಿಕೊಂಡು ಮನೆಯ ದಾರಿ ಹಿಡಿದರು. "ರಾಯರ, ದಿನಾ ಇದೇ ಹಣೆಬರಹ. ನಾಳೆ ಇವನ ಅಂಗಿ ಮ್ಯಾಲ 'ಜೋಶಿ ಮಾಸ್ತರ, ಕಿಲ್ಲೆ' ಅಂತ ವಿಳಾಸ ಹೊಲಿಸಿ ಬಿಡತೀನಿ." "ಹಂಗಾರ, ಹೊಡೆಯೂದು ರದ್ದಾತು, ಹೌದಲ್ಲ," ಇಬ್ಬರಿಗೂ ತಡೆಯಲಾರದ ನಗು. ಆ ಮಗುವೇ ಇಂದಿನ ಹಿಂದೂಸ್ತಾನಿ ಸಂಗೀತದ ಅನಭಿಷಕ್ತ ದೊರೆ ಭೀಮಸೇನ ಜೋಶಿ. ಗದಗಿನಲ್ಲಿ ಫೆಬ್ರವರಿ 14, 1922 ರಂದು ಜನನ. ತಂದೆ ಗುರುರಾಜರು ಹೈಸ್ಕೂಲು ಮುಖ್ಯೋಪಾಧ್ಯಾಯರು, ಕಕ್ಕ, ಧಾರವಾಡದ ಮನೋಹರ ಗ್ರಂಥಮಾಲೆಯ ಜಿ.ಬಿ. ಜೋಶಿ.

ಭೀಮಸೇನ ಶಾಲೆಗೇನೊ ಹೋಗುತ್ತಿದ್ದ. ಆದರೆ ಅವನ ಮನಸ್ಸೆಲ್ಲ ನೆಟ್ಟಿದ್ದು ದಾರಿಯಲ್ಲಿದ್ದ ಭೂಸದ ಅವರ ಗ್ರಾಮಾಫೋನು ಅಂಗಡಿಯಲ್ಲಿ. ಬಾಗಿಲಲ್ಲಿ ನಿಂತು ದಿನಾಲು ಧ್ವನಿಮುದ್ರಿಕೆಗಳ ಶ್ರವಣ, ಅನುಕರಣ. ಕಿರಾಣಾ ಘರಾಣೆಯ ಸಂಸ್ಥಾಪಕ ಅಬ್ದುಲ್ ಕರೀಮಖಾನರ ಫಗವಾ ಬ್ರಿಜ ದೇಖನ ಕೊ (ರಾಗ ಬಸಂತ) ಮತ್ತು ಪಿಯಾ ಬಿನ ನಹಿ ಆವತ ಚೈನ (ಝಿಂಝೋಟಿ ಠುಮರಿ) ಕೇಳಿದ ಮೇಲಂತೂ ಅದರದೇ ಗುಂಗು. ಒಮ್ಮೆ ಕುಂದಗೋಳದಲ್ಲಿ ಅಬ್ದುಲ್ ಕರೀಮಖಾನರ ಪಟ್ಟಶಿಷ್ಯ ಸವಾಯಿ ಗಂಧರ್ವರ ಗಾಯನ ಕೇಳಿ ಅವರನ್ನೆ ಗುರುವಾಗಿಸಿಕೊಳ್ಳುವಾಸೆ. ಆಗ ಅದು ಗಗನಕುಸುಮ. ಭೀಮಸೇನನಿಗೆ ಕೇವಲ ಹನ್ನೊಂದು ವರ್ಷ.

ಗುರುವಿಗಾಗಿ ಹುಡುಕಾಟ

ಗುರುವನ್ನು ಹುಡುಕುವ ಅದಮ್ಯ ಬಯಕೆ. ತಾಯಿ ಇನ್ನಷ್ಟು ತುಪ್ಪ ನೀಡಲಿಲ್ಲ ಎನ್ನುವುದಷ್ಟೆ ನೆಪ ಸಾಕಾಯಿತು. ಭೀಮಸೇನ ಗದಗ ರೈಲು ನಿಲ್ದಾಣಕ್ಕೆ ಬಂದ. ಸಿಕ್ಕ ಗಾಡಿ ಏರಿದ. ಗೊತ್ತಿಲ್ಲ ಗುರಿಯಿಲ್ಲ, ಟಿಕೆಟಿಲ್ಲದ ಪಯಣ. ಅಭಂಗ, ಭಜನ ಹಾಡುತ್ತ ಸಹಪ್ರಯಾಣಿಕರನ್ನು ರಂಜಿಸಿದ. ಅವರು ಕೊಟ್ಟ ತಿಂಡಿ, ಊಟ ಮಾಡಿದ. ವಿಜಾಪುರ ಬಂತು. ಇಳಿದ. ಹಾಡುತ್ತ ಊರೆಲ್ಲ ಸುತ್ತಿದ. ಯಾರೊ ಪುಡಿಗಾಸು, ಇನ್ನಾರೊ ಆಹಾರ ನೀಡಿದರು. ಹೀಗೆಯ ಕೆಲವು ವಾರ. ಸಂಗೀತಪ್ರಿಯನೊಬ್ಬ ಸಲಹೆಯಿತ್ತ: "ಏ ತಮ್ಮಾ, ಸಂಗೀತ ಕಲಿಯಬೇಕಿದ್ದರೆ ಗ್ವಾಲಿಯರಿಗೆ ಹೋಗು."

ಸರಿ, ಭೀಮಸೇನ ಹೊರಟ. ಪುನಃ ಟಿಕೆಟಿಲ್ಲದ ಪಯಣ. ಪುಣೆ ತಲುಪಿದ. ವಿಜಾಪುರ ಶೈಲಿಯ ಜೀವನ. ಯಾರೊ ಹೇಳಿದರು: "ಮಾಸ್ತರ ಕೃಷ್ಣ ಅವರಲ್ಲಿ ಕಲಿ." ತಿಂಗಳಿಗೆ ಒಂದು ನೂರು ರೂಪಾಯಿ ಫೀ ಬೇಡಿಕೆ. ಭೀಮಸೇನನಿಗೊ ಒಪ್ಪೊತ್ತಿನ ಕೂಳಿಗೂ ಗತಿಯಿರಲಿಲ್ಲ. ಮತ್ತೆ ಟಿಕೆಟ್‌ರಹಿತ ಪಯಣ. ಬಂಧನ. ಬಾಲಕನೆಂಬ ಕನಿಕರ ತೋರಿ, ಬಿಡುಗಡೆ. ಮೂರು ತಿಂಗಳಿಗೆ ಗ್ವಾಲಿಯರ್ ತಲುಪಿದ. ಮಾಧವ ಸಂಗೀತ ವಿದ್ಯಾಲಯ ಸೇರ್ಪಡೆ. ರಾಜಾಭಯ್ಯಾ ಪೂಛವಾಲೆ, ಕೃಷ್ಣರಾವ ಪಂಡಿತ, ಸರೋದವಾದಕ ಹಾಫಿಜ ಅಲಿ ಖಾನ (ಅಮಜದ ಅಲಿಖಾನರ ತಂದೆ) ಶಿಕ್ಷಕರು. ತರಗತಿಗೆ ಹಾಜರಿದ್ದರೆ ಮಧ್ಯಾಹ್ನದ ಊಟ ಉಚಿತ. ಗ್ವಾಲಿಯರ್‌ನಲ್ಲಿರುವವರೆಗೆ ದಿನಕ್ಕೆ ಅದೊಂದೇ ಊಟ. ಕೀರ್ತನಕಾರನೊಬ್ಬನಿಗೆ ತಂಬೂರಿ ಸಾಥಿಯಾಗಿ ಅರಮನೆ ಪ್ರವೇಶ. ಮಹಾರಾಜರಿಂದ ಹತ್ತು ರೂಪಾಯಿ ಸಂಭಾವನೆ. ಪ್ರಥಮ ವೃತ್ತಿ ಗಳಿಕೆ. ಅದರಿಂದ ಒಂದು ಅಂಗಿ ಒಂದು ಚಣ್ಣಾ ಖರೀದಿ.


ಭೀಮಸೇನನಿಗೆ ಬೇಕಿದ್ದುದು ಗುರು. ದೊರಕಿದ್ದುದು ಶಿಕ್ಷಕ. ಖರಗಪುರದ (ಬಂಗಾಲ) ಕೇಶವ ಲುಖಿ ಅವರಲ್ಲಿ ಕಲಿಯಲು ರಾಜಾಭಯ್ಯಾ ಪೂಛವಾಲೆ ಶಿಫಾರಸು ಪತ್ರ. ಲುಖಿಗೆ ಬಿಡುವಿರದ ಟ್ಯೂಶನ್ನುಗಳು. ಅವರಿಂದ ಕಲಕತ್ತಾದ ಭೀಷ್ಮದೇವ ಚಟರ್ಜಿ ಅವರಿಗೆ ಶಿಫಾರಸ್ಸು ಪತ್ರ. ಚಟರ್ಜಿ ಅವರಲ್ಲಿ ಶಿಕ್ಷಣ ಗೊತ್ತುಗುರಿಯಿಲ್ಲದೆ ಸಾಗಿತ್ತು. ಕಲಿಸಿದ್ದು ಗಾಂಧಾರಿ ರಾಗವೊಂದೆ. ಚಟರ್ಜಿಗೆ ನ್ಯೂ ಥಿಯೆಟರ್ಸ್ (ಚಲನಚಿತ್ರ ನಿರ್ಮಾಣ ಸಂಸ್ಥೆ)ನಲ್ಲಿ ಉದ್ಯೋಗ. "ಈಗೊಂದು ಚಿತ್ರ ಸಿದ್ಧಗೊಳ್ಳುತ್ತಿದೆ. ನಟಿಸುವಿಯಾ? ದೃಶ್ಯಗಳ ಚಿತ್ರೀಕರಣದ ಮಧ್ಯೆ ಗಾಯನವನ್ನೂ ಕಲಿಸುವೆ" ಎಂದು ಕೇಳಿದರು. "ನಾನು ಇಲ್ಲಿಗೆ ಬಂದುದು ಗಾಯಕನಾಗಲು, ನಟನಾಗಲಲ್ಲ" ಎಂದು ಕಡ್ಡಿ ಮುರಿದಂತೆ ಭೀಮಸೇನನ ಉತ್ತರ. "ಈ ಕ್ಷಣವೆ ಜಾಗ ಮಾಡು" ಎಂದು ಚಟರ್ಜಿ ಅರ್ಭಟಿಸಿದ.

ಭೀಮಸೇನ ದಿಲ್ಲಿಗೆ ಬಂದ. ಚಾಂದಖಾ[...] ಕಲಿಯಲೆತ್ನಿಸಿದ. ಯತ್ನ ಫಲಿಸಲಿಲ್ಲ. ಯಾರ[...] ಸಲಹೆಯಂತೆ ಜಲಂಧರಿಗೆ ಆಗಮನ. ಮಂಗತರಾಮ ಆರ್ಯ ಸಂಗೀತ ವಿದ್ಯಾಲ[...] ಸೇರ್ಪಡೆ. ಬರಿ ಧ್ರುಪದ, ಧಮಾರ ಶಿಕ್ಷಣ. ಖಯಾಲ ಕಲಿಯುವ ಹಂಬಲ ಸ್ಥಗಿತ. ಕ[...] ಗಿರಣಿ ಮಾಲಿಕನೊಬ್ಬ ಬಾಲಕನ ಸಂಗೀತಾಸ[...] ಕಂಡು ಖರ್ಚಿಗೆ ತಿಂಗಳಿಗೆ ಐದು ರೂ. ಕೊಡತೊಡಗಿದ. ಆಂದಿನ ಅಗ್ಗದ ಕಾಲದಲ್ಲಿ ತಿಂಗಳಿನ ಊಟಕ್ಕೆ ಮೂರು ರೂ. ಸಾಕಿತ್ತು. ಕೊರೆಯುವ ಚಳಿಯಲ್ಲೂ ತಣ್ಣೀರಿನ ಸ್ನಾನ, ಭರ್ಜರಿ ವ್ಯಾಯಾಮ, ತುಪ್ಪದಲ್ಲಿ ಮಾಡಿದ ಜಲೇಬಿ ಸೇವನೆ. ಇದೇ ಭೀಮಸೇನ ಜೋ[...] ಅವರ ದೈಹಿಕ ಸಾಮರ್ಥ್ಯದ ಗುಟ್ಟು. ಒಂ[...] ವರ್ಷ ಕಾಲ ನೂಕಿದ ಬಳಿಕ ಮೂರು ದಿನ[...] ಹರಿವಲ್ಲಭ ವಾರ್ಷಿಕ ಸಂಗೀತ ಸಮ್ಮೇಳನ[...] ಮನದಣಿಯೆ ಖಯಾಲ ಕೇಳುವ ಸದವಕಾ[...] "ಇಷ್ಟು ದೂರ ಏಕೆ ಬಂದೆ? ಅಲ್ಲೇ ನಿಮ್ಮ ಗದಗಿನ ಹತ್ತಿರ ಕುಂದಗೋಳದಲ್ಲಿ ಸವಾಯಿ ಗಂಧರ್ವರಿದ್ದಾರಲ್ಲ!" ಎಂದು ಮಹಾರಾಷ್ಟ್ರ ಸುಪ್ರಸಿದ್ಧ ಗಾಯಕ ವಿನಾಯಕರಾವ ಪಟವರ್ಧನರಿಗೆ ಆಶ್ಚರ್ಯ.

"ಖಯಾಲ ಗಾಯನ ಕಲಿಯಲು ತಕ್ಷ[...] ಏರ್ಪಾಟು ಮಾಡಿರಿ. ಇಲ್ಲದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವೆ. ಮನೆಗೆ ಮರಳಲು ಹಣ ಕಳಿಸಿರಿ" ಎಂದು ತಂದೆಗೆ ಭೀಮಸೇನನ ಪ[...] ಹಣ ಬರುವವರೆಗೆ ಕಾಯಲು ವ್ಯವಧಾನವಿ[...] ತಾನೆ! ಮನೆಯತ್ತ ಅದೇ ಟಿಕೆಟ್‌ರಹಿತ ಪ[...] ಗುರುತು ಸಿಕ್ಕದಷ್ಟು ಎತ್ತರ, ತಂದುರಸ್ತ.

ದೊರಕಿದಾ ಗುರು ದೊರಕಿದಾ

ಸವಾಯಿ ಗಂಧರ್ವ (ರಾಮಭಾವು ಕುಂದಗೋಳಕರ)ರಲ್ಲಿಗೆ ಅಪ್ಪ ಮಗ ಬಂದ[...] "ನನ್ನ ಮಗ ಚೆನ್ನಾಗಿ ಹಾಡತಾನ ಅಂತ ಮ[...] ಅಂತಾರ. ಅವನಿಗೆ ಕಲಿಸುವಿರಾ?" ಎಂದು ತಂದೆಯ ಅಹವಾಲು. "ಮಂದಿ ಏನು, ಗ[...] ಹಾಡು ಹಾಡಿದರೂ ಭೊಲೊ ಅಂತಾರ. [...] ಹಾಡು ಕೇಳಿ ಹೇಳತೀನಿ." ಭೀಮಸೇನ ಐ[...] ನಿಮಿಷ ಹಾಡಿದ. "ಇಂವಾ ಕಲಿತದ್ದೆಲ್ಲ ಮ[...]



1998 ರಲ್ಲಿ ಖ್ಯಾತ ಹಿಂದೂಸ್ತಾನಿ ಕಲಾ[...]
ಭೀಮಸೇನ ಜೋಶಿ ಅವರಿಗೆ 75 ವರ್ಷ ತುಂಬಿ[...]
ಸದಾನಂದ ಕನವಳ್ಳಿ ಜೋಶಿಯವರನ್ನ ಕು[...]
ಲಂಕೇಶ್ ಪತ್ರಿಕೆಯ ವಿಶೇಷಾಂಕಕ್ಕೆ ಅ[...]
ಲೇಖನವನ್ನು ಬರೆದಿರ[...]
ಈಗ ಭೀಮಸೇನ ಜೋಶಿ ಅವರಿಗೆ ಪ್ರ[...]
ಭಾರತ ರತ್ನ ಪ್ರಶಸ್ತಿ ಸಂದಿರುವ ಸಂದರ್ಭದಲ್ಲಿ
ಲೇಖನವನ್ನು ಮರು ಮುದ್ರಿಸುತ್ತಿದ[...]

▲1950ರಲ್ಲಿ ಧಾರವಾಡದಲ್ಲಿ ಆಲ್ ಇಂಡಿಯಾ ರೇಡಿಯೋದ ಕೇಂದ್ರ ಪ್ರಾರಂಭವಾದಾಗ ಭೀಮಸೇನ್ ಜೋಶಿ ಮತ್ತು ಕೃಷ್ಣಾ ಹಾನಗಲ್ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಹಾಡುತ್ತಿರುವುದು.

ವಿಶೇಷ ಲೇಖನ

■ ಸದಾನಂದ ಕನವಳ್ಳಿ

...ನಿ" ತಂದೆ ಮಗನಿಗೆ ಸ್ವರಗಳ್ನ ಮೂರೇ ...ಓನಮಾನವೆ ವರ್ಷ ಕಲಿಸುವ ಸುದ್ದಿಯಿಲ್ಲ. ...ಡಾಯಿಸುತ್ತಾನೆಂದು ಖಾತ್ರಿಯಾದ ನಂತರ ...ರಂಭ.


...ಳಗಿನ ನಾಲ್ಕು ಗಂಟೆಗೆ ಎದ್ದು ಎರಡು ತಾಸು ...ಸಾಧನೆ. ತದನಂತರ ಗುರುಗಳು ಮೂರು ...ತೋಡಿ ರಾಗ ಕಲಿಸುತ್ತಿದ್ದರು. ಮಧ್ಯಾಹ್ನ ...ಗಂಟೆಗೆ ಮುಲ್ತಾನಿ. ಕೊನೆಯ ಸರದಿ. ...ಯಾ ರಾಗದ್ದು. ಮಧ್ಯರಾತ್ರಿವರೆಗೆ. ಕೆಲವು ...ರುಗಳು ಶಿಷ್ಯನಿಗಾಗಿ ಹಾಡುತ್ತಿದ್ದರು. ಶಿಷ್ಯ ...ತ್ತ ಮನನ ಮಾಡಿಕೊಳ್ಳಬೇಕಿತ್ತು. ಕಲಿಸುವ ...ನಲ್ಲಿದ್ದರೆ ರಾತ್ರಿ ಎರಡು ಗಂಟೆಗೂ ...ತ್ತಿದ್ದರು. ಒಂದೊಂದು ಪಲ್ಟಾವನ್ನು ...ಬಿಡದೆ ಎರಡುಮೂರು ತಾಸು ಸತತ ಮಾಡಿಸುತ್ತಿದ್ದುದೂ ಉಂಟು. ಶಿಷ್ಯನಿಗೆ ಮನೆಯಲ್ಲೆ ಇರಲು, ಉಣ್ಣಲು ಹೇಳಿದರು. ...ಸೇನ ಏಕಪಾಠಿ, ಯಾವುದನ್ನೂ ಮತ್ತೊಮ್ಮೆ ...ಕೊಳ್ಳುವ ಪ್ರಸಂಗ ತಂದುಕೊಳ್ಳಲಿಲ್ಲ. ಆದರೆ ...ಎಲ್ಲೋ ಸ್ವಲ್ಪ ತಪ್ಪೆಸಗಿದಾಗ ಗುರು ...ಡಿ ಅಡಕೊತ್ತು ಎಸೆದದ್ದೂ ಇದೆ. ಅದು ಬಿಟ್ಟಿರುವ ಹಣೆಯ ಮೇಲಿನ ಕಲೆಯನ್ನು ...ಸೇನರು ಅಭಿಮಾನದಿಂದ ಇಂದಿಗೂ ...ಸುತ್ತಾರೆ. ಒಟ್ಟು ಐದು ವರ್ಷಗಳಲ್ಲಿ ಗುರು ...ದ್ದು ಮೂರೇ ರಾಗಗಳು: ಬೆಳಗಿನ ತೋಡಿ, ...ಹ್ನದ ಮುಲ್ತಾನಿ, ಸಂಜೆಯ ಪೂರಿಯಾ. ಅಬ್ದುಲ್ ಕರೀಮಖಾನರು ಸವಾಯಿ ...ರಿಗೆ ಕಲಿಸಿದ್ದು ಇದೇ ಮೂರು ...ಳು. ಮೂರರಿಂದ ನೂರು ರಾಗಗಳ ಸಿದ್ಧಿಗೆ ...ರಿಯಾಗಬಲ್ಲ ಭದ್ರ ಬುಡಕಟ್ಟು.

...ಮಸೇನ ಜೋಶಿ ಅವರದು ಗುಂಪಿನಲ್ಲಿ ...ಣದ ಚಹರೆ. ಆದರೆ, ಹಾಡಲು ...ರೋ! ಮುಖಮಂಡಲದಲ್ಲಿ ಅಗಾಧ ...ರ್ಜನೆ. ಗಂಭೀರ ಕಳೆ ಮೂಡುತ್ತದೆ. ಕಂಠ ...ಯುತ್ತದೆ. ನರಗಳು ಉಬ್ಬುತ್ತವೆ. ಕಣ್ಣು ...ತ್ತವೆ. ನೆಲಕ್ಕೆ ಹಣೆ ಹಚ್ಚಿ ಅಗಿಯುತ್ತಾ ...ರೆ ಎನ್ನುವಂತೆ, ಭೂಗರ್ಭದಿಂದ ಬಗಿಯು...ರೋ ಎನ್ನುವಂತೆ ಸ್ವರಗಳನ್ನು ಹೊಮ್ಮಿಸುತ್ತ ...ವಾಗಿ ದೇಹ ನೀಟಾಗಿಸುತ್ತಾರೆ. ಹಾವಭಾವ, ಎಲ್ಲವೂ ಗಾಯನದೊಂದಿಗೆ ತಾದಾತ್ಮ್ಯ.

...ಭ್ಯೋದಯ

...ನವರಿ 1946. ಸವಾಯಿ ಗಂಧರ್ವರ ...ಅವರ ಕರ್ಮಭೂಮಿ ಪುಣೆಯಲ್ಲಿ. 22.ರ ...ಯದ ಭೀಮಸೇನರಿಗೆ ಆಹ್ವಾನ. ಮಿಂಯಾ ...ರ ಪ್ರಸ್ತುತ. ಆರಂಭದ ಷಡ್ಜ ಹಚ್ಚುತ್ತಲೇ ...ತೃಗಳು ಮಂತ್ರಮುಗ್ಧ. ಇಂಥ ಚಿಕ್ಕ ...ನಲ್ಲಿ ಎಂಥ ದೊಡ್ಡ ಸಾಧನೆ ಎಂಬ ...ಸೇದ್ಗಾರ. ಆಲಾಪದಲ್ಲಿ ಮೋಡಗಳು ...ಮುವ ವಾತಾವರಣ ನಿರ್ಮಾಣ. ದೃತ್‌ನಲ್ಲಿ ...ಧೂಂ ಎಂದು ಹಾಡುವಲ್ಲಿ ಧೋ ಧೋ ...ಸುರಿಯುವ ಭಾವಸೃಷ್ಟಿ. ಆವತ್ತಿನಿಂದ ...ಸೇನ ಜೋಶಿ ಹಿಂತಿರುಗಿ ನೋಡಿದವರಲ್ಲ. ...ತೋಡಿ, ಮಾಲಕಂಸ, ಪೂರಿಯಾ, ...ದಿ ರಾಗಗಳ ಪ್ರಸ್ತುತಿ ಭಾರತೀಯ ಸಂಗೀತಕ್ಕೆ ...ಆಯಾಮ ನೀಡಿದೆ.

...ಗಾಯನವೆಂದರೆ ಬರಿ ...ನವಲ್ಲ, ಅದೊಂದು ...ಕೆ. ಹಾಗೆಂದು ಅವರು ...ನ ಕಾರ್ಬನ್ ಕಾಪಿ ...ಹಾಗಾಗಲೂ ಬಾರದು. ...ವ ಗಂಧರ್ವರ ಗಾಯನ ...ಸ ಅಬ್ದುಲ್ ...ಖಾನರ ಮಕ್ಕೀ ಕಾ... ಅಲ್ಲ, ಭೀಮಸೇನರದು ...ು ಗಂಧರ್ವರ ಮಕ್ಕೀ ...ಕ್ಕೀ ಅಲ್ಲ, ಹೊಸ ಅಂಶಗಳನ್ನು ಸೇರ್ಪಡಿಸಿ ...ಯುಗೊಳಿಸಿ ...ದೆಸುವ ಮೂಲಕ ...ದೆ ನಿತ್ಯನೂತನವಾಗುವುದು.


ಗುರು ಸವಾಯಿ ಗಂಧರ್ವ

...ಮಸೇನ ಜೋಶಿ ಗಾಯನ ಸಂಗೀತದ ...ವಿಷ್ಕರಣ ಮಾತ್ರವಲ್ಲ, ಕೇವಲ ಶಬ್ದಗಳು ...ಸಾದೀತೆ? ಭೀಮಸೇನರ ಗಾಯನ ...ಪಶ್ಯವೂ ಆಹುದು, ಮಾಂತ್ರಿಕವೂ ಆಹುದು. ...ಹಿ ಬೇರು, ಜೀವಾಳ. ಕಲಾವಿದನ ...ಧರ್ಮವನ್ನು ಸೆರೆ ಹಿಡಿಯಬಹುದಾದುದು ...ರ ಮಾತ್ರ" ಎನ್ನುತ್ತಾರವರು. ಸ್ವರಗಳಲ್ಲಿ ಭಾವ, ಆತ್ಮ ತುಂಬುತ್ತಾರೆ. ಅವರ ಗಾಯನಕ್ಕೆ ಭದ್ರ ಕಿರಾಣಾ ಬುನಾದಿ. ಆಲಾಪಪ್ರಾಧಾನ್ಯ, ಒಂದೊಂದೂ ಸ್ವರವನ್ನು ತಿಕ್ಕಿ ತೊಳೆದು, ಉಜ್ವಲಿಸುವ ರಾಗವಿಕಸನ ವಿಧಾನ. ಜೊತೆಗೆ ಗಮಕ, ಬೋಲತಾನ, ಬಢತ, ಲಯಕಾರಿ, ಮುರ್ಕಿ, ಮೀಂಡ್, ಜಬರ್ದಸ್ತ ತಾನಬಾಜಿ. ತಾನಗಳಲ್ಲಿ ಇತರ ಘರಾಣೆಗಳ ಉತ್ತಮಾಂಶಗಳ ಅಳವಡಿಕೆ. ಭೀಮಸೇನರ ತಾನಗಳಲ್ಲಿ ಘರ್ಜನೆಯಿದೆ, ಸೂಕ್ಷ್ಮಾತಿಸೂಕ್ಷ್ಮತೆಯಿದೆ. ವೈವಿಧ್ಯ ಸಂಕೀರ್ಣತೆಗಳಿವೆ. ಲವಲವಿಕೆ, ತುಡಿತಗಳಿವೆ. ತೀವ್ರತೆಯೊಂದಿಗೆ ಬಲಗೈ ಬೆರಳುಗಳು ಆಕಾಶದತ್ತ ಏಳುತ್ತವೆ. ಇಕಾ, ನಿನಗೊಂದು, ನಿನಗೂ ಒಂದು ಎಂಬಂತೆ ತಾನಗಳನ್ನು ಸಭಾಭವನದ ತುಂಬೆಲ್ಲ ಚೆಲ್ಲುವರಿಸುತ್ತಾರೆ. ಒಬ್ಬೊಬ್ಬ ಗಾಯಕರದು ಒಂದೊಂದು ವೈಶಿಷ್ಟ್ಯ. ಭೀಮಸೇನರದು ಎಲ್ಲ ವೈಶಿಷ್ಟ್ಯಗಳು ಮುಪ್ಪುರಿ. ಹೀಗಾಗಿ, ಅವರದು ಸಮೀಚೀನ ಗಾಯನ. ಈ ಮಹತ್ಸಾಧನೆ ಸುಮ್ಮನೆ ಆದುದಲ್ಲ. ಅದರ ಹಿಂದೆ ಸುದೀರ್ಘ ಭೀಮಸಾಹಸವಿದೆ. ಭೀಮಸೇನ ಎಂಬ ನಾಮ ಅನ್ವರ್ಥಕ.

ಅಷ್ಟಪೈಲು ವ್ಯಕ್ತಿತ್ವ

ಭೀಮಸೇನರ ವ್ಯಕ್ತಿತ್ವಕ್ಕೆ ಅಷ್ಟಪೈಲು, ತಾರುಣ್ಯದಲ್ಲಿ ಯೋಗದ ಉತ್ಸಾಹಿ, ಕುಶಲ ಈಜುಗಾರ, ಪರಿಣತ ಫುಟ್‌ಬಾಲ್ ಆಟಗಾರ, ನಿಧಾನ ಸೈಕ್ಲಿಂಗ್ ಚಾಂಪಿಯನ್. "ನನ್ನದು ಯಾವಾಗಲೂ ಸಾಹಸಪ್ರವೃತ್ತಿ. ಸಂಗೀತಸಾಧನೆ ಒಂದು ಸಾಹಸಯಾತ್ರೆ. ಅಜ್ಞಾತದಲ್ಲಿ ಡೈವಿಂಗ್ ಇದ್ದಂತೆ. ಚಿಕ್ಕಂದಿನಲ್ಲಿ ಈಜು ಬರದಿದ್ದಾಗ್ಯೂ ಘಟಪ್ರಭಾ ನದಿಯಲ್ಲಿ ಧುಮುಕಿದ್ದೆ. ಮುಳುಗಿಬಿಡುತ್ತೇನೆಂದು ಭಾಸವಾಗುತ್ತಿದ್ದರೂ ಭಯಪಡಲಿಲ್ಲ. ನಾನು ಅಬ್ನಾರ್ಮಲ್ ಆಗಿರಬಹುದೇನೊ. ಈಜುತ್ತಲೇ ಇರಬೇಕು ತಾನೆ! ಸಂಗೀತದ ರಿಯಾಜ ಮಾಡುತ್ತಲೆ ಇರುವಂತೆ. ನನಗೆ ಭವಿಷ್ಯವೇ ಇಲ್ಲವೆಂಬ ಆತಂಕದ ಕ್ಷಣಗಳೆಷ್ಟೊ. ಒಂದೂ ಕಛೇರಿಯಿರಲಿಲ್ಲ. ಆದರೂ ನಾನು ದಿನವೂ ಎಂಟು ತಾಸು ರಿಯಾಜ ಮಾಡುತ್ತಲೇ ಇದ್ದೆ."

ಸಾಹಸಪ್ರಿಯತೆ, ಛಲ ಭೀಮಸೇನರ ಜಾಯಮಾನ. ಕಾರಿನ ಗೀಳಿನಲ್ಲಿ ಮುಳುಗಿದ್ದ ಕಾಲವೊಂದಿತ್ತು. ಹೊಸ ಹೊಸ ಅಮೆರಿಕನ್ ಮಾಡೆಲ್‌ಗಳನ್ನು ಕೊಳ್ಳುವುದು. ಮಾರಿ ಮತ್ತೆ ಹೊಸ ಮಾಡೆಲ್ ಕೊಳ್ಳುವುದು. ಎಂಜಿನ್ ಕಾರ್ಯವಿಧಾನವನ್ನು ಎಷ್ಟು ಚೆನ್ನಾಗಿ ತಿಳಿದುಕೊಂಡಿದ್ದರೆಂದರೆ ರಸ್ತೆ ಮಧ್ಯೆ ಕೆಟ್ಟು ನಿಂತರೆ ತಾವೇ ರಿಪೇರಿ ಮಾಡಿಕೊಳ್ಳುತ್ತಿದ್ದರು. ಪಕ್ಕವಾದ್ಯಗಳು, ಪಕ್ಕವಾದ್ಯಗಾರರೊಂದಿಗೆ ತಾವೇ ಕಾರು ನಡೆಸುತ್ತ ದಿಲ್ಲಿ ಜಲಂದರಿನಷ್ಟು ದೂರ ದೂರದ ಊರುಗಳಿಗೆ ಪ್ರವಾಸ. ಅಪಾಯದ ಭೂಪ್ರದೇಶಗಳಲ್ಲಿ ರಾತ್ರಿ ಪಯಣಿಸಿದ್ದು ಲೆಕ್ಕವಿಲ್ಲದಷ್ಟು ಸಲ. ಗಂಡಾಂತರಗಳಿಂದ ಆಶ್ಚರ್ಯಕಾರಕವಾಗಿ ಅನೇಕ ಸಲ ಪಾರು.

ಎಪ್ಪತ್ತರ ದಶಕದ ಒಂದು ಸ್ವಾರಸ್ಯಕರ ಘಟನೆ. ಕಾರು ಬಿಟ್ಟು ವಿಮಾನಯಾನ ಮಾಡುತ್ತಿದ್ದ ಕಾಲ. ಸುಮಾರಾಗಿ ಎಲ್ಲ ಪೈಲಟ್‌ಗಳೊಂದಿಗೆ ಆತ್ಮೀಯತೆಯಿತ್ತು. ಕಲಕತ್ತೆಗೆ ಹೊರಟಿದ್ದರು. ಏರ್‌ಪೋರ್ಟ್‌ನಲ್ಲಿ ವಿಮಾನ ಕೆಳಗಿಳಿಯುತ್ತಿದ್ದಂತೆಯೇ ಭೀಮಸೇನರು ಕಾಕ್‌ಪಿಟ್‌ಗೆ ಧಾವಿಸಿ ತಮ್ಮ ಚಾಲಕಮಿತ್ರನ ಬೆನ್ನ ಮೇಲೆ ಗುದ್ದು ಕೊಟ್ಟರು. ಅವನು ಬೆಚ್ಚಿಬಿದ್ದ, ಅಷ್ಟಕ್ಕೆ ಬಿಡಲಿಲ್ಲ, ಅತಿ ವೇಗದ ಅವರೋಹಿ ತಾನ ಹೊಡೆಯುತ್ತ, "ನನ್ನ ತಾನಗಳ ವೇಗದಲ್ಲಿ ನನ್ನ ವಿಮಾನ ಕೆಳಗಿಳಿಸಬಲ್ಲೆಯಾ?" ಎಂದು ಸವಾಲೆಸೆದರು.



ಪೈಲಟ್ ಕಕ್ಕಾಬಿಕ್ಕಿ. ಏಕೆಂದರೆ, ಬ್ಲ್ಯಾಕ್‌ಬಾಕ್ಸ್ ಎಲ್ಲವನ್ನೂ ಧ್ವನಿಮುದ್ರಿಸಿಕೊಳ್ಳುತ್ತಿತ್ತು.

ಭೀಮಸೇನರಿಗೆ ಕಾರಿನ ಗೀಳಿನಷ್ಟೆ ತೀವ್ರತರವಾದ ಇನ್ನೊಂದು ವ್ಯಾಮೋಹವೆಂದರೆ ಗುಂಡು. ಅನಿಶ್ಚಿತ ಭವಿಷ್ಯ, ಎರಡು ಸಂಸಾರಗಳ ಟೆನ್ಷನ್, ತಿರುಗಾಟ, ಅಯಾಚಿತ ಅವಕಾಶಗಳು, ರಸಿಕ ಕಂಪನಿ. ಗುಂಡಿನ ಸೆಳೆತಕ್ಕೆ ಕಾರಣಗಳಾಗಿರಬಹುದು. ಹಾಗೆ ನೋಡಿದರೆ ಕಾರಣ ಬೇಕೆಂದೇನೂ ಇಲ್ಲ. ಅನೇಕ ಸಲ ಸಂಭಾವನೆಯ ದುಡ್ಡೆಲ್ಲ ಉಡಾಯಿಸಿ ಸ್ನೇಹಿತರಿಂದ ಕೈಗಡ ಪಡೆಯುತ್ತಿದ್ದುದೂ ಉಂಟು. ಒಂದೂ ಬಿಡದೆ ಮರುಸಂದಾಯ ಮಾಡುತ್ತಿದ್ದರು. ಆ ಮಾತು ಬೇರೆ. ಆಗೀಗ ಆರೋಗ್ಯ ಕೆಟ್ಟು ಆಸ್ಪತ್ರೆ ಸೇರಿದ್ದೂ ಇದೆ. ಆಗ ಇನ್ನೆಂದೂ ಮುಟ್ಟೆನೆಂಬ ಪ್ರಸವ ವೈರಾಗ್ಯ. ಮತ್ತೆ ಪುನರಾರಂಭ.

ಭೀಮಸೇನರ 'ಮದ್ಯ'ರಾತ್ರಿಗಳ ಬಗ್ಗೆ ಹಲವಾರು ಘಟನೆಗಳಿವೆ. ಕೆಲವಂತೂ ಕಲ್ಪಿತವೇನೊ ಎನ್ನುವಷ್ಟು ಮೋಜಿನವು.

ಒಮ್ಮೆ ಪುರಿಯಲ್ಲಿ ಪರಮಮಿತ್ರ ಸುವಿಖ್ಯಾತ ಸರೋದವಾದಕ ಅಲಿ ಅಕಬರ್ ಖಾನರ ಭೆಟ್ಟಿ. ಇಬ್ಬರೂ ಕಲಾಪ್ರೌಢಿಮೆಯಲ್ಲಿ ಗುಂಡುಪ್ರಿಯತೆಯಲ್ಲಿ ಒಬ್ಬರನ್ನೊಬ್ಬರು ಮೀರಿಸಿದವರು. ಮಧ್ಯರಾತ್ರಿಯಲ್ಲಿ ಜಗನ್ನಾಥನ ದರ್ಶನ ಮಾಡಿಕೊಳ್ಳುವ ಖಯಾಲಿ. ಗರ್ಭಗುಡಿ ಮುಚ್ಚಿಯಾಗಿದೆ. ಎಷ್ಟು ವಿನಂತಿಸಿಕೊಂಡರೂ ಅರ್ಚಕ ಕೇಳಲೊಲ್ಲ. ಭೀಮಸೇನ ಜೇಬಿನಿಂದ ಫಾರೆನ್ ವಿಸ್ಕಿ ಬಾಟಲ್ ತೆಗೆದು ಪೂಜಾರಿ ಮುಂದೆ ಹಿಡಿದರು. ಅಂದಮೇಲೆ ದ್ವಾರ ತೆರೆದು ಜಗನ್ನಾಥ ದರ್ಶನ ಕೊಡದಿದ್ದಾನೆಯೆ? ಒಂದು ಸಲ ಭೀಮಸೇನ ಮನೆಯಿಂದ ಗಾಯಬ್. ಊರೆಲ್ಲ ಹುಡುಕಿದರೂ ಪತ್ತೆ ಇಲ್ಲ. ಮನೆಯ ಪಕ್ಕದಲ್ಲಿಯೆ ಇದ್ದ ಬಾರ್‌ನಲ್ಲೊಮ್ಮೆ ನೋಡಿಬಿಡುವಾ ಎಂದು ಮನೆಯವರು ಹೋಗಿ ನೋಡುತ್ತಾರೆ. ಭೀಮಸೇನರು ಬಾರ್ ಸೇವಕರನ್ನು ಅರ್ಧ ವರ್ತುಲಾಕಾರದಲ್ಲಿ ಕೂಡಿಸಿಕೊಂಡು ಮಾರುಬಿಹಾಗ ರಾಗವನ್ನು ಕಲಿಸುತ್ತಿದ್ದಾರೆ.

ಎಲ್ಲಕ್ಕಿಂತ ಮೋಜಿನ ಪ್ರಸಂಗವೊಂದಿದೆ. ಒಮ್ಮೆ ಭೀಮಸೇನರಲ್ಲಿಗೆ ಗುಂಡು ಪ್ರಿಯ ಆಪ್ತಮಿತ್ರರೊಬ್ಬರು ಬಂದಿದ್ದರು. ರಾತ್ರಿ ಬಹಳವಾಗಿತ್ತು. ಇಬ್ಬರೂ ಸೇರಿ ಕಾರಿನಲ್ಲಿ ಮುಂಬಯಿಗೆ ರಾತ್ರಿಯೆ ಹೊರಡುವುದಿತ್ತು. One for the road ಬೇಡವೆ? ಬಾರ್ ಬಂದಾಗಿದ್ದವು. ಆಗ ಗ್ಯಾರೇಜ ಮಿತ್ರನೊಬ್ಬನ ನೆನಪಾಯಿತು. ಕಾರಿನ ಶೋಕಿ ಇದ್ದ ದಿನಗಳ ದೋಸ್ತ. ಸಂಗೀತಕ್ಕೂ ಅವನಿಗೂ ಸಂಬಂಧವಿಲ್ಲ. ಭೀಮಸೇನರೊಂದಿಗೆ ನಿಕಟತೆಗೆ ಕಾರಣವೆಂದರೆ ಒಂದು ಕಾರು, ಇನ್ನೊಂದು ಬಾರು. ಅವನಲ್ಲಿ ಯಾವತ್ತೂ ಸ್ಟಾಕ್ ಇರುವುದು ಗೊತ್ತಿದ್ದ ಭೀಮಸೇನ ಅವನಲ್ಲಿಗೆ ಬಂದರು. ಇದ್ದರೆ ಕೊಡು ಎಂದರು. ಅಂದು ಅದೇಕೊ ಅವನಲ್ಲೂ ಇರಲಿಲ್ಲ. ಬಂದ ದಾರಿಗೆ ಸುಂಕವಿಲ್ಲ ಎಂದು ಮುಂಬಯಿಗೆ ಹೊರಟರು. ಗ್ಯಾರೇಜಮಿತ್ರನಿಗೆ ಪರಿಸ್ಥಿತಿಯ ಅರಿವಾದದ್ದು ಸ್ವಲ್ಪ ಹೊತ್ತು ಇಳಿದ ಮೇಲೆ. "ಅರೆರೆರೆ, ಪರಮಮಿತ್ರ ಭೀಮಸೇನರು ಬಂದಿದ್ದರು. ನನ್ನಲ್ಲಿಲ್ಲ ಎಂದು ಹೇಳಿಕಳಿಸಿ ಬಿಟ್ಟೆನಲ್ಲ ...ಂತಹ ಮಿತ್ರ, ನಾನು" ಮತ್ತೆಲ್ಲೊ ಕೆಲವು ಬಾಟಲ್ ಸಜ್ಜು ಮಾಡಿಕೊಂಡ ರಿಪೇರಿ ಮಾಡಿಟ್ಟಿದ್ದ ಕಾರಿನಲ್ಲಿ ಹಿಂಬಾಲಿಸಿದ. ಭೀಮಸೇನರದು ಯಾವ ಕಾರಿಗೂ ಓವರ್‌ಟೇಕ್ ಮಾಡಲು ಬಿಡದ ಹಠ. ಅವರನ್ನು ಕೂಡಿಕೊಳ್ಳಲು ಗ್ಯಾರೇಜ ಮಿತ್ರ ಜೋರಾಗಿ ಕಾರು ಓಡಿಸುತ್ತಿದ್ದ. ತಾವೇನು ಕಮ್ಮಿ ಎಂದು ಭೀಮಸೇನ ವೇಗವರ್ಧಕವನ್ನು ತುಳಿಯುತ್ತಿದ್ದರು. ಹೀಗೆಯೇ ಸ್ವಲ್ಪ ಹೊತ್ತು ನಡೆಯಿತು. ಓವರ್‌ಟೇಕ್ ಮಾಡಲು ಕೊಡರು ಎಂದು ತಿಳಿಯಿತು. ಆಗೊಂದು ಐಡಿಯಾ ಹೊಳೆಯಿತು. ಕಿಟಕಿಯ ಹೊರಗೆ ಬಾಟಲ್ ಹಿಡಿದ. ಹಿನ್ನೋಟ ಕನ್ನಡಿಯಲ್ಲಿ ಭೀಮಸೇನರಿಗೆ ಕಂಡಿತು. ಎಲಾ ಇವನ, ನಮ್ಮ ಗಿರಾಕಿ ಇದ್ದಂತಿದೆ ಎಂದು ಕಾರು ನಿಧಾನಗೊಳಿಸಿದರು. ಘಟ್ಟದ ಓರೆಯಲ್ಲಿ ಒಂದಕ್ಕೊಂದು ಕಾರು ಅಡ್ಡಲಾಗಿ ನಿಲ್ಲಿಸಿ ಅಲ್ಲಿಯೇ ಬೈಠಕ್.

ಜನಪ್ರಿಯತೆಯ ಪರಾಕಾಷ್ಠೆ

ಭೀಮಸೇನ ಜೋಶಿ ಪ್ರಖ್ಯಾತಿ ಹಾಗೂ ಜನಪ್ರಿಯತೆಗೆ ಇನ್ನೊಂದು ಹೆಸರು. ಶ್ರೇಷ್ಠ ಸಂಗೀತಗಾರರು ಜನಪ್ರಿಯರಿರುವುದಿಲ್ಲ, ಜನಪ್ರಿಯರು ಶ್ರೇಷ್ಠರಾಗಿರುವುದಿಲ್ಲ. ಭೀಮಸೇನರು ಎರಡರ ಸಂಗಮ. ಎರಡರಲ್ಲೂ ಸಲ್ಲುವವರು. ಅವರಷ್ಟು ಕಛೇರಿ ಆಹ್ವಾನಗಳಿರುವ ಇನ್ನೊಬ್ಬ ಸಂಗೀತಗಾರನಿಲ್ಲ. ಅವರ ಗಾಯನವೆಂದರೆ ಸಭಾಭವನ ಕಿಕ್ಕಿರಿದು ತುಂಬಿರುತ್ತವೆ. ಖಯಾಲ, ಸಂತವಾಣಿ, ನಾಟ್ಯಗೀತ, ಚಲನಚಿತ್ರ ಹಿನ್ನೆಲೆಗಾಯನ, ಬೇಂದ್ರೆ ಕುವೆಂಪುರವರ ಭಾವಗೀತೆಗಳು-ಹೀಗೆ ಎಲ್ಲವನ್ನೂ ಒಂದು ಕೈನೋಡಿರುವ ಅವರವು ಇನ್ನಾರಿಗಿಂತ ಅಧಿಕ ಧ್ವನಿಮುದ್ರಿಕಗಳು. ಅವರ ಜನಪ್ರಿಯತೆ ನೋಡಬೇಕೆಂದರೆ ಪುಣೆಯಲ್ಲಿ ಅವರೇ ಸಂಘಟಿಸುವ ಸವಾಯಿ ಗಂಧರ್ವ ಸಂಗೀತೋತ್ಸವಕ್ಕೆ ಬರಬೇಕು. ಮೂರು ರಾತ್ರಿಯಿಡೀ ಭಾರತದ ಸಂಗೀತದಿಗ್ಗಜರೆಲ್ಲ ಅಲ್ಲಿ ಪ್ರತಿಭೆ ಮೆರೆಯುತ್ತಾರೆ. ಹೈಸ್ಕೂಲು ಮೈದಾನದಲ್ಲಿ ಪೆಂಡಾಲು. ಹತ್ತೆಂಟು ಸಾವಿರ ಶ್ರೋತೃಗಳು. ಮೂರನೆಯ ರಾತ್ರಿಯ ಕೊನೆಗೆ ಭೀಮಸೇನರ ಸರದಿ. ಅದು ಪರಿಪಾಠ. ಶ್ರೋತೃಗಳು ನಿದ್ದೆಗೆಟ್ಟು ಅಲ್ಲಲ್ಲಿ ಮಲಗಿರುತ್ತಾರೆ. ಭೀಮಸೇನರು ಹಾಡುತ್ತಾರೆಂದು ಅನೌನ್ಸ್ ಮಾಡಿದಾಗ ಗಡಬಡಿಸಿ ಏಳುತ್ತಾರೆ. ಕೂಡಲು ಸ್ಥಳವಿಲ್ಲದಿದ್ದರೆ ನಿಂತು ಆಲಿಸುತ್ತಾರೆ. ಅಂಥ ಸಂಗೀತಗಾರುಡಿಗ ಭೀಮಸೇನರು.

ಭಾರತದಲ್ಲಂತೂ ಸರಿಯೆ. ವಿದೇಶಗಳಲ್ಲೂ ಭೀಮಸೇನರು ಅತ್ಯಂತ ಜನಪ್ರಿಯ ಹಿಂದುಸ್ತಾನಿ ಗಾಯಕರು. 1968 ರಲ್ಲಿ ಕಾಬೂಲದ ದೊರೆ ಝಾಹಿರ ಶಾಹರಿಂದ ಆಮಂತ್ರಣ. ಅವರ ಮಗಳು ಆಕ್ಸ್‌ಫರ್ಡಿನಲ್ಲಿ ಓದುವಾಗ ಲಂಡನ್ ಅಂಗಡಿಯೊಂದರಲ್ಲಿ ಭೀಮಸೇನರ ಲಲಿತ ಮತ್ತು ಶುದ್ಧ ಕಲ್ಯಾಣ ಗಾನತಟ್ಟೆ ಕೇಳಿದಂದಿನಿಂದ ಅವರನ್ನು ಕರೆಸಲು ತಂದೆಗೆ ದುಂಬಾಲು ಬಿದ್ದಿದ್ದಳು. ಪ್ರತಿಷ್ಠಿತ ಆಮಂತ್ರಿತರ ಸಮ್ಮುಖದಲ್ಲಿ ಕಛೇರಿ. ದೊರೆ ಹಿಂದುಸ್ತಾನಿ ಸಂಗೀತದ ಗುಣಗ್ರಾಹಿ. ಅಬ್ದುಲ್ ಕರೀಮಖಾನರ ಅಭಿಮಾನಿ.

1965 ರಲ್ಲಿ ಲೂಯಿಸ್ ಎಂಬ ಡಚ್ ಚಲನಚಿತ್ರ ನಿರ್ಮಾಪಕ-ನಿರ್ದೇಶಕ ವ್ಯಾಂಕೋವರ್‌ನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭೀಮಸೇನ ಜೋಶಿಯವರ ಗಾನತಟ್ಟೆ ಕೇಳಿದ್ದ. ಕೂಡಲೆ ಭೀಮಸೇನರಲ್ಲಿಗೆ ಬಂದ. ಅವರ ಸಂಗೀತ ಕುರಿತು ಚಿಕ್ಕ ಚಲನಚಿತ್ರ ತಯಾರಿಸಿದ. ಪಾಶ್ಚಿಮಾತ್ಯ ದೇಶಗಳಲ್ಲೆಲ್ಲ ಪ್ರದರ್ಶಿಸಿದ.

ಕೆನಡಾದ ವಾಣಿಜ್ಯಪಟು ಜೇಮ್ಸ್ ಬೆವರಿಜ್ ಕೂಡ ಸಂಗೀತಾಸಕ್ತ. ಲೂಯಿಸ್ ಬಂದುಹೋದ ಕ್ಷಿಪ್ರದಲ್ಲಿಯೆ ಪುಣೆಗೆ ಬಂದು ಭೀಮಸೇನರ ಬಗ್ಗೆ 20 ನಿಮಿಷಗಳ ಸಾಕ್ಷ್ಯಚಿತ್ರ ತಯಾರಿಸಿದ. ಅದಕ್ಕೆ ಮಿಂಯಾ ಮಲ್ಹಾರ ಎಂದು ಹೆಸರಿಟ್ಟ.

ಪದ್ಮಭೂಷಣ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳನ್ನು ಪಡೆದ ಭೀಮಣ್ಣನಿಗೆ ಈ ವರ್ಷ 75 ತುಂಬಿತು. ಐವತ್ತು ವರ್ಷಕ್ಕೂ ಹೆಚ್ಚುಕಾಲ ನಮಗೆಲ್ಲ ಸಂತೋಷವನ್ನೇ ಕೊಡುತ್ತಾ ಬಂದ ಭೀಮಣ್ಣನ ಕಂಠ ಇನ್ನೂ ಹತ್ತಾರು ವರ್ಷ ಹಾಡುತ್ತಿರಲಿ. ■

ಚೆನ್ನಿಗಪ್ಪನಿಗೆ ಚಚ್ಚಿದ್ದೇ ಬೆಂಗಳೂರು ಸಭೆ ಸಾಧನೆ ಕಣೋ

ಉಗ್ರಿ, ಜುಮ್ಮಿ ಬರುವುದನ್ನೇ ಕಾದಂತಿದ್ದ ಕಾಳಮಾವ ಅವರು ಕಾಣಿಸಿಕೊಂಡ ಕೂಡಲೇ,

"ಬೆಂಗಳೂರಿಗೋಗಿದ್ರೇನೆ ಜುಮ್ಮೀ?" ಎಂದ.

"ಇಲ್ಲ ಕಣಮಾವ. ಯಾಕೊ ಹೋಗಬೇಕು ಅಂತ ಅನ್ನಿಸಲಿಲ್ಲ. ಆ ವಾಟಸ್ನೆ ಹೋಗಿದ್ದೇನೊ ಕೇಳನಿರು" ಎಂದಳು.

"ಅವುನೋಗದೆಯಿದ್ದನೇ?"

ಬಂಗಾರು ಸೀಮೆಯ

ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಕಾಂಗ್ರೆಸ್ಸಿನೋರೆ ಹೋಗಿದ್ರು ಅಂದಮ್ಯಾಲೆ ಅವುನೋಗಿರದಿಲ್ವೆ?" ಎಂದ ಉಗ್ರಿ.

"ಕಾಂಗ್ರೆಸ್ಸಿನೋರ್ಯಾರ್ಲ ಹೋಗಿದ್ದೋರು?"

"ಆಯ್ಯೋ, ಬಸ್ಸಿನ ತುಂಬ ಕಾಂಗ್ರೆಸ್ಸಿನೋರೆ ಇದ್ರಂತೆ ಕಣೇ. ಆ ಶಿವಣ್ಣ, ಗೋವಿಂದ, ಬಸುರಾಜ, ಆ ಮೇಸ್ಟ್ರುಡುಗ ಇವುರ್ಯಲ್ಲ ಯಾವ ಪಾರ್ಟಿ?"

"ಅವುರ್ಯಲ್ಲ ಯಾಕೋಗಿದ್ರೂ?"

"ಬಸುರಾಜನುಡುಗ ಬೆಂಗಳೂರಲ್ಲವುನೆ ನೋಡ ಕ್ಕೋಗಿದ್ದ. ಇನ್ನ ಶಿವಣ್ಣನ ಮಗಳು ಬೆಂಗಳೂರಲ್ಲೇ ಅಲವ ಇರದು. ಅವುಳಿಗೆ ಒಂದತ್ತು ಕಾಯಿ ಐದು ಸೇರ್‍ರಾಗಿ ತಗಂಡು ಅವುನೋಗಿದ್ದ. ಹಿಂಗೆ ಬೆಂಗಳೂರಿಗೆ ಹೋಗಿ ದ್ದವುಕ್ಯಲ್ಲ ಏನೇನೊ ಕ್ಯಲಸಿತ್ತು ಕಣೆ. ಬಿಟ್ಟ ಬಸ್ಸು ಸಿಕ್ಕಿದ್ರೆ ಜನ ಜಂತಾಪಾರ್ಟಿ, ಕಾಂಗ್ರೆಸ್ ಪಾರ್ಟಿ, ಬಿಜೆಪಿ ಪಾರ್ಟಿನ್ಯಲ್ಲ ಮರಿತರೆ ಕಣೆ."

"ಅದೇ ವಳ್ಳೆದು ಬುಡ್ಯ. ನಾನೀಪಾರ್ಟಿ, ನೀನು ಆ ಪಾರ್ಟಿ ಅಂತ ವಡದಾಡದಕಿಂತ ಯಲ್ಲಾ ಪಾರ್ಟಿ ಸಬಿಗೂ ಹೋಗದು ವಳ್ಳೆದು" ಎಂದ ಸೀರ.

"ಅಗೊ ನೋಡು ಬೆಂಗಳೂರಿಗೆ ಬಂದಿದ್ದವ್ಯಲ್ಲ ಅಂಥವೆಯ."

"ಅದ್ರು ದ್ಯಾವೇಗೌಡುನಿಗೂ ಜನವುರೆ ಕಂಡ್ಯ" ಎಂದ ಕಾಳಮಾವ.

"ದ್ಯಾವೇಗೌಡನಿಗೆಲ್ಲಿ ಜನಿದ್ದರು ಮಾವ? ಅವುನ ಪಾಲೋಯರ್‍ರಾಗ್ನೆ ನಿನ್ನಂಗೆ ಜಗಲಿ ಹಿಡದವುರೆ. ಈಗೇನಿದ್ರು ಕುಮಾರಸ್ವಾಮಿ ಪಾಲೋಯರ್ರೇ ಜಾಸ್ತಿ."

"ಅಂತು ಮಗನ್ನೆಬ್ಬಿಸಿಬುಟ್ಟ" ಎಂದ ಸೀರ.

"ಎಬ್ಬಿಸಿ ನಿಲ್ಲಿಸಿ ಆಗ್ಲೆ ಕುರ್ಚಿ ಮ್ಯಾಲೆ ಕುಂಡ್ರಿಸ್ಯಾಗ್ಯದೆ, ಇನ್ನೆಲ್ಲಿ ಎಬ್ಬುಸ್ತನೊ?"

"ಅಂತೂ ಅಪ್ಪನ ಜಾಕ್ಕೆ ಮಗ ಬಂದ. ಇನ್ಯಾರು ಆ ಜಾಗಕ್ಕೆ ಬತ್ತಿವಿ ಅನ್ನೊ ಆಸೆಯ ದಳದಲ್ಲಿ ಇಟಗಳಂಗಿಲ್ಲ."

"ಇಲ್ಲ, ಅದೊಂದು ವಿಷಯದಲ್ಲಿ ದೂಸರ ಮಾತಾಡಂಗಿಲ್ಲ. ಜಂತಾದಳಕ್ಕೆ ಸೇರದೆ ಆದ್ರೆ ಕುಮಾರಣ್ಣ, ರೇವಣ್ಣ ಅಂತ ಅಣ್ಣದೀರ ಒಪ್ಪಿಕೊಂಡು ಕಾಲಮಾಡಬೇಕು."

"ದ್ಯಾವೇಗೌಡನೇ ಹೇಳಿದ್ದನಂತಲ್ಲಾ?"

"ಏನಂತವಾ?"

"ಇನ್ನಮ್ಯಾಲೆ ನಿಮಗ್ಯಲ್ಲ ಅಣ್ಣದೀರು ಅಂದ್ರೆ ಇವರೆಯಾ ಅಂತ ಸಬೆಲೆ ಹೇಳಿದನಂತೆ?"

"ಅವುನೇಳದೆಯಿದ್ರೂ ಜೆಡಿಎಸ್ ನೋರಿಗ್ಯಲ್ಲ ಅವುರೇ ಅಣ್ಣದೀರು ಕಣಚೆಗಪ್ಪ" ಎಂದುಕೊಂಡು ವಾಟಸ್ನೆ ಬಂದ.

"ನೀನು ಹೋಗಿದ್ದೇನ್ಲ ಜೆಡಿಎಸ್ ಸಬಿಗೆ?" ಎಂದಳು ಜುಮ್ಮಿ.

"ಹೋಗದೆಯಿರಕ್ಯಾಯ್ತದೇನಕ್ಕ? ಮನೆ ಮುಂದಕೆ ಸರಕಾರಿ ಬಸ್ಸು ಬಂದು ನಿಂತಾಗ ಹೋಗದೆಯಿರದ್ಯಂಗೇ? ಅದ್ಕೆ ಹೋಗಿದ್ದೆ."

"ಅವತ್ತೆ ಬಂದೇ ಅನ್ನು?"

"ಊ ಕಣಕ್ಕ. ಮರುದಿನ ಬರದಾದ್ರೆ ನೂರುಪಾಯಿ ಬಸ್‌ಚಾರ್ಜು ಎಲ್ಲಿಂದ ತರ್ಲಕ್ಕ? ಅದ್ಕೆ ಅವತ್ತೆ ಬಂದೆ. ಅದರಲ್ಲೂ ಬೆಂಗಳೂರು ಜನ ತಾವು ಮಾತ್ರ ಇದ್ದಲ್ಲೇ ಇದ್ದಕಂಡು ನಮ್ಮ ಬಸ್ಸು ಹೋಗಕ್ಕೆ ಜಾಗಬುಟದ್ರು."

"ನಿಮ್ಮಾವಳಿಯಿಂದ ಇಸುಗೂಲಿಗೋಗೋ ಮಕ್ಕಳು ಬೀದಿಲೆ ಇದ್ದವಂತಲ್ಲಾ?"

"ಒಂದಿನ ಇದ್ರೆ ಏನಾಯ್ತದಕ್ಕ? ಹಳ್ಳಿ ಕಡೆ ನೋಡು, ನಮ್ಮುಡುಗ್ರು ಯರಡು ಮೂರುದಿನ ಇಸುಗೂಲಿಗೇ ಹೋಗದಿಲ್ಲ, ಐದು ಹತ್ತು ಕಿಲೋಮೀಟ್ರು ನ್ಯಡಿಬೇಕು. ಅದು ಬಿಸ್ಲು ಮಳೆ ಗಾಳಿಲಿ. ಅಂತದ್ರಲ್ಲಿ ಬೆಂಗಳೂರು ಚಿಲ್ರನ್ನು ಏಳುಗಂಟೆ ಟೇಮ್ ರಸ್ತೆಲಿದ್ರೆ ಏನಾಯ್ತು?"

"ಇದೇನ್ಲ ಕುಮಾರಸ್ವಾಮಿಯಂಗೆ ಮಾತಾಡ್ತೀ?"

"ಕುಮಾರಸ್ವಾಮಿಯಂಗಲ್ಲ ಕಣಕ್ಕ, ಜೆಡಿಎಸ್ ತರ ಅನ್ನು."



"ಅಲ್ಲ ಕಣೊ, ಹಳ್ಳಿ ಮಕ್ಕಳು ನ್ಯಡಿತವೆ ಅಂತ ಸಿಟಿಹುಡುಗ್ರ ರಸ್ತೆಮ್ಯಾಲೆ ನಿಲ್ಸದು ಯಾವ ನ್ಯಾಯ ಹೇಳು?" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನಿನ್ನ ತರಕ ಅಂತ ಕುಮಾರಸ್ವಾಮಿಗೆ ಅರ್ಥವಾಗಿಲ್ಲ ಅಂದ್ರೆ, ಇನ್ನ ಜೆಡಿಎಸ್‌ನೋರಿಗೆ ಅರ್ಥವಾಯ್ತದೇನೊ? ಬೆಂಗಳೂರಲ್ಲಿ ಸ್ಕೂಲುಡ್ರು ಜನಗಳಿಗೆ ಆಗಿರೊ ತೊಂದ್ರೆಗೆ ನಾನು ಕ್ಷಮೆ ಕೇಳ್ತಿನಿ ಅನ್ನಬವು... ಕುಮಾರಸ್ವಾಮಿ. ಅದುಬುಟ್ರು ಹಳ್ಳಿ ಹುಡುಗ್ರು... ಗೊತ್ತ? ಹಳ್ಳಿ ಜನಗಳು ಬೆಂಗಳೂರಿಗೆ ಕಷ್ಟ ಹೇಳ... ಬಂದಾಗ ಆಗೊ ಟ್ರಾಫಿಕ್ ತೊಂದ್ರೆನ ತಡಕಬ... ಅಂದವುನೆ, ಇದಕೇನೇಳ್ತೀ?"

"ನೋಡು ಮತ್ತೆ ಇನ್ಯಂಥಾ ದಡ್ಡಿದ್ದನವುನು? ಅ... ಜನಗಳು ಬಂದಿದ್ದು ಅಪ್ಪ ಮಕ್ಕಳ ಜಾತ್ರೆ ಉತ್ಸವ ನೋ... ಕಷ್ಟ ಹೇಳಿಕಳಕ್ಯೆಲ್ಲಿ ಬಂದಿದ್ರೂ?"

"ಅವುನ ಪ್ರಕಾರ ಅವೆಯು ಕಣೊ ಉ... ಕುಮಾರಸ್ವಾಮಿಗೆ ವರ್ಡ್ಸ್ ಪ್ರಾಬ್ಲಂ ಇರದರಿಂದ ... ಬೆಂಗಳೂರಿಗೆ ಬಂದಿದ್ದು ಯಾಕೆ ಅಂದ್ರೆ ಕಷ್ಟ ಹೇಳಿ... ಅಂತ ಅವುನೇಳ್ತನೆ."

"ಏನಾರ ಹೇಳಿಕಳ್ಳಿ, ಆ ಚೆನ್ನಿ... ಗೂಸಾ ಬಿದ್ದವಲ್ಲ ಹೇಳು?"

"ಬೆಂಗಳೂರ ಜೆಡಿಎಸ್ ಸಾ... ಅಂದ್ರೆ ಚೆನ್ನಿಗಪ್ಪನಿಗೆ ಗೂಸಾ ಕೊ... ಕಣೊ."

"ಅಂಗೆ ಆಯ್ತು. ಅವ... ಪೊಲೀಸ್ ಆಗಿದ್ದಾಗ ಏಟು ... ವಡದಿದ್ದೊ ಏನೊ ಅಂತು ... ಓಡಿಸ್ಯಾಡಿಕಂಡು ವಡದ್ರುತ್ತಗೆ."

"ಅವುನಿಗ್ಯಾಕ್ವಡದುರ್ಲ?"

"ಅವುನು ಗೂಸ ತಿ... ಯೋಗ್ಯಾಗಿದ್ದ ಕಣಕ್ಕ ಅದ್ಕೆ ವ..."

"ಸರಿಯಾಗೇಳ್ಳ."

"ನೋಡಕ್ಕ, ಈ ದ್ಯಾವೇಗ... ಮುದ್ಲಿಂದ ತೋಳು ತಿ... ರಾಜಕಾರಣೆ. ಅಂಥವನ ಪಾ... ಜನಗಳಿಗೂ ಅದೇ ತಿಮರಿರತದೆ. ಹಿಂದೆ ರಾಮ... ಹೆಗಡೆಗೆ ಹಾಸನದಲ್ಲಿ, ಭದ್ರಾವತಿಲಿ ವಡಿಸಿದ್ದ. ಅ... ಮಗ ವಿಧಾನಸಭೆ ಸುತ್ತ ಜನ ಸೇರಿಸಿ ಕಲ್ಲು, ಮ... ಬೀರಿಸಿದ್ದ. ಅಂತ ಕಲ್ತರಿರೊ ದ್ಯಾವೇಗೌಡ್ರು ಪಾ... ಜಾತ್ರೆ ನ್ಯಡಿವಾಗ ಇವುನು ಮನೆಲಿರಬೇಕೋ ಬ್ಯಾಡವ್ರೊ..."

"ಇರಬೇಕು ಬುಡು."

ಮಾನ ಹರಾಜಾದದ್ದು ಯಾರದ್ದು?

'ರಾಜಕೀಯದಲ್ಲಿ ಅದಿನ್ನೂ ಬಚ್ಚಾ' ಅಂದಿದಾರೆ ರಾಜನಾಥ ಸಿಂಗ್‌ಜೀ, ರಾಹುಲ್ ಗಾಂಧಿ ಕುರಿತು. ತನ್ನಷ್ಟು ವಯಸ್ಸಾಗಿಲ್ಲ ಆದರೂ ಅಜ್ಜಿಗೆ ಕೆಮ್ಮೋದು ಕಲಿಸೋಕೆ ಬರುತ್ತಲ್ಲ ಈ ಮುಂಡೇದು ಅಂತ ಇರಬೇಕು. ಅಲ್ವೆ ಮತ್ತೆ ಭಾರತದ ರಾಜಕೀಯದಲ್ಲಿ ಅರುಳುಮರಳು ಆದನಂತರವೇ ನಾಯಕ ಅನ್ನಿಸಿಕೊಳ್ಳೋದು. ಅದಕ್ಕೆ ಇರಬೇಕು. ನಲವತ್ತೆಂಟರ ಹರಯದ ಒಬಾಮಾ ಅಮೆರಿಕ ಅಧ್ಯಕ್ಷನಾಗುತ್ತಿದ್ದಂತೆಯೇ ಅಡ್ವಾಣಿ ಸಾಹೇಬರು 'ಅಲ್ಲಿನ ಜನರು ಬದಲಾವಣೆ ಬೇಕೂಂತ ಡೆಮಾಕ್ರಾಟ್‌ನ ಆಯ್ಕೆ ಮಾಡಿದ್ದಾರೆ. ಭಾರತದಲ್ಲಿಯೂ ಬದಲಾವಣೆ ತನ್ನಿ' ಅಂತ ಕರೆ ನೀಡಿದರು. ಅಂದರೆ ಯುವಕರನ್ನ ಪ್ರಧಾನಿ ಪಟ್ಟಕ್ಕೇರಿಸಬೇಕಾ ಅಂದರೆ 'ಶಾಂತಂ ಪಾಪಂ. ಆ ಪದವಿ ಏನಿದ್ದರೂ ಮುದಿಯರಿಗೇ ಮೀಸಲು, ಯುಪಿಎ ಬದಲು ಎನ್‌ಡಿಎ ತನ್ನಿ' ಅಂತಾನಂತೆ! ಅಂದ ಮೇಲೆ ಯುವ ಭಾರತಕ್ಕೆ ಈ ಮುದಿಯರ ಕಾಟದಿಂದ ಸದ್ಯಕ್ಕೆ ಮುಕ್ತಿ ಸಿಗಲ್ಲ ಅಂದಹಾಗೆ ಆಯಿತು.

ರಾಜನಾಥಸಿಂಗ್‌ಗೆ ಉತ್ತರವಾಗಿ 'ನಾನೇನೋ ವಯಸ್ಸಿನಲ್ಲಿ ಕಿರಿಯನೇ. ಈ ಬಚ್ಚಾ ಭಾರತದ ಸ್ಥಿತಿ ಏನಾಗಿದೆ ಎಂಬುದನ್ನು ಅವರು ಕಣ್ತೆರೆದು ನೋಡಲಿ' ಎಂಬುದಾಗಿ ರಾಹುಲ್ ತಿರುಗೇಟು ನೀಡಿದರಂತೆ. ಅದಲ್ಲ ವಿಷಯ. ಭಾಜಪ ಬಚ್ಚಾ ಬಚ್ಚೇಗೌಡರು (ಅರೆರೆ ಅರವತ್ತು ಮೀರಿದ ಈ ಗೌಡರು ಅದೇಗೆ ಬಚ್ಚ ಆಗಲು ಸಾಧ್ಯ ಅಂದರೆ ಅವರಿಗೆ ಭವ್ಯ ಭಾರತದಲ್ಲಿ ನಾಯಕರಾಗಲು ವಯಸ್ಸಿನ ಅರ್ಹತೆ ಇರಬಹುದು. ಆದರೆ ಭಾಜಪಕ್ಕೆ ಬಂದು ಇನ್ನೂ ಆರೇ ತಿಂಗಳಲ್ವ ಆಗಿರೋದು. ಅದಕ್ಕೆ ಅದು ಇನ್ನೂ ಅಲ್ಲಿ ಹಸುಗೂಸು. ಅದಕ್ಕೆ ಬಚ್ಚಾ ಅಂದದ್ದು!) ದೇವೇಗೌಡರು ಹಾಗೂ ಅವರ ಕುಟುಂಬದವರ ಮೇಲೆ ವೀರಾವೇಷದಿಂದ ಹರಿಯಾಯ್ದದ್ದಲ್ಲ ಅದಕ್ಕೆ ಬಲೋಣವಂತೆ.



ಭಾಜಪ ಬಚ್ಚ ಆದಾಕ್ಷಣ 'ಬಾಲಭಾಷೆ'ಯನ್ನೇ ಬಳಸಬೇಕೂಂತ ಇಲ್ಲ, ಬಾಲಭಾಷೆ ಅಂದರೆ ನಮ್ಮ ಕಡೆ ಅಜ್ಞಾನ, ಅನಾಗರಿಕಗಳ ಪ್ರತಿರೂಪವಾದ ಅಸಹ್ಯ ತರಿಸುವ ಸೊಂಟದ ಕೆಳಗಿನ ಭಾಷೆ ಅನ್ನೊ ಅರ್ಥ ಇದೆ. ಅವರು ಕೆಂಪೇಗೌಡ ವಂಶಸ್ಥರಂತೆ. ಹಾಗಂತ ಅವರೇ ಘೋಷಿಸಿಕೊಂಡಿದ್ದಾರೆ. ಅಂತಹ ವಂಶದ ಕುಡಿ ಅಂದ ಮೇಲೆ ಯಾರ ಮೇಲಾದರೂ ಎಂತಹ ಭಾಷೆ ಪ್ರಯೋಗಿಸಲೂಬಹುದು. ಇದಕ್ಕೆ ಹುಟ್ಟನಿಂದಲೇ ಪರ್ಮಿಷನ್ ತೆಗೆದುಕೊಂಡು ಬಂದವರೆ ಅಂತ ಆಯಿತು.

ಅಲ್ಲ ಈ ದೇವೇಗೌಡನ, ಅವನ ವಂಶವ ಜಾಲಾಡೋಕೆ ಈ ಮಾಗಡಿ ಕೆಂಪೇಗೌಡನನ್ನು ಯಾಕೆ ಎಳೆದುಕೊಂಡು ಬಂದರು ಅಂದರೆ ಅದಕ್ಕೂ ಕಾರಣ ಇದೆ. ದೇವೇಗೌಡರ ಕುಡಿ ರೇವಣ್ಣ ಅನ್ನೋನು 'ನಾ ಕಾಣೆನಾ ಆ ಬಚ್ಚನಾ, ಬರಿ ಕಾಲಲಿ ಗೌಡರೆದುರು ನಿಲ್ಲುತ್ತಿದ್ದವನ' ಎಂಬರ್ಥ ಬರುವ ಮಾತನ್ನು ಆಡಿದ್ದರಂತೆ. ಇದರಿಂದ ಈ ರಾಜವಂಶಸ್ಥರು ಕೆರಳಿ ಕೆಂಡಾಮಂಡಲ ಆದರು. 'ನಮ್ಮ ತಾತನಿಗೆ ನಾಲ್ಕು ಸಾವಿರ ಎಕರೆ ಜಮೀನಿತ್ತು' ಅಂತ ತರುಬು ನೆನಪಿಸಿಕೊಂಡರು 'ಉಳುವವನಿಗೇ ಭೂಮಿ' ಹಕ್ಕು ಕಾಯ್ದೆ ಬಂದಾಗ ಮೂರು ಸಾವಿರ ಎಕರೇನ ಗೇಣಿದಾರರಿಗೆ ಬಿಟ್ಟುಕೊಟ್ಟೆ..... (ಅಲ್ಲಿಯವರೆಗೂ ವಂಶಪಾರಂಪರ್ಯವಾಗಿ ಬಡವರ ಶೋಷಣೆ ಮಾಡಿದ್ದರು ಅಂತ ಆಯಿತು. ಇರಲಿ) ಈಗಲೂ ಸಾವಿರ ಎಕರೆ ಜಮೀನ್ದಾರ ನಾನು (ಭೂಸುಧಾರಣಾ ಕಾಯ್ದೆಗೆ ಹೇಗೆ ಮೇತ್ರಿಗೆ ಹಚ್ಚಿದಿರಿ ಎಂದು ತಿಳಿಸಿದ್ದರೆ ಚೆನ್ನಿತು!) ಆ ದೇವೇಗೌಡ ಪೀಸ್‌ವರ್ಕ್ ಕಾಂಟ್ರಾಕ್ಟ್ ಮಾಡಿ ಕೊಂಡಿದ್ದೋನು. ಬೆಂಗಳೂರಿಗೆ ಬಂದಾಗ ಸ್ವಂತ ಮನೆ ಇರ್ಲಿಲ್ಲ. ಬಾಡಿಗೆ ಮನೇಲಿದ್ದ. ಈಗ ಮೆರೀತಾ ಅವಲ್ಲ ಅವನ ಮಕ್ಳು ಆಗ ಅವೆಲ್ಲ ಬೆತ್ತಲೆ ಓಡಾಡ್ತಾ ಬದ್ದಿದ್ದೊ. ನಾನು ಕಾಚ ತಂದು ಕೊಟ್ಟೆ. ಮಾನ ಮುಚ್ಚಿಕೊಳ್ಳಲಿ ಅಂತಾವ. ಆಗ ಒಂದು ಕಾಚಾಕ್ಕೆ ನಾಲ್ಕು ರೂಪಾಯಿ ಇತ್ತು.

"ಈ ದೇವೇಗೌಡ ಅನ್ನೋನು ಕರಿನಾಗರ ಇದ್ದಂಗೆ. ಅವನು ಮೈಮುಟ್ಟಿದರೆ ಮುಗೀತು ಅವನ ಕತೆ. ರಾಮಕೃಷ್ಣ ಹೆಗಡೆ, ಬೊಮ್ಮಾಯಿ, ಪಟೇಲರು, ನಾಗೇಗೌಡ ಅವರೆಲ್ಲ ಸತ್ತಿದ್ದು ಇವನಿಂದ. ಮಿರಾಜುದ್ದೀನ್ ಪಟೇಲ್ ಸಾಯೋಕ್ಕೂ ಇವನೇ ಕಾರಣ (ಹಾಗಾದರೆ ಮರ್ಡರ್ ಕೇಸ್ ಜಡಿಸಬಹುದಲ್ಲ? ಹೇಗೂ ಅವರದ್ದೇ ಸರ್ಕಾರ ಇದೆ ಅಂದರೆ ಅದು ಆಗಲ್ಲವಂತೆ. ಕಾರಣ ಮುಂದೆ ನೋಡಿ) ಪೂಜೆ, ಹವನ, ಹೋಮ, ಮಂತ್ರ, ಮಾಟಗೀಟ ಅಂತ ಏನೇನೋ ಮಾಡಿಸೋದರಲ್ಲಿ ನಿಸ್ಸೀಮ. ಎಲ್ಲರನ್ನೂ ಮಾಟ ಮಾಡಿಸಿ ಮುಗಿಸಿಬಿಟ್ಟ. ದೇವರನ್ನೂ ಬಿಟ್ಟಿಲ್ಲ ಕಣ್ರಿ. ಅವರ ಕೈಕಾಲು ಕಟ್ಟಿ ಕತ್ಲೆ ಮನೇಲಿ ಕೂಡಾ... (ಹೇಬಿಯಿಸ್ ಕಾರ್ಪಸ್‌ಗೆ ಫಿಟ್ ಕೇಸು ಅ... ಹಾಗಾಯಿತು).

"ನಾನು ಆದಿಚುಂಚನಗಿರಿ ಮಠದ ಉಪಾ...

ಅಣಾ...

■ ಎಚ್.ಎಲ್. ಕೇಶವಮೂ...

ಹೇಳ್ತೇನಿ ಕೇಳಿ. ಅಂತ ಪವಿತ್ರ ಬೆಟ್ಟದಲ್ಲಿ ಗಣಿಗಾರಿ... ಪರ್ಮಿಷನ್ ಕೊಟ್ಟಿದಾನೆ ಆ ಚೆಲುವರಾಯಸ್ವಾ... ಸಿಡಿಮದ್ದು ಸದ್ದಿಗೆ ಬೆಟ್ಟವೇ ಅಲ್ಲಾಡುತ್ತೆ, ಕೋಟ್ಯಂ... ರೂಪಾಯಿ ಖರ್ಚು ಮಾಡಿ ನಿರ್ಮಿಸಿರೆ... ವಿದ್ಯಾಸಂಸ್ಥೆಗಳು, ವಸತಿ ನಿಲಯಗಳು, ದೇವಸ್ಥಾನ ... ಅಲ್ಲಾಡ್ತಾ ಕುಂತವೆ (ಈ ಘನ ಸರ್ಕಾರ ಅದಕ್ಕೆ ತಡೆ ... ಬಹುದಿತ್ತಲ್ಲ!). ಆ ಮಠದ ಹೆಸರೇಳಿಕೊಂಡು ಬೆಳೆದೊ... ಹಿಂಗೇನ್ರಿ ಮಾಡೋದು?

"ಶ್ರೀಮಠ ಇಲ್ಲದಿದ್ದರೆ ಈ ದೇವೇಗೌಡ ಎಲ್ಲಿರ್ರಿ... ಅಂತಹ ಸ್ವಾಮಿಗಳ ಮೇಲೇ ಕ್ರಿಮಿನಲ್ ಕೇಸ್ ಹಾಕಿ... (ಶ್ರೀಮಠ ಬೆಂಗಳೂರಿನ ಬಳಿ ಅರಣ್ಯ ಭೂಮಿಯ ಒತ್ತು... ಮಾಡಿಕೊಂಡಿತ್ತು, ಎಲ್ಲ ಮಠದವರ ತರಹವೇ ಇವ... ಮಾಡಿಕೊಂಡಿದ್ದಾರೆ ಅಂತ ತೆಪ್ಪನೆ ಇರಬಹುದಿತ್ತು, ಹ... ಮಾಡಲಿಲ್ಲವಲ್ಲ ಅನ್ನೋದು ಅವರ ಕೋಪಕ್ಕೆ ಕಾರಣ... ಪಾಪ ಸ್ವಾಮಿಗಳಿಗೆ ಇವರ ಕಾಟ ತಡೀಲಾರದೆ ... ಪ್ರಾಬ್ಲಂ ಪ್ರಾರಂಭವಾಯ್ತು. ಎರಡು ಸಲ ಆಪರೇ... ಆಗಿದೆ. ಅವರು ಸತ್ತರೆ ಅವರ ಸಾವಿಗೂ ಇವನೇ ಕಾರ...

ಒಕ್ಕಲಿಗರ ಹೆಸರೇಳಿಕೊಂಡು ಮುಂದೆ ಬಂದ. ಅ... ಮಠಾನೆ ಒಡೆದ. ಕೆಂಗೇರೀಲಿ ಒಂದು ಪ್ರತ್ಯೇಕ ... ಮಾಡಿಸಿದ. ಅವನು ಯಾರನ್ನೂ ಮುಂದೆ ತರಲಿಲ್ಲ...

"ಎಲ್ಲಿರೆಗ್ಯಾವತವ್ರುನು ಮತ್ತೆ ಪೊಲೀಸಾಗಿದ್ದೋನು."

"ನಿಜ ಕಣೊ ಉಗ್ರಿ. ನಾನು ಪೊಲೀಸಾಗಿದ್ದೆ, ಮಂತ್ರಿಯಾಗಿದ್ದೆ ಅನ್ನ ಂದು ಹೋದ್ರೆ ಬುಟ್ಟರೆ ಜನ? ಅದರಲ್ಲೂ ಇವ್ರುನು ದ್ಯಾವೇಗೌಡ್ರ ಬಾಯಿಗೆ ಂದಂಗೆ ಬೋದಿದ್ದ. ದಳದೋರು ಕಾಯ್ತಾಯಿದ್ರು. ಅದೇ ಟೇಮಿಗೆ ಸಿಕ್ಕಿದ, ತಟ್ಟಿದ್ರು."

"ಚಚ್ಚದ್ರಾ ಅಂದ್ರೇನು, ಆಸುಪತ್ರಿಗೋಗಿ ಅದಮಿಟ್ಟಾಗಂಗೆ ನೇದರಂತೆ" ಂದ ಉಗ್ರಿ.

"ಠಿಯಲಿ ದ್ಯಾವೇಗೌಡ್ರ ಪಾರ್ಟಿ ಜಾದು ಅಂದ್ರೆ ಇದು ಕಣೊ ಉಗ್ರಿ. ವರ್ಡೋರ್ಸ ಮಂತ್ರಿಯಾಗಿ ಮೈರಿತಿದ್ದ ಚೆನ್ನಿಗಪ್ಪನ ಹಿಂದೆಮುಂದೆ ಪೊಲೀಸು ್ಯರನ್ನು! ಅದೇ ಈ ವರ್ಷ ಆಂಬುಲೆನ್ಸ್ ಸೈರನ್ನಲ್ಲಿ ಆಸುಪತ್ರಿಗೋದ!" ಂದು ವಾಟಿಸ್ಸೆ ನಕ್ಕ.

"ಅದೂ ತಾನು ಮಂತ್ರಿಯಾಗಿದ್ದ ಪಾರ್ಟಿ ಜನಗಳಿಂದ್ಲೆ ಗೂಸು ತಿಂತನೆ ಂದ್ರೆ ಇನ್ನೇನಳನ? ಇವ್ರುಂದಿರ್ಲಿ, ಆ ಬಚ್ಚೇಗೌಡನಿಗೆ ಯಾವತ್ತು ವಡಿತರೊ ನೊ?"

"ಅವ್ರುನು ಮಂತ್ರಿಯಾಗದೆಯಿದ್ರೆ ಇಷ್ಟೊತ್ತಿಗೆ ಬೀಳವ್ರು."

"ಅವ್ರುನಿಗ್ಯಾಕ್ಹಡದರ್ಲಾ?" ಎಂದ ಕಾಳಮಾವ ತಾತ್ಸಾರದಿಂದ.

"ಅವ್ರುನು ದ್ಯಾವೇಗೌಡ ಮತ್ತವನ ಮಕ್ಕಳ. ಹಿಗ್ಗಾಮುಗ್ಗ ಬೋದವ್ರುನೆ ಕಣೊ ದ್ವಡಪ್ಪ, ಅದ್ಕೆ ಅವ್ರುನಿಗೂ ಗೂಸಾ ಬೀಳಬಹುದು."

"ಯಾಕಬೋದ ಅವ್ರುನು?"

"ಅವ್ರುನಿಗುಚ್ಚಂತೆ, ಕುಮಾರಸ್ವಾಮಿನೆ ಅಂಗಂದವ್ರುನೆ."

"ಸರಿ ಹುಚ್ಚುನಿಗ್ಯಾಕ್ಹಡಿಬೇಕು ಅಂತ ಸುಮ್ಮನಿದ್ರಾಯ್ತು."

"ನೀನಂಗಂತಿ. ದ್ಯಾವೇಗೌಡ್ರ ಪಾಲೋಯರ್ರು ಸುಮ್ಮನಿರಬೇಕಲ್ಲಾ ಹೇಳು?"

"ನಾನು ಅಂಗೇ ನೋಡ್ತಿನಿ ಕಣೊ ವಾಟಿಸ್ಸೆ. ಮದ್ಲಿಂದ ಈ ದಳದವ್ರು ನ್ಮೋರಮ್ಯಾಲೆ ಬೀಳ್ತವೇ ಹ್ವರತೂ ಕಾಂಗ್ರೆಸ್ಸು ಅಥವಾ ಬಿಜೆಪಿಗಳ ಮ್ಯಾಲೆ ದದಾಟಕೆ ಹೋಗಿಲ್ಲ."

"ದಳ ಒಂಥರಾ ದಾಯಾದಿ ಪಕ್ಷ ಇದ್ದಂಗೆ ಕಣೊ. ದಾಯಾದಿಗಳು ಯಾವತ್ತು ತಮ್ಮತಮ್ಮಲ್ಲೇ ವಡದಾಡಿ ಸಾಯ್ತವೇ ವರತೂ ಇನ್ನಬ್ಬರ ಮ್ಯಾಲೆ ಹೋಗಿ ಬೀಳದಿಲ್ಲ, ಅದ್ಕೆ ಮದ್ಲಿಂದ ದಳ, ದಳದೋರ ಮ್ಯಾಲೇ ಬೀಳ್ತ ಂದದೆ. ಪರೆಗ್‌ಚಾಂಪಲ್ಲು ತುಂಬ ಉದ್ದಾ ಅದೆ."

"ಇವ್ರುರದಿರ್ಲಿ, ಬೀಜೇಪಿಗಳದೇರ್ಲಾ?" ಎಂದ ಕಾಳಮಾವ.

"ಅವ್ರುರದೇನೂ ಹೇಳಂಗಿಲ್ಲ ದ್ವಡಪ್ಪ, ದಳದೋರಿಗೆ ಅಧಿಕಾರ ಕಳಕಂಡು ಲಿಕೆಟ್ಟೊಗ್ಯದೆ. ಬಿಜೆಪಿಗಳಿಗೆ ಅಧಿಕಾರ ಸಿಕ್ಕಿ ತಲಿಕೊಟ್ಟೊಗ್ಯದೆ. ಇದ್ದಿದ್ರಲ್ಲಿ ಾಂಗ್ರೆಸ್ಸಿನೋರೆ ನೆಮ್ಮದಿಯಾಗಿರೋರು. ಈ ಭೂಮಿ ಮ್ಯಾಲೆ ಯಾರಾರ ೆಮ್ಮದಿಯಾಗಿದ್ರೆ, ಅವ್ರುರು ಕಾಂಗ್ರೆಸ್ಸಿನೋರು ಅನ್ನಂಗಾಗ್ಯದೆ ದ್ವಡಪ್ಪ."

" !?" ■

ತನ್ನ ಏಳ್ಗೆಗಾಗಿ ಎಲ್ಲರನ್ನೂ ಬಳಸಿಕೊಂಡ. ನಾನು 2004 ರಲ್ಲಿ ಶಾಸಕ ಾಗಲಿಲ್ಲ, ವಿಧಾನ ಪರಿಷತ್‌ಗೆ ನಾಮಕರಣ ಮಾಡಿಸಿ ಅಂತ ಗೌಡನ್ನ ೇಳಿಕೊಂಡೆ. ಅವನೇನು ಅಂದ ಗೊತ್ತ? ಚುನಾವಣೆಯಲ್ಲಿ ಸೋತವರಿಗೆ ಪರಿಷತ್ತಿನಲ್ಲಿ ಜಾಗ ಇಲ್ಲ ಅಂದ (ಭಾಜಪಗೆ ಹಾರಿದ ಕಾರಣ ತಿಳೀತು ಬಿಡಿ ಾಡರೆ!)"

ಹೀಗೇ ಅವರ ವಾಗ್ಝರಿ ಮುಂದುವರೆಯುತ್ತಾ ಹೋಯಿತು. ಅಲ್ಲ ಯಾವಾಗಲೂ ಇಲ್ಲದ್ದು ಇವಾಗ ಯಾಕೆ ಬಂತು ಇವೆಲ್ಲ ಅಂದರೆ... ಹದಿನೇಳನೇ ಬರೀಖು ಜಾತ್ಯತೀತ ಜನತಾದಳದ ಅಧಿಕೃತ ಅಧ್ಯಕ್ಷನಾಗಿ ಕುಮಾರಸ್ವಾಮಿ ಅಧಿಕಾರ ಸ್ವೀಕರಿಸುತ್ತಿದ್ದರು. ಈ ಸಮಾರಂಭಕ್ಕೆ ಲಕ್ಷಾಂತರ ಜನರು ಬರಬಹುದೆಂಬ ಿಚಿತ ಮಾಹಿತಿ ದೊರಕಿತ್ತು. ಭಾಜಪದ ಒಕ್ಕಲಿಗ ನಾಯಕರಾಗಿ ಇದಕ್ಕೆ ಅಡಚಣೆ ಉಂಟು ಮಾಡುವ ಕಿರುಪ್ರಯತ್ನ ಮಾಡಬೇಕೆಂಬ ಅಪೇಕ್ಷೆ ಅವರದ್ದಾಗಿತ್ತು! ಘನತೆ ಗೌರವ ಮೀರಿದ ಅನಾಗರಿಕ ವರ್ತನೆ ಪ್ರದರ್ಶಿಸಿದರು! ಅವರ ಮಾತುಗಳಿಗೆ ಸಿ.ಟಿ. ರವಿ ಎಂಬ ಎಳಸು, ಅಶೋಕ ಎಂಬ ಶೋಕಿಮಂತ್ರಿ ಸಾಕ್ಷಿಯಾಗಿದ್ದರು.

ಇದೆಲ್ಲ ಸರಿ ಗೌಡರೆ. ಇದರಿಂದ ಮಾನ ಹರಾಜಾದದ್ದು ಯಾರದ್ದು?

ದೇವೇಗೌಡರದ್ದ?

ಕುಮಾರಸ್ವಾಮಿಯದ್ದ?

ನಿಮ್ಮದ ಅಥವಾ

ಒಕ್ಕಲಿಗ ಜನಾಂಗದ್ದ?

ಯಾರೂ ಅನ್ನಲ್ವೆ!

ಶೋಭಾ ಕರಂದ್ಲಾಜೆಗೆ ಬಲೇ ಖೇದ ಅನ್ನಿಸಿತ್ತು.

ಯಡ್ಯೂರಪ್ಪನವರು ಎಂತಹ ಮುಖ್ಯಮಂತ್ರಿ! ತನ್ನ ಕಂಡರೆ ಎಷ್ಟೊಂದು ೀತಿ, ಅನ್ಯೋನ್ಯತೆ!

ಆದರೆ ಒಕ್ಕಲಿಗರಿಗೆ ಅವರಲ್ಲಿ ನಂಬಿಕೆಯಿಲ್ಲ!

'ಲಿಂಗಾಯತರ ಸರ್ಕಾರ ಇದು' ಅವರ ದೂರು.

ಗೌಡಗಿತ್ತಿಯಾಗಿ ತಾನು ಅಳಿಲು ಸೇವೆ ಮಾಡಬಾರದೆ?


ಮಾಧ್ಯಮದಲ್ಲಿರುವ ಕೆಲವು ಒಕ್ಕಲಿಗರನ್ನು ಕರೆಸಿದರು. ಮುಖ್ಯಮಂತ್ರಿಯವರ ಬಗೆಗೆ ಒಳ್ಳೆಯ ಅಭಿಪ್ರಾಯ ಬರುವಂತೆ ಚಿತ್ರಿಸುವಂತೆ ತಾಕೀತು ಮಾಡಿದರು. ವು, ರಾಮಚಂದ್ರಗೌಡರು, ಅಶೋಕ, ಬಚ್ಚೇಗೌಡರು ಎಲ್ಲ ಮಂತ್ರಿ ಮಂಡಲದಲ್ಲಿರುವುದನ್ನು ಗಮನಕ್ಕೆ ತಂದರು.

ಅವರೆಲ್ಲ ಇದಾರೆ ನಿಜ.

ಆದರೆ...

ಇವನ್ನ ಯಾರೂ ಒಕ್ಕಲಿಗರು ಅನ್ನೋಲ್ವೆ!! ■

ಮಾರ್ಕಂಡೇಗೌಡರು



ಈ ಸಲ ಹೇಳಬೇಕಾದ ತುಂಬ ದುಃಖದ, ತುಂಬ ಸಂತೋಷದ ಎರಡು ಸುದ್ದಿಗಳಿವೆ. ಮೊನ್ನೆ ನಾನು ತುಂಬ ಮೆಚ್ಚುತ್ತಿದ್ದ ವೃದ್ಧ ಮಾರ್ಕಂಡೇಗೌಡರು ತೀರಿಕೊಂಡರು. ಇವರು ನಮ್ಮ ಲೇಖಕ ಮತ್ತು ನನ್ನ ಹಿರಿಯ ಮಗನಂತಹ ಡಾ. ಕೆ.ಎಂ. ಶ್ರೀನಿವಾಸಗೌಡರ ತಂದೆ. ಈ ಕಾರಣಕ್ಕೆ ಮಾತ್ರ ನನಗೆ ದುಃಖವಾಗುತ್ತಿಲ್ಲ, ಮಾರ್ಕಂಡೇಗೌಡರ ತರಹದವರು ದಿನದಿನಕ್ಕೆ ಅಪರೂಪವಾಗುತ್ತಿದ್ದರೆ. ಸರಳತೆ ಮತ್ತು ಶಿಸ್ತು ಇವರ ಮುಖ್ಯ ಗುಣಗಳು. ಸುಮಾರು ಮೂರು ದಶಕಗಳ ಕಾಲ ಇಂಜಿನಿಯರ್ ಮತ್ತು ಇಂಜಿನಿಯರಿಂಗ್ ಅಧ್ಯಾಪಕರಾಗಿದ್ದ ಮಾರ್ಕಂಡೇಗೌಡರು ತಮ್ಮ ವರಮಾನ ಮತ್ತು ಖರ್ಚಿನ ಪೂರ್ಣ ಲೆಕ್ಕ ಇಟ್ಟಿದ್ದರು; ಎಂದೂ ಸಾರ್ವಜನಿಕ ಹಣಕ್ಕೆ ಕೈಹಾಕಲಿಲ್ಲ.

ಇಬ್ಬರು ಹೆಣ್ಣುಮಕ್ಕಳು (ಇವರು ಅವಳಿಜವಳಿ) ಮತ್ತು ಮೂವರು ಗಂಡುಮಕ್ಕಳ ತುಂಬು ಕುಟುಂಬವನ್ನು ನೋಡಿಕೊಂಡರು; ಮಕ್ಕಳಿಗೆ ಕೊಡಬೇಕಾದ ಸ್ವಾತಂತ್ರ್ಯ, ಶಿಸ್ತು ಅವರಿಗೆ ಪೂರ್ತಿಯಾಗಿ ಗೊತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಮಾರ್ಕಂಡೇಗೌಡರು ನಮ್ಮಲ್ಲಿನ ಅನೇಕರಿಗಿಂತ ಸಾಮಾಜಿಕ ಹೊಣೆ ಅರಿತವರಾಗಿದ್ದರು.

ಎಂದೂ ಚುನಾವಣೆ, ಅಧಿಕಾರದ ಕಡೆ ಗಮನ ಕೊಡದಿದ್ದ ಈ ವ್ಯಕ್ತಿ ತಮ್ಮ ಜಯನಗರದಲ್ಲಿ ಏನೇ ಅನ್ಯಾಯವಾಗಲಿ, ಅಧಿಕಾರಿಗಳ ನಿರ್ಲಕ್ಷ್ಯ, ದುಷ್ಟತನ ಕಂಡುಬರಲಿ-ಸಿಡಿದೆದ್ದು ಪ್ರತಿಭಟಿಸಿ, ವಾಚಕರವಾಣಿ ಮೂಲಕ ರಿಪೇರಿ ಮಾಡುತ್ತಿದ್ದರು. ತಮ್ಮ ಐವರು ಮಕ್ಕಳಲ್ಲಿ ಯಾರೊಂದಿಗೂ ವಾಸಿಸದೆ ತಾವೇ ಕಟ್ಟಿಸಿದ ಮನೆಯಲ್ಲಿ ತಮ್ಮ ಪತ್ನಿಯೊಂದಿಗೆ ವಾಸಿಸುತ್ತ ಯಾರ ಹಂಗಿಗೂ ಒಳಗಾಗದೆ ಇದ್ದ ಮಾರ್ಕಂಡೇಗೌಡರು ಶುಕ್ರವಾರ ಗೆಲುವಿನಿಂದ ಓಡಾಡುತ್ತಿದ್ದವರು, ಮಾತಾಡುತ್ತಿದ್ದವರು ತಣ್ಣಗೆ ಒರಗಿ ಪ್ರಾಣಬಿಟ್ಟರು. ಆಧುನಿಕ ಔಷಧಿಗಳ ನೆರವಿನಿಂದ ಮುಪ್ಪಾಗಿ ಕೊಳೆತು ಹೋಗುವ ನರಕದಿಂದ ತಪ್ಪಿಸಿಕೊಂಡು ಹೊರಟುಹೋದರು.

ಛಾಯಾ ಮಗುವಿಗೆ ಹೆಸರು



ಮಾರ್ಕಂಡೇಗೌಡರ ಕೊನೆಯ ದರ್ಶನ ಪಡೆದು ಕಚೇರಿಗೆ ಬಂದಾಗ ಒಂದು ಫೋನ್ ಕರೆ ಬಂತು. ಅದು ಪದ್ಮಪಾಣಿಯದು. ಈತ ಬಿ.ಆರ್. ಛಾಯಾ ಗಂಡ. ಛಾಯಾ ಎರಡು ತಿಂಗಳ ಹಿಂದೆ ನಮ್ಮ ಕಚೇರಿಗೆ ಬಂದಿದ್ದಳು. ಪುಟ್ಟ, ಸುಟಿಯಾದ, ತಮಾಷೆಯ ಹುಡುಗಿ; ಗರ್ಭಿಣಿಯಾಗಿದ್ದಳು. ಮೊದಲ ಸಲ ಮೈಯಿಳಿದು ನೊಂದುಕೊಂಡಿದ್ದವಳಿಗೆ, "ಈ ಸಲ ಹುಷಾರಾಗಿರಬೇಕು- ತುಂಬ ದುರ್ಬಲ ಹುಡುಗಿ ನೀನು" ಅಂದಿದ್ದೆ.

ಈಕೆಯ ಗಂಡ ಪದ್ಮಪಾಣಿ ಫೋನ್ ಮಾಡಿ, "ಮಗು ಆಯಿತು ಸಾರ್- ಹೆಣ್ಣು ಮಗು. ತುಂಬ ಚೆನ್ನಾಗಿದೆ-ಎಂಟು ಪೌಂಡ್ ತೂಕವಿದೆ. ಒಳ್ಳೆಯ ಹೆಸರಿಡಬೇಕೆಂದು ಮಾಡಿದ್ದೇವೆ-ನೀವು ಒಂದು ಒಳ್ಳೆಯ ಹೆಸರು ಸೂಚಿಸಿದರೆ ನಮಗೆ ಸಂತೋಷವಾಗುತ್ತದೆ" ಅಂದರು. ನಾನು ನಕ್ಕು, "ನನ್ನ ಹೆಸರು, ನನ್ನ ಮಕ್ಕಳ ಸರಳ ಗೌರಿ, ಕವಿತ ನೋಡಿಯೂ ನನ್ನನ್ನು ಕೇಳ್ತೀರಲ್ಲ, ನೋಡ್ತೇನೆ ಇರಿ. ನಾಳೆ ಫೋನ್ ಮಾಡ್ತೇನೆ" ಅಂದೆ.

ನಾನು, ಡಿ.ಆರ್. ನಾಗರಾಜ್ ಕೂತು ಯೋಚಿಸಿದೆವು. ನಾಗರಾಜ್ "ಗೌತಮ ಬುದ್ಧನ ಇನ್ನೊಂದು ಹೆಸರು ಮಂಜುಶ್ರೀ.... ತುಂಬ ಚೆನ್ನಾಗಿದೆ ಅಲ್ಲವೆ?" ಅಂದ. ಅದು ಹೆಣ್ಣುಮಕ್ಕಳಿಗೂ ಸರಿಹೋಗುವಂತಿತ್ತು, ಛಾಯಾ ಹಾಡುವ ಹುಡುಗಿಯಾದ್ದರಿಂದ ಆಕೆಯ ಮಗಳಿಗೆ ಸಂಗೀತಕ್ಕೆ ಸಂಬಂಧಿಸಿದ ಹೆಸರು ಚೆನ್ನಾಗಿರುತ್ತದಲ್ಲವೆ? ಪಲ್ಲವಿ, ಇಂಪು, ಗೀತ, ಕವಿತಾ... ಎಂದು ಯೋಚಿಸಿದೆವು-ಕೊನೆಗೆ ಪದ್ಮಪಾಣಿಗೆ ಹೇಳುವಾಗ, "ನನಗೆ ನಮ್ಮ ಹಳೆಯ **solid** ಹೆಸರುಗಳೇ ಚೆಂದ. ಸರಸ್ವತಿ, ಪಾರ್ವತಿ, ಪ್ರಿಯದರ್ಶಿನಿ, ಚಿತ್ರಾಂಗದಾ, ಪ್ರಿಯಂವದೆ... ಯಾವುದಾದರೂ ಇಡಿ, ಪರವಾಗಿಲ್ಲ, ನಾವು ಸೂಚಿಸಿದ ಹೆಸರನ್ನು ಇಡಲೇಬೇಕೆಂಬ ಕಡ್ಡಾಯವಿಲ್ಲ, ನೆನಪಿಡಿ!" ಅಂದೆ.


ಪದ್ಮಪಾಣಿ, "ನನಗೂ ಹಳೆಯ ಸುಂದರ ಹೆಸರುಗಳೇ ಇಷ್ಟ ಸಾರ್-ಛಾಯಾ ಹಾಸ್ಪಿಟಲ್‌ನಿಂದ ಬಂದೊಡನೆ ತೀರ್ಮಾನಿಸ್ತೇವೆ!" ಅಂದರು.



"ಕಿಸ್ಸಿಂಜರ್!"

ಈ ಸಲದ ಟಿಪ್ಪಣಿ ನಮ್ಮ ಕವಿ ಸಿದ್ದಲಿಂಗಯ್ಯನವರ ಜೋಕ್‌ನಿಂದ ಮುಗಿಸುತ್ತೇನೆ. ಈತ ಹರಟೆಮಲ್ಲ, ಅತ್ಯಂತ ಆಪ್ತ ಮನುಷ್ಯ. ಹರಟೆಯ ಮಧ್ಯೆ ಯಾರೋ ಮುತ್ತು, ಕಿಸ್, ಚುಂಬನದ ಬಗ್ಗೆ ಮಾತನಾಡುತ್ತಿದ್ದರು. ಸಿದ್ದಲಿಂಗಯ್ಯ ಹೇಳಿದರು "ಬರೀ ಕಿಸ್ ಆತನಿಗೆ ಇಷ್ಟವೆ? ಹಾಗಾದರೆ ಆತ ಕಿಸ್ಸಿಂಜರ್!"

ಪ್ರಾ ಮಾ ಣಿ ಕ ತೆ



ಸುಮ್ಮನಿರಬಾರದ ಸಮಯವಿದು
ಹೇಳಲೇಬೇಕಾದ ಮಾತಿದು
ಒಳಗೆ ನೀನಿರುವೆ

ನಾನು ಮಾತ್ರ ನಾನೆಂದು
ಬಿಂಗಡಿಸಿ ಸುಸ್ತಾದ
ಬೇಸ್ತು ಬಿದ್ದ ಗಳಿಗೆಯಿದು
ಒಳಗೆ ನೀನಿರುವೆ

ಉಸಿರಾಟದ ಛಂದದಲ್ಲಿ
ಉಣ್ಣುವ ಸಹಯೋಗದಲ್ಲಿ
ನಿದ್ದೆಯ ತಿಳಿಗನಸಿನಲ್ಲಿ
ಬೆರೆತಿರುವ ಸ್ಥಾಯಿಯಿದು
ಒಳಗೆ ನೀನಿರುವೆ

ಪ್ರಶಾಂತ ಏಕಾಂತದಲ್ಲಿ
ಮನಸಿನಲೆಗೆ ಕಲ್ಲು ಬಿಸುಟಂತಾಗಿ
ಕಣ್ಣೀರು ಧುಮ್ಮಿಕ್ಕಿ

ಒಂಟಿತನ ಮುತ್ತಿದಾಗಲೇ ಅರಿವಾಗಿದ್ದು
ಒಳಗೆ ನೀನಿರುವೆ

ನನ್ನಿರುವಿಕೆಯೇ
ನಿನ್ನೊಳಗೆ ಲೀನ
ನೀನೆಂದರೆ ನನ್ನ ಬೆಳಕ ತ್ರಾಣ
ಸಾವಿನಂಚಿಗೆ ಹೋಗಿ
ಮತ್ತೆ ಮರಳುವ ಅರಳುವ
ಈ ವಿಚಿತ್ರ ಸಂಕಟ ಸಮಯ
ಕಲಿತ ಮರೆಯಲಾಗದ ಪಾಠವಿದು
ಒಳಗೇ ನೀನಿರುವೆ

ಇಲ್ಲದಿದ್ದರೆ
ನಾನು ಹೇಗೆ ತಾನೇ ಇರುತ್ತಿದ್ದೆ?

■ ಜ್ಯೋತಿ ಗುರುಪ್ರಸಾದ್

ಮಹಾಯುದ್ಧ!?

ನಿನ್ನೆ (ಶುಕ್ರವಾರ), ಸುವರ್ಣ ವಾಹಿನಿಯ 'ಮಹಾಯುದ್ಧ' ಎಂಬ ಶೀರ್ಷಿಕೆಯ ರೆಕಾರ್ಡಿಂಗ್ ಕಾರ್ಯಕ್ರಮಕ್ಕೆ ನಾವು ಕೆಲವು ಗೆಳೆಯರು ಹೋಗಿದ್ದೆವು. ಒಂದು ವಿಷಯದ ಚರ್ಚೆ, ವಿಚಾರ ವಿನಿಮಯ ಇವುಗಳಿಗೆ ಸಂಬಂಧಿಸಿದಂತೆ ಮಾಧ್ಯಮಗಳು ಜನಸಾಮಾನ್ಯರ ಭಾವಕೋಶವನ್ನು ಅಲುಗಾಡಿಸುವ ಭಯಾನಕ ಹೆಸರುಗಳನ್ನು ಕೊಡುತ್ತವೆ. 'ಬಿಗ್ ಫೈಟ್' 'ಮಹಾ ಸಮರ', 'ಮಹಾಯುದ್ಧ', 'ರಣಕಹಳೆ' 'ಚಕ್ರವ್ಯೂಹ' – ಹೀಗೆ. ಈ ಹೆಸರುಗಳೇ ಒಂದು ರೀತಿಯ ಜಗಳಗಂಟತನ, ಮಾರಾಮಾರಿಯ ಚಿತ್ರಣ ನೀಡುತ್ತದೆ. ಯಾವುದೇ ಒಂದು ಗಂಭೀರ ವಿಚಾರಕ್ಕೆ ಸಂಬಂಧಿಸಿದ ತಾರ್ಕಿಕ ಚರ್ಚೆಗೆ ಅವಕಾಶವಾಗದೆ ಒಂದು ಅಬ್ರಪ್ಟ್ ಎಂಡಿಂಗ್‌ನಿಂದ ಕೊನೆಯಾಗುತ್ತವೆ. ಎಡಪಂಥೀಯ ನಾಟಕದೊಂದಿಗೆ ಆರಂಭವಾಗುವ ಇಂಥಾ ಚರ್ಚೆಗಳು ಬಹುಪಾಲು ಸಂದರ್ಭಗಳಲ್ಲಿ ಕೊನೆಗೆ ಬಲಪಂಥೀಯ ಅಬ್ಬರದಲ್ಲಿ ಕೊನೆಯಾಗುತ್ತವೆ.

ಸುವರ್ಣ ಚಾನೆಲ್‌ನ 'ಮಹಾ ಯುದ್ಧ'ದ ವಿಷಯ 'ಮತಾಂತರ'! ಮತಾಂತರ ಎಂಬುದು ವಾಸ್ತವವಾಗಿ ಚರ್ಚೆಯ ವಿಷಯವೇ ಅಲ್ಲ, ಆದರೂ ಅದನ್ನು ಸೆನ್‌ಸೇಷನ್‌ಗೊಳಿಸಲಾಗುತ್ತಿದೆ. ಕಳೆದ ಮೂರ್ನಾಲ್ಕು ತಿಂಗಳಲ್ಲಿ ಹೆಚ್ಚಾಗುತ್ತಿರುವ ಈ ಮತಾಂತರದ ಚರ್ಚೆಗಳನ್ನು ಮಾಧ್ಯಮಗಳಲ್ಲಿ ಗಮನಿಸುತ್ತಾ ಬಂದವರಿಗೆ ಒಂದು ವಿಷಯ ಗೋಚರಿಸುತ್ತದೆ. ಈ ಚರ್ಚೆಗಳಲ್ಲಿ ಭಾಗವಹಿಸುವ ಹಿಂದೂತ್ವ ಕೋಮುವಾದಿಗಳಿಗೆ ತಾರ್ಕಿಕ ಚರ್ಚೆ ಬೇಕಿರುವುದಿಲ್ಲ; ಗಲಭೆ ಎಬ್ಬಿಸುವುದು, ವಿತಂಡವಾದದಿಂದ ವಾದದ ಧಾಟಿಯನ್ನೇ ಬದಲಾಯಿಸಿಬಿಡುವುದು, ಅಂತಿಮವಾಗಿ ಯುದ್ಧ ಸಾರುವುದು! ಹಿಂಸಾ ವಿಧಾನಗಳೇ ಸಮಸ್ಯೆಗೆ ಪರಿಹಾರ ಎಂಬಂತ ವಾತಾವರಣವನ್ನು ಆ ಸಣ್ಣ ಸ್ಟುಡಿಯೋದಲ್ಲೂ ಕಂಡು ನನಗಂತೂ ಗಾಬರಿಯಾಯಿತು. ಧರ್ಮಗಳು ಕ್ಯಾನ್ಸರ್ ಎಂಬ ವಿಚಾರದೊಂದಿಗೆ ಚರ್ಚೆ ಆರಂಭವಾಯಿತು. ಎಲ್ಲಾ ಧರ್ಮಗಳೂ ಕ್ಯಾನ್ಸರ್ ಥರದವೇ ಎಂಬುದನ್ನು ಬಹುತೇಕ ಎಲ್ಲರೂ ಒಪ್ಪಿಕೊಂಡರು. ಹಾಜರಿದ್ದ ಕ್ರೈಸ್ತ ಧರ್ಮಗುರುವೊಬ್ಬರು ಧರ್ಮ ಫ್ಯಾಸಿಸ್ಟ್ ಶಕ್ತಿಗಳ ಕೈಗೆ ಒಳಪಟ್ಟಾಗ ಅದು ಕ್ಯಾನ್ಸರಸ್ ಆಗಿ ಪರಿವರ್ತನೆಗೊಳ್ಳುತ್ತದೆ ಎಂದರು. ನನಗನ್ನಿಸಿದ್ದು ಭಾರತದ ಸಂದರ್ಭದಲ್ಲಿ ಬೇರೆ ಬೇರೆ ಧರ್ಮಗಳು ಕ್ಯಾನ್ಸರ್‌ನ ಬೇರೆ ಬೇರೆ ಸ್ಟೇಜ್‌ಗಳಲ್ಲಿವೆ ಅಷ್ಟೇ.

ಮತಾಂತರದ ಚರ್ಚೆ ಆರಂಭವಾದಾಗಲೆಲ್ಲಾ ಅದು ಸುತ್ತುವುದು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಸುತ್ತ. ಬಹಳ ತೆಳುವಾದ ತೀವ್ರತೆಯಲ್ಲಿ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡರೂ ಬೇರೆ ಧರ್ಮಗಳಲ್ಲಿನ ತಪ್ಪುಗಳನ್ನು ಈ ವ್ಯವಸ್ಥೆಯ ಸಮರ್ಥನೆಗೆ ಸನಾತನವಾದಿಗಳು ಬಳಸಿಕೊಳ್ಳುತ್ತಾರೆ. 6000 ವರ್ಷಗಳಷ್ಟು ಹಳೆಯದಾದ ಸನಾತನ ಧರ್ಮದ ಸಾಮಾಜಿಕ ಏಣಿಶ್ರೇಣಿಯ ಕ್ರೌರ್ಯಕ್ಕೆ 2000 ವರ್ಷಗಳಷ್ಟು ಹಿಂದಿನ ಕ್ರೈಸ್ತ ಧರ್ಮದಲ್ಲಾದ ಕ್ರೌರ್ಯವನ್ನೂ ಸೇರಿಸಿ ಒಟ್ಟು ಕ್ರೌರ್ಯದ ತೀವ್ರತೆಯನ್ನು ಹೆಚ್ಚಿಸುತ್ತಿದೆ.

ಬ್ರಾಹ್ಮಣವಾದ ಕಡಿಮೆ ಆಗುತ್ತಿದೆ ಎಂಬುದನ್ನು ಬಹಳ ಕಷ್ಟಪಟ್ಟು ಸಾಬೀತುಪಡಿಸಲು ಸನಾತನವಾದಿಗಳು ತಿಣುಕಾಡುತ್ತಿರುವುದು ಮೇಲ್ನೋಟಕ್ಕೇ ಕಾಣಿಸುತ್ತದೆ.

ಶ್ರೇಣೀಕೃತ ಸನಾತನ ಬ್ರಾಹ್ಮಣ ಧರ್ಮವನ್ನು ರಕ್ಷಿಸಲು ಅಲ್ಲಿ ಉಪಸ್ಥಿತರಿದ್ದ 'ಬ್ರಾಹ್ಮಣ'ರೊಬ್ಬರು ಒಂದು ಉದಾಹರಣೆ ಕೊಡುತ್ತಾರೆ. ಅದರ ಸಾರಾಂಶ ಇಷ್ಟು: ಹುಟ್ಟುವಾಗಲೇ ಯಾರೂ ಜಾತಿ ಆರಿಸಿಕೊಂಡು ಹುಟ್ಟುವುದಿಲ್ಲ, 'ನಾನು ಹುಟ್ಟನಿಂದ ಬ್ರಾಹ್ಮಣ' 'ನನ್ನ ಮನೆಯಲ್ಲಿ ಇನ್ನು ನಾಲ್ಕು ಜಾತಿಗಳು ಇವೆ. ನನ್ನ ಸೊಸೆ ಒಂದು ಜಾತಿ, ಮೊಮ್ಮಗಳು ಒಂದು ಜಾತಿ ಎಂದು ಹೇಳುತ್ತಾರೆ. ಇಲ್ಲಿ ಅವರು 'ನಾನು ಹುಟ್ಟನಿಂದ ಬ್ರಾಹ್ಮಣ' ಎಂಬುದನ್ನು ಹೇಳುವಷ್ಟು ಹೆಮ್ಮೆಯಲ್ಲಿ ಅವರ ಮನೆಯಲ್ಲಿರುವ ಇನ್ನು ಮೂರು ಜಾತಿಗಳ ಹೆಸರುಗಳನ್ನು ಹೆಸರಿಸುವುದೇ ಇಲ್ಲ.


ಮತಾಂತರದ ಪರ ಮತ್ತು ವಿರೋಧದ ವಾದಗಳಲ್ಲಿ ಮಹಿಳೆಯ ಉದಾಹರಣೆಯನ್ನು ಅನಗತ್ಯವಾಗಿ ತರುವುದು; ಧರ್ಮವನ್ನು ಓಡಿಹೋದ ಹೆಣ್ಣು ಮಗಳಿಗೆ, ನಡತೆಗೆಟ್ಟ ಹೆಣ್ಣುಮಗಳು, ಗಂಡನೊಂದಿಗೆ ವಿಚಾರ ಭೇದ ಇರುವ ಹೆಂಡತಿಗೆ ಹೋಲಿಸುವುದು – ಇದಂತೂ ಬಹಳ ಅಪಾಯಕಾರಿ ಬೆಳವಣಿಗೆ. ಲಿಂಗದ ಪರಿಕಲ್ಪನೆ ವಿಕಾಸಗೊಳ್ಳುತ್ತಾ ಸ್ತ್ರೀ, ಪುರುಷ ಎಂಬುದರ ಜೊತೆಗೆ ಥರ್ಡ್ ಜೆಂಡರ್ ಪರಿಕಲ್ಪನೆ, ಲೈಂಗಿಕತೆ, ಸಲಿಂಗ ಕಾಮ ಇಂಥ ಹಲವು ವಿಚಾರಗಳು ಮುಕ್ತ ಚರ್ಚೆಗೆ ಒಳಪಡುತ್ತಿರುವುದು ಪುರುಷ ಪ್ರಾಧಾನ್ಯತೆಯನ್ನು ಪ್ರಶ್ನಿಸುವ ಅಂಶಗಳಾಗಿವೆ. ಈ ಅಂಶಗಳು ಸನಾತನವಾದಿ, ಮಹಿಳಾ ವಿರೋಧಿಯಾದ ಧರ್ಮವನ್ನು ಸಮರ್ಥಿಸುವ ಪುರುಷರಿಗೆ ಮುಜುಗರವನ್ನು ಉಂಟುಮಾಡುತ್ತವೆ. ಹಾಗೆ ಧರ್ಮ ಎನ್ನುವುದು 'ಪವರ್ ಸೆಂಟರ್'ಗಳಾಗಿರುವ / ಗುತ್ತಿರುವ ಸಂದರ್ಭದಲ್ಲಿ ಮೇಲಿನ ಅಂಶಗಳು ದಾಂಗುಡಿಯಿಟ್ಟು ಪುರುಷಾಧಿಪತ್ಯದ ಬುಡಕ್ಕೆ ಕೊಡಲಿ ಪೆಟ್ಟು ಬೀಳುವ ಆತಂಕದಲ್ಲಿರುವ ಪುರುಷರು ಹೆಣ್ಣುಮಕ್ಕಳ ಉದಾಹರಣೆಗಳು ಎಗ್ಗುತಗ್ಗಿಲ್ಲದೆ ಬಳಸಿಬಿಡುತ್ತಾರೆ. ಜಾತಿ ಹೆಸರಿಡಿದು ನಿಂದಿಸುವುದು ಅಪರಾಧವಾದಂತೆ ನಿಂದನೆಗಾಗಿ 'ಹೆಣ್ಣಿ'ನ ಉದಾಹರಣೆ ತರುವುದು ಅಪರಾಧ ಎನ್ನುವಂತಾಗಬೇಕು.

ಪ್ರಗತಿಪರತೆಯ ಹೆಸರಿನಲ್ಲಿ ಕ್ರೈಸ್ತ ಧರ್ಮದಷ್ಟು ಕವಲು ಹೊಡೆದ ಧರ್ಮ ಮತ್ತೊಂದಿಲ್ಲ, ಕ್ರಿಸ್ತನ ಬೋಧನೆ, ತತ್ವ ಮತ್ತು ವಿಚಾರಗಳಿಗೇ ಅಂತಿಮ ನಿಷ್ಠೆಯಾದರೂ ಅನೇಕ ವಿಚಾರಗಳನ್ನು ತನ್ನ ಮಿತಿಯೊಳಗಿನ ಪರಿಕಲ್ಪನೆಗೆ ಇಳಿಸಿ ಸಾವಿರಾರು ಪಂಥಗಳು ಹುಟ್ಟಿಕೊಂಡಿವೆ. ಹೀಗೆ ಹುಟ್ಟಿಕೊಂಡ ಈ ಸಾವಿರಾರು ಪಂಥಗಳು ತನ್ನ ಸಂಖ್ಯೆ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲು ಸದಾ ಪೈಪೋಟಿ ನಡೆಸುತ್ತಾ ಇರುತ್ತವೆ. ನೂರಾರು ಜಾತಿಗಳಿರುವ ಭಾರತದ ಸಂದರ್ಭದಲ್ಲಿ ಇಂಥಾ ಪೈಪೋಟಿಗೆ ಹೆಚ್ಚು ಅವಕಾಶವಿದೆ. ತಂತಮ್ಮ ಪ್ರಗತಿಪರತೆ ಅಥವಾ ಸಂಕುಚಿತತೆಗೆ ಅನುಗುಣವಾಗಿ ಮತಾಂತರಗೊಳ್ಳುತ್ತಿರುವವರು ಮತ್ತು ಮತಾಂತರ ಮಾಡುತ್ತಿರುವವರು ವಿದೇಶಿ ಮಿಷನರಿಗಳಲ್ಲ ಎಂಬುದನ್ನು ಗಮನಿಸಬೇಕು. ಹಿಂದೂ ಮೂಲಭೂತ ವಾದದಷ್ಟೇ ಕ್ರೈಸ್ತ ಮೂಲಭೂತವಾದ ಅಥವಾ ಮುಸ್ಲಿಮ್ ಮೂಲಭೂತವಾದ ಅಪಾಯಕಾರಿ. ಆದರೆ ಭಾರತದ ಸಂದರ್ಭದಲ್ಲಿ ಈ ಎರಡನ್ನು ಬೇರೆ ಬೇರೆ ನೆಲೆಗಟ್ಟನಲ್ಲಿ ನೋಡಬೇಕಾಗುತ್ತದೆ. ಮೇಲಿನ ಕಾರಣಗಳಿಗಾಗಿ ಸನಾತನ ಹಿಂದೂ ಧರ್ಮ ಸಂಕಷ್ಟದಲ್ಲಿರುವ ಈ ಸಂದರ್ಭದಲ್ಲಿ 'ಹಿಂದೂತ್ವ'ದ ಮೂಲಭೂತವಾದ ಶ್ರೇಣೀಕೃತ ಸಮಾಜವನ್ನು ಕಾಪಾಡಿಕೊಳ್ಳುವ ಕಾರಣಕ್ಕಾಗಿ ಹುಟ್ಟಿಕೊಂಡಿದೆ. ಆದರೆ ಈ ಸನಾತನ ಧರ್ಮದ ಹಿಡಿತದಲ್ಲಿ ಸಾವಿರಾರು ವರ್ಷಗಳ ಕಾಲ ಶೋಷಣೆಗೆ ಒಳಪಟ್ಟ ಸಾವಿರಾರು ದಲಿತರು ಸಮಾನತೆ ಅರಸಿ ಮತಾಂತರಗೊಳ್ಳುತ್ತಿದ್ದಾರೆ.

ಹಾಗೆ ಮತಾಂತರಗೊಂಡ ಕ್ರೈಸ್ತರು ಕ್ರೈಸ್ತರಾದ ಕಾರಣಕ್ಕೆ ತಾವು ಶ್ರೇಷ್ಠರು ಎಂದು ಭಾವಿಸುವುದಿದೆ. ಈ ಭಾವನೆಯಿಂದ ಬೈಬಲ್‌ನ ಅನೇಕವಾಕ್ಯಗಳನ್ನು ಉದ್ಧರಿಸಿ, 'ಪಾಪಿಗಳಿಗೆ ನಿತ್ಯ ನರಕವು ದೊರೆಯುತ್ತದೆ' ಎಂದು ಹೇಳುವಾಗ ಅವರ ಮೂಲಭೂತವಾದವು ಅತಿಯಾಯಿತು ಎನಿಸುವುದು ಸಹಜವೇ. ಕ್ರಿಸ್ತ ಪಾಪಿ ಎಂಬ ಪದವನ್ನು ಬಳಸಿದ ಹಿನ್ನೆಲೆ ಮತ್ತು ಸಂದರ್ಭವನ್ನು ಇಲ್ಲಿ ಅರ್ಥಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. "ಈ ಮನುಷ್ಯ ಪಾಪಿಗಳನ್ನು ಬರಮಾಡಿಕೊಳ್ಳುತ್ತಾನೆ, ಅವರೊಡನೆ ಊಟ ಮಾಡುತ್ತಾನೆ" ಎಂದೇ ಫರಿಸಾಯರು ಮತ್ತು ಧರ್ಮಶಾಸ್ತ್ರಿಗಳು ಆರೋಪಿಸುತ್ತಿದ್ದರು (ಲೂಕ 15:2). ಸುಂಕದವರು, ಕುಷ್ಠರೋಗಿಗಳು, ವೇಶ್ಯೆಯರು, ಬಡವರು ಶ್ರೀಮಂತ ಯೆಹೂದಿಗಳ ದೃಷ್ಟಿಯಲ್ಲಿ 'ಪಾಪಿ'ಗಳಾಗಿದ್ದರು. ದೇವರ ಕೃಪೆ ಇದ್ದವರು ಸಮೃದ್ಧರು, ಇಲ್ಲದವರು ಪಾಪಿಗಳು ಎಂಬುದು ಅವರ ಕಲ್ಪನೆಯಾಗಿತ್ತು, ಕ್ರಿಸ್ತ ಈ ಕಲ್ಪನೆಯನ್ನೇ ಬುಡಮೇಲು ಮಾಡಿ ಶೋಷಕರನ್ನು, ಫರಿಸಾಯರನ್ನು 'ಪಾಪಿ'ಗಳು ಎಂದು ಕರೆದ. ಯೆಹೂದಿಗಳ ದೃಷ್ಟಿಯಲ್ಲಿ ಪಾಪಿಗಳು ಎನಿಸಿಕೊಂಡವರನ್ನು ಮುಖ್ಯವಾಹಿನಿಗೆ ಸೇರಿಸುವ ಪ್ರಯತ್ನಕ್ಕೆ ಕೈ ಹಾಕಿದ. ಆಗಿನ ಸಂದರ್ಭದಲ್ಲಿ ಕ್ರಿಸ್ತ ಹೇಳಿದ ಈ ಮಾತುಗಳನ್ನು ಕ್ರೈಸ್ತರಾಗಿ ಮತಾಂತರಗೊಂಡ ಕ್ರೈಸ್ತರು ತಮ್ಮ ಇರುವಿಕೆಯನ್ನು, ಶ್ರೇಷ್ಠತೆಯನ್ನು ಪ್ರತಿಪಾದಿಸಿಕೊಳ್ಳಲು ಬಳಸಿಕೊಳ್ಳುತ್ತಿದ್ದಾರೆ. ಹಿಂದೂ ಧರ್ಮದ ಒಳಗೇ ಇದ್ದು 'ನೀವು ಪಾಪಿಗಳು ನಮ್ಮನ್ನು ಇಷ್ಟು ವರ್ಷಗಳ ಕಾಲ ಶೋಷಿಸಿದಿರಿ' ಎಂದು ಕೂಗಿ ಹೇಳಲಾಗದ ಮಾನಸಿಕ ಆಕ್ರೋಶಕ್ಕೆ ಆ ಧರ್ಮದಿಂದ ಹೊರಬಂದು ಬೈಬಲ್ ಮತ್ತದರ ದೇವರ ಆಶ್ರಯ ಪಡೆದುಕೊಳ್ಳುತ್ತಿದ್ದಾರೆ ಎನಿಸುತ್ತದೆ.

ಸನಾತನ ಹಿಂದೂ ಧರ್ಮದಲ್ಲಿರುವ ಜಾತಿ ವ್ಯವಸ್ಥೆಯ ಲೋಪವನ್ನು ತರ್ಕಕ್ಕೆ ಬಳಸಿಕೊಳ್ಳುವಾಗ ಅಲ್ಲಿದ್ದ ಒಬ್ಬರು, 'ಯಾವಾಗಲೋ ಆಗಿದ್ದು ನಿಮ್ಮ ತಾತ ಮುತ್ತಾತರ ಕಾಲದಲ್ಲಿ ಇದ್ದ ಹಾಗೆ ಈಗಲೂ ಇದೆ ಅನ್ನೋ ಥರ ಮಾತಾಡ್ತೀರಲ್ರೀ' ಎಂದು ದಬಾಯಿಸಿದರು. ಹಾಗಾದರೆ ಕ್ರೈಸ್ತ ಧರ್ಮದ ಇತಿಹಾಸದ ಲೋಪಗಳನ್ನು ಇವರು ತರ್ಕಕ್ಕೆ ಬಳಸಿಕೊಳ್ಳುತ್ತಿಲ್ಲವೇ? ಎಂಬ ಪ್ರಶ್ನೆಗೆ ಏನು ಉತ್ತರ? ಹಾಗಂತ ಸನಾತನ ಧರ್ಮದ ಜಾತಿ ವ್ಯವಸ್ಥೆ ನಿರ್ಮೂಲಗೊಂಡಿದೆ ಎಂಬುದನ್ನು ಯಾರೂ ಒಪ್ಪುವುದಿಲ್ಲ.

ಕ್ರೈಸ್ತರಾಗಿ ಮತಾಂತರಗೊಳ್ಳುತ್ತಿರುವವರು ಇದೇ ದೇಶದ ಜನ, ನಮ್ಮ ಅಣ್ಣತಮ್ಮಗಳೇ, ಅವರೇನು ಹೊರಗಿನವರಲ್ಲ ಎಂಬ ವಾದವನ್ನು ಸನಾತನವಾದಿಗಳು ಒಪ್ಪಲು ಸಿದ್ದವೇ ಇಲ್ಲ. ಈ ವಾದವನ್ನು ಒಪ್ಪಿಕೊಂಡುಬಿಟ್ಟರೆ ಅವರನ್ನು ಒಳಗೊಳ್ಳಬೇಕಾದ ಅನಿವಾರ್ಯತೆಯ ಭೀತಿ ಅವರನ್ನು ಕಾಡಿದಂತೆ ಇದೆ. 'ಮಾನವೀಯ ಮತ್ತು ನೈತಿಕ ಮೌಲ್ಯಗಳೇ ಪ್ರಧಾನವಾಗಿದ್ದವರೆಗೆ ಅವು ಧರ್ಮಗಳಾಗಿದ್ದವು. ಫ್ಯಾಸಿಸ್ಟ್‌ಗಳ ಕೈಗಳಲ್ಲಿ ಧರ್ಮ ಸಿಕ್ಕು ಇಂದು ಅಧರ್ಮವಾಗಿದೆ. ನಮಗೆ ಬೈಬಲ್ ಎಷ್ಟು ಗೊತ್ತಿತ್ತೋ ಅಷ್ಟೇ ರಾಮಾಯಣ, ಮಹಾಭಾರತವೂ ಗೊತ್ತಿತ್ತು. ನನ್ನ ತಾಯಿಯ ಹಣೆಯ ಮೇಲೆ ಕುಂಕುಮ ಇಲ್ಲದಿದ್ದಾಗ ಏನೋ ಕೊರತೆ ಕಾಣಿಸುತ್ತಿತ್ತು, ಆದರೆ ಇವತ್ತು ಕುಂಕುಮ ಕಂಡರೆ ಭಯವಾಗುತ್ತೆ. ನಮ್ಮ ನಮ್ಮ ಧರ್ಮಗಳಲ್ಲಿರುವ ನ್ಯೂನತೆಗಳನ್ನು ಚರ್ಚೆಗಳ ಮೂಲಕ ಬಗೆಹರಿಸಿಕೊಳ್ಳಬಹುದು, ದಾಳಿ ಯಾಕೆ ಬೇಕು' ಎಂಬುದು ಕ್ರೈಸ್ತ ಧರ್ಮಗುರು ಕೇಳಿದ ಮಾತು. ಇದೇ ಬಹುಪಾಲು ಕ್ರೈಸ್ತರು ಆತಂಕದಲ್ಲಿ ಕೇಳುತ್ತಿರುವ ಪ್ರಶ್ನೆಯೂ ಆಗಿದೆ. ದಾಳಿ ಯಾಕೆ ಬೇಕು ಎಂಬ ಮಾತಿಗೆ, 'ಯುದ್ಧ ಇಲ್ಲದೆ ಏನೂ ಮಾಡಕ್ಕಾಗಲ್ಲ' ಎಂಬ ಮಾತುಗಳು ಮುಂದಿನ ದಿನಗಳಲ್ಲಿ ಕ್ರೈಸ್ತರನ್ನು ಒಳಗೊಂಡಂತೆ ಅಲ್ಪಸಂಖ್ಯಾತರಿಗಿರುವ ಭೀತಿಯ ದಿನಗಳನ್ನು ಸೂಚಿಸುತ್ತವೆ. ಸೌಹಾರ್ದ ವಾತಾವರಣದ ನಿರ್ಮಾಣಕ್ಕಾಗಿ ಸದೃಢವಾದ ಸಂಘಟನಾ ಬಲ ರೂಪುಗೊಳ್ಳದ ಹೊರತು ಯಾವುದೇ ಧರ್ಮದಲ್ಲಿನ ಫ್ಯಾಸಿಸ್ಟ್‌ಗಳನ್ನು ಬಗ್ಗುಬಡಿಯಲು ಸಾಧ್ಯವಾಗುವುದಿಲ್ಲ ಎಂಬುದೇ ಪ್ರಗತಿಪರ ಚಿಂತಕರ ಕಾಳಜಿ ಮತ್ತು ಚಿಂತೆ. ■



ಮತಾಂತರದ ಚರ್ಚೆ ಆರಂಭವಾದಾಗಲೆಲ್ಲಾ ಅದು ಸುತ್ತುವುದು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಸುತ್ತ. ಬಹಳ ತೆಳುವಾದ ತೀವ್ರತೆಯಲ್ಲಿ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡರೂ ಬೇರೆ ಧರ್ಮಗಳಲ್ಲಿನ ತಪ್ಪುಗಳನ್ನು ಈ ವ್ಯವಸ್ಥೆಯ ಸಮರ್ಥನೆಗೆ ಸನಾತನವಾದಿಗಳು ಬಳಸಿಕೊಳ್ಳುತ್ತಾರೆ. 6000 ವರ್ಷಗಳಷ್ಟು ಹಳೆಯದಾದ ಸನಾತನ ಧರ್ಮದ ಸಾಮಾಜಿಕ ಏಣಿಶ್ರೇಣಿಯ ಕ್ರೌರ್ಯಕ್ಕೆ 2000 ವರ್ಷಗಳಷ್ಟು ಹಿಂದಿನ ಕ್ರೈಸ್ತ ಧರ್ಮದಲ್ಲಾದ ಕ್ರೌರ್ಯವನ್ನೂ ಸೇರಿಸಿ ಒಟ್ಟು ಕ್ರೌರ್ಯದ ತೀವ್ರತೆಯನ್ನು ಹೆಚ್ಚಿಸುತ್ತಿದೆ.

■ರೀಟಾ ರೀನಿ

ಜಗತ್ತಿಗೆ ಬೆಳಕಾಗಿರುವ ಬುದ್ಧ

ಬೌದ್ಧ ಧರ್ಮಕ್ಕೆ ಮತಾಂತರ ಬೇಡ, ಹಿಂದೂ ಧರ್ಮದಲ್ಲಿಯೇ ಇರಿ ಇಲ್ಲವಾದರೆ ಆರ್ಯ ಸಮಾಜ ಸೇರಿರಿ ಎಂದು ಇತ್ತೀಚೆಗೆ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅವರು ದಲಿತರಿಗೆ ಕರೆ ನೀಡಿದ್ದಾರೆ. ಪೇಜಾವರ ಶ್ರೀಗಳ ಈ ಕರೆ ಅವರು ಬೌದ್ಧ ಧರ್ಮದ ಬಗ್ಗೆ ಎಷ್ಟು ಅಜ್ಞಾನಿಗಳಾಗಿದ್ದಾರೆ ಎಂಬುದರ ಮೇಲೆ ಬೆಳಕು ಚೆಲ್ಲುತ್ತವೆ. ಬುದ್ಧನ ಬಗ್ಗೆ ಜಗದ್ವಿಖ್ಯಾತರು ನುಡಿದಿರುವ ದಿವ್ಯನುಡಿಗಳು ಹೀಗಿವೆ:

"ನಾನು ಬುದ್ಧನ ಅನುಯಾಯಿ. ನನ್ನ ಇಷ್ಟದೇವತೆ ಬುದ್ಧ, ಆತ ಮಂಗಳಕರನು ಆಗಿದ್ದಾನೆ. ಕೇಳಿದ್ದೆಲ್ಲವನ್ನು ಕೊಟ್ಟಿದ್ದಾನೆ. ಈಗಲೂ ಕೊಡುವವನಿದ್ದಾನೆ. ಮುಂದೆಯೂ ಕೊಡುತ್ತಾನೆ. ಬುದ್ಧ ಒಂದೇ ಒಂದು ಶಾಪದ ಮಾತನ್ನು ತನ್ನ ತುಟಿಯಂಚಿನಿಂದ ಹೊರಹಾಕಿಲ್ಲ, ಪ್ರತಿ ಮಾತು ಆತನ ಬಾಯಲ್ಲಿ ಮಂಗಳಕರ. ಅವನಂತಹ ದೇವರಿಲ್ಲ. ಅವನಂತಹ ದೇವತೆಯೂ ಇಲ್ಲ, ಅವನಂತಹ ದೈವವೂ ಇಲ್ಲ, ಸ್ವರ್ಗದಲ್ಲಿ ನರಕದಲ್ಲಿ ಭೂಮಿಯಲ್ಲಿ ಅವನಿಗೆ ಹೋಲಿಕೆಯಾದವರು ಯಾರೂ ಇಲ್ಲ... ಅವನು ಬುದ್ಧನೊಬ್ಬನೆ."

– ಸ್ವಾಮಿ ವಿವೇಕಾನಂದ

ಬುದ್ಧ ಮಾನವನಾಗಿದ್ದರೂ ಸರ್ವಕಾಲಿಕ ಸತ್ಯದಿಂದ ಕೂಡಿದ ಸಂದೇಶವನ್ನು ಮನುಕುಲಕ್ಕೆ ನೀಡಿದ. ನಮ್ಮ ಅನೇಕ ಆಧುನಿಕ ವಿಚಾರಗಳು ಆ ಸಂದೇಶದ ಜೊತೆಜೊತೆಗೆ ಸುಲಭವಾಗಿ ಹೊಂದಿಕೊಂಡು ಹೋಗುತ್ತವೆ. ಸೇವಾ ಮನೋಭಾವದಲ್ಲಿ ವ್ಯಕ್ತಿಯ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಬುದ್ಧ ಏಸುಕ್ರಿಸ್ತನಿಗಿಂತ ಹೆಚ್ಚು ಸ್ಪಷ್ಟವಾಗಿ ಕಾಣುತ್ತಾನೆ."

-ಎಚ್.ಜಿ. ವೆಲ್ಸ್

ಒಂದು ಪತ್ರ

"ಜ್ಞಾನದ ವಿಚಾರವಿರಲಿ ಅಥವಾ ಪಾವಿತ್ರ್ಯತೆಯ ವಿಚಾರವಿರಲಿ ಏಸುಕ್ರಿಸ್ತನು, ಚರಿತ್ರೆಯಲ್ಲಿ ಕಾಣುವ ಇತರ ವ್ಯಕ್ತಿಗಳಿಗಿಂತ ತುಂಬಾ ಎತ್ತರದ ಸ್ಥಾನಕ್ಕೇರಿದ್ದಾನೆಂದು ನನಗನಿಸುವುದಿಲ್ಲ, ಆ ವಿಚಾರಗಳಲ್ಲಿ ನಾನು ಬುದ್ಧನನ್ನು ನಮ್ಮ ಕ್ರಿಸ್ತನಿಗಿಂತಲೂ ಎತ್ತರದ ಸ್ಥಾನದಲ್ಲಿಡಲು ಬಯಸುತ್ತೇನೆ."

-ಬರ್ಟ್ರೆಂಡ್ ರಸೇಲ್

"ಬುದ್ಧ ಮನುಕುಲವೆಂಬ ಮರದಲ್ಲಿ ಕೋಟ್ಯಾನುಕೋಟಿ ವರ್ಷಗಳಲ್ಲಿ ಯಾವಾಗಲೊಮ್ಮೆ ಅರಳಿನಿಂತ ಮೊಗ್ಗು. ಆದರೆ ಅದು ವಿಕಾಸಗೊಂಡು ಅರಳಿನಿಂತು ಜ್ಞಾನದ ಸುವಾಸನೆ ಮತ್ತು ಪ್ರೀತಿಯ ಮಧುವನ್ನು ಹನಿಹನಿಯಾಗಿ ಹೊರಚೆಲ್ಲುತ್ತಾ ಹೋಗುತ್ತದೆ."

-ಎಡ್ವಿನ್ ಅರ್ನಾಲ್ಡ್

"ಬುದ್ಧನ ಆಗಮನದಿಂದ ಮನುಕುಲ ತನ್ನ ಇತಿಹಾಸದಲ್ಲಿ ಅತ್ಯುನ್ನತವಾದ ಗೌರವ ಸ್ಥಾನವನ್ನು ಪಡೆದುಕೊಂಡಿದೆ."

-ರವೀಂದ್ರನಾಥ್ ಠಾಗೋರ್

"ಅತ್ಯಂತ ನೋವುಂಡ ದುಃಖ ಪಡುತ್ತಿದ್ದ ಬಡ ಜನರ ಬಾಳಿನಲ್ಲಿ ಬುದ್ಧನ ಧ್ವನಿ ಸಾಂತ್ವನ ತಂದಿತು. ಅದೇ ಧ್ವನಿ ದಾರಿತಪ್ಪಿದ ದುಷ್ಟರನ್ನು ಉತ್ತಮ ಮಾನವರನ್ನಾಗಿ ಪರಿವರ್ತಿಸಿತು. ಧ್ವನಿಯಿಲ್ಲದವರಿಗೆ ಧ್ವನಿ ನೀಡಿತು. ಒಡೆದು ಹಂಚಿ ಹೋಗಿದ್ದವರನ್ನು ಒಂದುಗೂಡಿಸಿತು. ಅಜ್ಞಾನಿಗಳನ್ನು ಜ್ಞಾನ ಮಾರ್ಗಕ್ಕೆ ಕೊಂಡೊಯಿತು. ಕೆಳಸ್ತರದಲ್ಲಿದ್ದವರನ್ನು ಮೇಲ್ಮಟ್ಟಕ್ಕೇರಿಸಿತು."

-ಮ್ಯಾಕ್ಸ್ ಮುಲ್ಲರ್

"ನಾನು ಯಾವುದೇ ಧರ್ಮದ ಅನುಯಾಯಿಯಲ್ಲ, ನನಗೊಂದು ಧರ್ಮ ಬೇಕೆನಿಸಿದರೆ, ನನ್ನ ಧರ್ಮ ಬುದ್ಧ ಧರ್ಮವೇ ಆಗಿರುತ್ತದೆ."

-ಆಲ್ಬರ್ಟ್ ಐನ್‌ಸ್ಟೀನ್

■ಬಾಬುರಾಜೇಂದ್ರ ಭದ್ರಾಪೂರ, ಹುಬ್ಬಳ್ಳಿ

ಕನ್ನಡ ಚಿತ್ರರಂಗಕ್ಕೆ 'ಸನ್ ಸ್ಟ್ರೋಕ್' ಮೇನಿಯಾ!

ಸುಹಾಸಿನಿ ಎಂಬ ಅಮೋಘ ನಟಿಯ ಬಗ್ಗೆ ಯಾವ ಕನ್ನಡ ಚಿತ್ರ ಪ್ರೇಮಿಗೆ, ನಟ, ನಿರ್ದೇಶಕ, ನಿರ್ಮಾಪಕನಿಗೆ ಗೊತ್ತಿಲ್ಲ? ಹಲವಾರು ಕನ್ನಡ ಸಿನಿಮಾಗಳಲ್ಲದೆ ತಮಿಳು, ತೆಲುಗು ಮತ್ತು ಮಲೆಯಾಳಂ ಚಿತ್ರಗಳಲ್ಲೂ ನಟಿಸಿರುವ ಸುಹಾಸಿನಿ ತನ್ನ ನಟನಾ ಸಾಮರ್ಥ್ಯದಿಂದಲೇ ಅಪಾರ ಜನಪ್ರಿಯತೆ ಮತ್ತು ಮೆಚ್ಚುಗೆಯನ್ನು ಗಳಿಸಿರುವ ಪ್ರತಿಭಾವಂತೆ. ಅಂದಹಾಗೆ ಈಕೆ ಖ್ಯಾತ ನಿರ್ದೇಶಕ ಮಣಿರತ್ನಮ್ ಅವರ ಮಡದಿ ಕೂಡ. ಇವರಿಬ್ಬರು ಹಲವಾರು ವರ್ಷಗಳಿಂದ ದಂಪತಿಗಳಾಗಿದ್ದರೂ, ಹಲವಾರು ಸಿನಿಮಾಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ಆತನ ನಿರ್ದೇಶನದಲ್ಲಿ ಆಕೆ ಎಂದಿಗೂ ನಟಿಸಿದವಳಲ್ಲ.

ಆದರೆ ಮೊನ್ನೆ, ಮಣಿರತ್ನಮ್ ತಮ್ಮ ಪತ್ನಿ ಸುಹಾಸಿನಿಗೆ ಫೋನ್ ಮಾಡಿ "ನನ್ನ ಹೊಸ ಚಿತ್ರದಲ್ಲಿ ಒಂದು ಪುಟ್ಟ ಹಾಸ್ಯ ಪಾತ್ರವಿದೆ. ಅದರಲ್ಲಿ ನೀನು ನಟಿಸುತ್ತೀಯಾ?" ಎಂದು ಕೇಳಿದರಂತೆ. "ನನ್ನ ಗಂಡನಿಗೆ ನಾನು ಕಲಾವಿದೆ ಕೂಡ ಎಂಬುದು ಕೊನೆಗೂ ಜ್ಞಾನೋದಯವಾಯಿತಲ್ಲಾ?" ಎಂದು ಪ್ರತಿಕ್ರಿಯಿಸಿರುವ ಸುಹಾಸಿನಿ ಆ ಪಾತ್ರದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ಆ ಮೂಲಕ ತನ್ನ ಗಂಡನ ನಿರ್ದೇಶನದ ಚಿತ್ರದಲ್ಲಿ ಮೊಟ್ಟ ಮೊದಲ ಬಾರಿಗೆ ನಟಿಸಲು ಸಜ್ಜಾಗುತ್ತಿದ್ದಾರೆ.




ಇದನ್ನು ಇಲ್ಲಿ ಪ್ರಸ್ತಾಪಿಸಿದ್ದಕ್ಕೆ ಕಾರಣ ಇದೆ. ಅದೇನೆಂದರೆ ಸದ್ಯಕ್ಕೆ ಕನ್ನಡ ಚಿತ್ರರಂಗಕ್ಕೆ ಬಡಿದಿರುವ 'ಸನ್ ಸ್ಟ್ರೋಕ್' ಎಂಬ ಹೊಸ ರೋಗ ಮತ್ತು 'ಅಮ್ಮಾವ್ರ ಗಂಡ' ಎಂಬ ಹಳೆ ಪೀಡೆಯಿಂದಾಗಿ ಇಲ್ಲಿ ಸಾಕಷ್ಟು ಅವಾಂತರಗಳು ಸೃಷ್ಟಿಯಾಗುತ್ತಿರುವುದು ಮತ್ತು ಅದರೊಂದಿಗೆ ಕೋಟ್ಯಂತರ ರೂಪಾಯಿ ಪೋಲಾಗುತ್ತಿರುವುದು.



ಅದ್ಯಾಕೋ ಇತ್ತೀಚೆಗೆ ಕನ್ನಡದ ಅನೇಕ ನಿರ್ಮಾಪಕರಿಗೆ, ನಿರ್ದೇಶಕರಿಗೆ, ನಟರಿಗೆ ಮತ್ತು ತಂತ್ರಜ್ಞರಿಗೆ 'ಸನ್ ಸ್ಟ್ರೋಕ್' ಎಂಬ ರೋಗ ಬಡಿದು ಅವರೆಲ್ಲ ತಮ್ಮ ಮಕ್ಕಳೇ ನಾಯಕನಟರಾಗಿ ಮೆರೆಯಬೇಕೆಂಬ ಕನಸು ಕಾಡುತ್ತಿರುವಂತಿದೆ. ಆದರೆ ಚಿತ್ರರಂಗವನ್ನು ಅವರೆಲ್ಲರ ಇಂತಹ ಕನಸೇ ದುಸ್ವಪ್ನವಾಗಿ ಕಾಡುತ್ತಿದೆ. ಈ ವರ್ಷ ತೆರೆಕಂಡ 'ಚೈತ್ರದ ಚಂದ್ರಮ' ಮುಗ್ಗರಿಸಲು, 'ಧಿಮಾಕು' ದಿಕ್ಕೆಡಲು, 'ಸಂಗಾತಿ' ಗತಿಗೆಡಲು ಈ 'ಸನ್ ಸ್ಟ್ರೋಕ್'ಕೇ ಮುಖ್ಯ ಕಾರಣ ಎಂದರೆ ತಪ್ಪಾಗಲಾರದು.




ಎಸ್. ನಾರಾಯಣ್ ನಿರ್ದೇಶಿಸಿ-ನಿರ್ಮಿಸಿದ 'ಚೈತ್ರದ ಚಂದ್ರಮ' ಚಿತ್ರವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ನಾರಾಯಣ್ ಅವರ ಪುತ್ರ ಪಂಕಜ್‌ನೇ ಈ ಚಿತ್ರದ ನಾಯಕ. ಶ್ರೀನಗರ ಸೇರಿದಂತೆ ವಿವಿಧ ಕಡೆ ಚಿತ್ರೀಕರಿಸಲಾಗಿದ್ದ ಇದನ್ನು ಅದ್ದೂರಿಯಾಗಿಯೇ ನಾರಾಯಣ್ ರೂಪಿಸಿದ್ದರು. ಅಷ್ಟೇ ಅಲ್ಲ, 'ಚೆಲುವಿನ ಚಿತ್ತಾರ'ದಿಂದ ಸ್ಟಾರ್ ವ್ಯಾಲ್ಯೂ ಪಡೆದಿದ್ದ ಅಮೂಲ್ಯ ಎಂಬ 'ಬಾಲ' ನಟಿಯನ್ನು ಮತ್ತೆ ಚಿತ್ರರಂಗಕ್ಕೆ ಕರೆತರುವಲ್ಲಿ ಯಶಸ್ವಿಯಾಗಿದ್ದರು. ಆದರೇನು ಮಾಡುವುದು? ಚಿತ್ರದ ನಾಯಕ ಪಂಕಜನೇ ಅದರ ದೊಡ್ಡ ಮೈನಸ್ ಪಾಯಿಂಟ್ ಆದ.



ಇಷ್ಟೇ ಹಣ ಮತ್ತು ಶ್ರಮವನ್ನು ಬೇರೊಬ್ಬ ನಟನ ಮೇಲೆ ನಾರಾಯಣ್ ಸುರಿದಿದ್ದರೆ? ಕತೆಯೇ ಬೇರೆಯದ್ದಾಗಿರುತ್ತಿತ್ತು!

'ಸಂಗಾತಿ' ಚಿತ್ರದ ನಿರ್ಮಾಪಕ ಸಿ. ಭೈರೇಗೌಡ. ಬೆಂಗಳೂರಿನ ಆಗರ್ಭ ಶ್ರೀಮಂತರಲ್ಲಿ ಒಬ್ಬರಾದ ಭೈರೇಗೌಡ ಏಕಕಾಲಕ್ಕೆ ನಾಲ್ಕೈದು ಚಿತ್ರಗಳನ್ನು ನಿರ್ಮಿಸುವಷ್ಟು ತಾಕತ್ತು ಹೊಂದಿರುವವರು. ಇವರು ಮೊದಲು ನಿರ್ಮಿಸಿದ ಚಿತ್ರ 'ಅಯ್ಯ'. ಎರಡನೆಯದು 'ಗೋಪಿ'. ಆದರೆ ಮೂರನೇ ಚಿತ್ರ ಮಾಡುವಷ್ಟರಲ್ಲಿ ಅದ್ಯಾವ 'ದೇವ' ತಮ್ಮ ಮಗನನ್ನೇ ನಾಯಕ ನಟನನ್ನಾಗಿ ಮಾಡುವಂತೆ ಅವರನ್ನು ಪ್ರೇರೇಪಿಸಿತೋ ಅವರಿಗೇ ಗೊತ್ತು.




ಕೋಟ್ಯಂತರ ರೂಪಾಯಿ ಸುರಿದು ನ್ಯೂಜಿಲೆಂಡ್ ಮತ್ತು ಬ್ಯಾಂಕಾಕ್‌ನಲ್ಲಿ 'ಸಂಗಾತಿ'ಗಾಗಿ ಹಾಡುಗಳನ್ನು ಚಿತ್ರೀಕರಿಸಿದರು. ಈ ಚಿತ್ರವನ್ನು ಅವರು ಅದೆಷ್ಟು ಅದ್ದೂರಿಯಾಗಿ ನಿರ್ಮಿಸಿದರೆಂದರೆ ಒಂದು ಅಂದಾಜಿನ ಪ್ರಕಾರ ಈ ಚಿತ್ರಕ್ಕೆ ಭೈರೇಗೌಡರು ಬರೋಬ್ಬರಿ ನಾಲ್ಕು ಕೋಟಿ ರೂಪಾಯಿಗಳನ್ನು ಸುರಿದರಂತೆ. ಅದರಿಂದ ಕೊನೆಗೆ ಏನಾಯಿತು? 'ಸಂಗಾತಿ'ಯ ನಾಲ್ಕು ಶೋ ಕೂಡಾ ಹೌಸ್‌ಫುಲ್ ಪ್ರದರ್ಶನವನ್ನು ಕಾಣಲಿಲ್ಲ. ಈ ಶಾಕ್‌ನಿಂದ ಅವರ ಪುತ್ರ ಚೇತನ್ ಇನ್ನೂ ಚೇತರಿಸಿಕೊಂಡಿಲ್ಲವಂತೆ.



ಎಸ್.ನಾರಾಯಣ್ ಮತ್ತು ಭೈರೇಗೌಡರದ್ದು 'ಪ್ರಥಮ ಚುಂಬನಂ ದಂತ ಭಗ್ನಂ' ಎನ್ನಬಹುದು. ಆದರೆ ಹಿರಿಯ ನಿರ್ದೇಶಕ-ನಿರ್ಮಾಪಕ ರಾಜೇಂದ್ರ ಸಿಂಗ್ ಬಾಬುಗೆ ಆ ಮಾತು ಅನ್ವಯಿಸುವುದಿಲ್ಲ ಬಿಡಿ.

ತಮ್ಮ ಮಗ ಆದಿತ್ಯನ ಪ್ರಥಮ ಸಿನಿಮಾ 'ಲವ್'ಗಾಗಿ ಬಾಬು ಸಾಕಷ್ಟು ಹಣ ಖರ್ಚು ಮಾಡಿ ಕೈ ಸುಟ್ಟುಕೊಂಡಿದ್ದರು. ಅದು ಸಾಲದೆಂಬಂತೆ 'ಮೋಹಿನಿ' ಎಂಬ ಮತ್ತೊಂದು ಸಿನಿಮಾವನ್ನು ಆದಿತ್ಯನಿಗಾಗಿ ಮಾಡಿದರು. ಅದರ ಮೇಲೂ ಸಾಕಷ್ಟು ಹಣ ಸುರಿದಿದ್ದರೂ ಅದು ಕೂಡ ಬೊಂಬಾಟ್ ಫ್ಲಾಪ್ ಆಯಿತು. ಆದರೆ ಈ ಎರಡು ಅನುಭವಗಳಿಂದ ಬಾಬು ಬುದ್ಧಿ ಕಲಿತಿರುವಂತಿಲ್ಲ. ಯಾಕೆಂದರೆ ಅವರು ಮತ್ತೆ ಅದೇ ಪುತ್ರ ವಾತ್ಸಲ್ಯಕ್ಕೆ ಬಿದ್ದು ಈಗ 'ರಕ್ಷಾಕ್ಷ' ಎಂಬ ಹೊಸ ಚಿತ್ರಕ್ಕೆ ನಾಂದಿ ಹಾಡಿದ್ದಾರೆ. ಈ ಚಿತ್ರವನ್ನು ಸುಮಾರು ಆರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುದೀರ್ಘ ಎರಡು ವರ್ಷಗಳ ಕಾಲ ಚಿತ್ರೀಕರಿಸುವ ಯೋಜನೆಯನ್ನು ಬಾಬು ಹೊಂದಿದ್ದಾರೆ. 'ರಕ್ಷಾಕ್ಷ' ಚಿತ್ರವನ್ನು ಘೋಷಿಸಿ ಈಗಾಗಲೇ ಆರೇಳು ತಿಂಗಳು ಉರುಳಿವೆ. ಈ ಚಿತ್ರಕ್ಕೆಂದು ಆದಿತ್ಯ ತನ್ನ ಬೆನ್ನಿನ ತನಕ ತಲೆಕೂದಲನ್ನು ಬೆಳೆಸಿದ್ದಾನೆಯೇ ಹೊರತು ಬೇರೆ ಯಾವ ತಯಾರಿಯೂ ನಡೆಸಿರುವಂತೆ ಕಾಣುತ್ತಿಲ್ಲ.



ಈ 'ರಕ್ಷಾಕ್ಷ' ಇನ್ನೆಷ್ಟು ರಕ್ತ ಹರಿಸುತ್ತಾನೋ ಗೊತ್ತಿಲ್ಲ.

ಬಾಬು ತರಹದ ಪ್ರತಿಭಾನ್ವಿತ ನಿರ್ದೇಶಕ ಕೇಳಿದ್ದರೆ ಕನ್ನಡ ಚಿತ್ರರಂಗದ ಯಾವ ನಾಯಕ ನಟ ತನ್ನ ಕಾಲ್‌ಶೀಟ್ ಕೊಡುತ್ತಿರಲಿಲ್ಲ? ಆದರೆ ಪುತ್ರ ವಾತ್ಸಲ್ಯಕ್ಕೆ ಬಿದ್ದಿರುವ ಬಾಬುಗೆ ಬುದ್ಧಿ ಹೇಳುವವರ್‍ಯಾರು?

ಕಳೆದ ಒಂದು ವರ್ಷದಲ್ಲಿ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ನೂರಾರು ರಿಯಲ್ ಎಸ್ಟೇಟ್ ಜನ ಸಿನಿಮಾ ನಿರ್ಮಿಸಿದ್ದು, ಅದಕ್ಕೆಂದು ಕೋಟ್ಯಾಂತರ ರೂಪಾಯಿಗಳನ್ನು ಸುರಿದಿದ್ದು ತಮ್ಮ ಮಕ್ಕಳನ್ನು ಇಲ್ಲವೇ ಬಂಧುಗಳನ್ನು ಬೆಳ್ಳಿ ತೆರೆಯ ಮೇಲೆ ತೋರಿಸಲು ಮಾತ್ರ.

ಉದಾಹರಣೆಗೆ 'ಅಂತೂಇಂತೂ ಪ್ರೀತಿ ಬಂತು' ಎಂಬ ಚಿತ್ರ. ಈ ಚಿತ್ರದ ನಾಯಕ ಆದಿತ್ಯ ಬಾಬುಗಾಗಿ ಆತನ ತಂದೆ ಕೋಟಿ ಕೋಟಿ ಸುರಿದು ಇದನ್ನು ನಿರ್ಮಿಸಿದರು. ಆದರೆ ಪ್ರೇಕ್ಷಕ ಮಾತ್ರ ಥಿಯೇಟರ್ ಕಡೆ ಮೊದಲ ದಿನವೇ ತಿರುಗಿನೋಡಲಿಲ್ಲ.

ಇನ್ನು ಹಿರಿಯ ನಟ ಶ್ರೀನಿವಾಸಮೂರ್ತಿ ಅವರ ಕತೆಯೂ ಇವರೆಲ್ಲರಿಗಿಂತ ಭಿನ್ನವಾಗಿಲ್ಲ. ಅವರು ತಮ್ಮ ಜೀವಮಾನದ ಸಂಪಾದನೆಯನ್ನೆಲ್ಲಾ ಸುರಿದು ತಮ್ಮ ಮುದ್ದಿನ ಮಗ ನವೀನ್ ಕೃಷ್ಣನಿಗಾಗಿ 'ಧಿಮಾಕು' ಎಂಬ ಚಿತ್ರವನ್ನು ಸಾಕಷ್ಟು ಧಿಮಾಕಿನಿಂದಲೇ ನಿರ್ಮಿಸಿದರು. ಅಫ್‌ಕೋರ್ಸ್ ನವೀನ್‌ನಲ್ಲಿ ಅಡಗಿರುವ ಪ್ರತಿಭೆ ಈ ಚಿತ್ರದಲ್ಲಿ ಅನಾವರಣಗೊಂಡಿತು. ಆದರೆ ಆ ಚಿತ್ರಕ್ಕೆಂದು ಶ್ರೀನಿವಾಸಮೂರ್ತಿಯವರು ಸುರಿದ ಹಣ ಮಾತ್ರ ವಾಪಸು ಬರಲಿಲ್ಲ. ಇಪ್ಪೊಂದು ವರ್ಷಗಳನ್ನು ಚಿತ್ರರಂಗದಲ್ಲಿ ಕಳೆದಿರುವ, ಅಪಾರ ಸ್ನೇಹಿತರನ್ನು ಮತ್ತು ಹಿತೈಷಿಗಳನ್ನು ಪಡೆದಿರುವ ಶ್ರೀನಿವಾಸಮೂರ್ತಿ ಅವರು ಒಂದು ಯಶಸ್ವಿ ಚಿತ್ರವನ್ನು ಮಾಡುವ ಮೂಲಕ ಓರ್ವ ಯಶಸ್ವಿ ನಿರ್ಮಾಪಕರಾಗುವ ಹಾದಿಗೆ ಅವರ ಪುತ್ರವಾತ್ಸಲ್ಯವೇ ಅಡ್ಡಿಯಾಯಿತು.

ತಂದೆಗಿಂತ ತಾಯಿ ಕಡಿಮೆಯಲ್ಲ ಎಂಬಂತೆ ಇದೇ ಕ್ಯಾಟಗರಿಗೆ ಸೇರುವವರು ಕನ್ನಡ ಚಿತ್ರರಂಗದ ತಾಯಿ ಲೀಲಾವತಿ. ಅವರು ತಮ್ಮ ಪುತ್ರ ವಿನೋದ್‌ರಾಜ್‌ನನ್ನು ಹೀರೋ ಮಾಡಲು ಪ್ರಯತ್ನಿಸಿದ್ದಷ್ಟು ಯಾರೂ ಮಾಡಿರಲಿಕ್ಕಿಲ್ಲ. ಕೆಲ ವರ್ಷಗಳ ಹಿಂದೆ ಲೀಲಾವತಿಯವರೇ ನಿರ್ಮಿಸಿದ್ದ 'ಕನ್ನಡದ ಕಂದ' ಹಿಟ್ ಆಗಿತ್ತಾದರೂ ಆನಂತರ ಬಂದ 'ಶುಕ್ರ' ಇನ್ನಿಲ್ಲದಂತೆ ತೋಪೆದ್ದಿತು.

ಪುತ್ರ ವಾತ್ಸಲ್ಯ ಗಾಂಧಿನಗರಕ್ಕೆ ಹೊಸದಲ್ಲ. ಈ ಹಿಂದೆ ಸಂಗೀತ ನಿರ್ದೇಶಕ ಹಂಸಲೇಖ ತಮ್ಮ ಜನಪ್ರಿಯತೆಯ ತುತ್ತ ತುದಿಯಲ್ಲಿದ್ದಾಗ ತಮ್ಮ ಮಗ ಅಲಂಕಾರ್‌ನಿಗಾಗಿ 'ಸುಗ್ಗಿ' ಎಂಬ ಚಿತ್ರ ಮಾಡಿ ಗಾಂಧಿನಗರದವರಿಂದ ಅಪಹಾಸ್ಯಕ್ಕೀಡಾಗಿದ್ದರು. ಯಾಕೆಂದರೆ ಆ ಚಿತ್ರ ಅದ್ಯಾವಾಗಲೋ ಸಂಪೂರ್ಣಗೊಂಡಿದ್ದರೂ ಇಂದಿಗೂ ಬಿಡುಗಡೆಯಾಗಿಲ್ಲ.

ಹಾಗೆಯೇ ಹಲವಾರು ನಾಯಕ ನಟರುಗಳನ್ನು ಸೃಷ್ಟಿಸಿ ಬೆಳೆಸಿದ್ದ ನಿರ್ಮಾಪಕ ದ್ವಾರಕೀಶ್ ಒಮ್ಮೆ ತಮ್ಮ ಚಾಣಾಕ್ಷತನವನ್ನೆಲ್ಲ ಮರೆತು ಪುತ್ರ ವ್ಯಾಮೋಹಕ್ಕೆ ತುತ್ತಾಗಿ ತಮ್ಮ ಮೂರುವರೆ ಅಡಿ ಎತ್ತರದ ಇಬ್ಬರು ಪುತ್ರರಿಗಾಗಿ 'ಮಜನು' ಎಂಬ ಚಿತ್ರ ಮಾಡಿದ್ದರು. ಅವರ ಪ್ರೀತಿಯ ಈ ಮಜನುಗಳಿಗೆ ಲೈಲಾಗಳು ಸಿಗುವುದಿರಲಿ, ಆ ಚಿತ್ರದಿಂದ ಆದ ಲಾಸ್‌ನಿಂದಾಗಿ ಚೇತರಿಸಿಕೊಳ್ಳಲು ದ್ವಾರಕೀಶ್ ಅವರಿಗೆ ಹಲವು ದಶಕಗಳೇ ಬೇಕಾದವು.

'ಸನ್ ಸ್ಟ್ರೋಕ್'ಗೆ ಬಲಿಯಾದವರ ಕತೆ ಒಂದಾದರೆ, 'ಅಮ್ಮಾವ್ರ ಗಂಡ'ಂದಿರ ಕತೆ ಮತ್ತೊಂದು. ಯಾಕೆಂದರೆ ಗಂಡನಿಗಾಗಿ ಹೆಂಡತಿ, ಹೆಂಡತಿಗಾಗಿ ಗಂಡ ಚಿತ್ರ ನಿರ್ಮಿಸುವ ಟ್ರೆಂಡ್ ನಮ್ಮಲ್ಲಿ ಮೊದಲಿನಿಂದಲೂ ಬಂದಿದೆ. ಉದಾಹರಣೆಗೆ ಶೃತಿ-ಮಹೇಂದರ್ ಜೋಡಿ. ಕಣ್ಣೀರ ರಾಣಿ ಎಂದೇ ಖ್ಯಾತಿ ಪಡೆದಿದ್ದ ನಟಿ ಶೃತಿ, ಆಕೆ 'ರೀಲ್ ಲೈಫ್'ನಲ್ಲಿ ಕಣ್ಣೀರಿನ ಕೋಡಿ ಹರಿಸುವಂತೆ ಮಾಡಿದ್ದ ನಿರ್ದೇಶಕ ಮಹೇಂದರ್ ಮದುವೆಯಾದ ತಕ್ಷಣ 'ಗಟ್ಟಿ ಮೇಳ' ಎಂಬ ಚಿತ್ರ ಬಂದಿತ್ತು. ಅದರಲ್ಲಿ ಆಕೆಯೇ ನಾಯಕಿ, ಆತನೇ ನಾಯಕ. ಆಕೆ ನಿರ್ಮಾಪಕಿ, ಆತ ನಿರ್ದೇಶಕ. ಕತೆ, ಚಿತ್ರಕತೆ, ಇತ್ಯಾದಿಗಳೆಲ್ಲವೂ ಅವರದ್ದೇ. ನಿಜಜೀವನದಲ್ಲಿ ಅವರ ದಾಂಪತ್ಯ ಜೀವನ ಇವತ್ತಿಗೂ ಗಟ್ಟಿಯಾಗಿದ್ದರೂ ತೆರೆಯ ಮೇಲಿನ ಅವರಿಬ್ಬರ ಮೊದಲ ಹೆಜ್ಜೆಯಾಗಿದ್ದ 'ಗಟ್ಟಿ ಮೇಳ'ವಂತೂ ತೋಪೋತೋಪು!

ಶೃತಿ-ಮಹೇಂದರ್ ಜೋಡಿ ಈ ರೀಲ್ ಲೈಫ್ ಮತ್ತು ರಿಯಲ್ ಲೈಫ್ ಬೆಸುಗೆಯ ಯತ್ನವನ್ನು ಮೊದಲ ಪ್ರಯತ್ನದ ನಂತರ ಕೈಬಿಟ್ಟು ಸುಮ್ಮನಾಗಿದೆ. ಆದರೆ 'ಕೋಟಿ ವೀರ ನಿರ್ಮಾಪಕ' ಎಂಬ ಖ್ಯಾತಿಯ ರಾಮು ಮತ್ತು ಅಂದಕಾಲತ್ತಿಲ್ ಕನ್ನಡ ಚಿತ್ರರಂಗದ ಅಧಿನಾಯಕಿಯಾಗಿದ್ದ ಮಾಲಾಶ್ರೀ ಎಂಬ ದಂಪತಿಗಳು ಇವತ್ತಿಗೂ 'ಬೆಸುಗೆ, ಬೆಸುಗೆ, ಬೆಸುಗೆ, ಬೆಸುಗೆ' ಎಂದು ಹಾಡುವುದನ್ನು ನಿಲ್ಲಿಸಿಲ್ಲ.

ಹಾಗೆ ನೋಡಿದರೆ ನಿರ್ಮಾಪಕ ರಾಮು ಅವರ ಡೌನ್‌ಫಾಲ್ ಆರಂಭವಾದದ್ದೇ ಅವರು ತಮ್ಮ ಪತ್ನಿ ಮಾಲಾಶ್ರೀಗಾಗಿ ಚಿತ್ರ ಮಾಡಲು ಆರಂಭಿಸಿದ ನಂತರ. ಮಾಲಾಶ್ರೀ ಅದೆಷ್ಟೇ ದೇಹ ತೂಕ ಇಳಿಸಿದರೂ (ಚಿತ್ರರಂಗದ ಬೃಹಸ್ಪತಿ ಪ್ರಕಾರ ಆಕೆ ನಾಯಕ ನಟಿ ಎನ್ನಿಸಿಕೊಳ್ಳಲು ಇನ್ನೂ 20 ಕೆ.ಜಿ ಕರಗಿಸಬೇಕಿದೆ) ಚಿತ್ರರಂಗದಲ್ಲಿ ಆಕೆಗೆ ಇವತ್ತು ನೂರು ಗ್ರಾಮ್‌ನಷ್ಟೂ ತೂಕವಿಲ್ಲ. ಆದರೂ ತಮ್ಮ ಪ್ರೀತಿಯ ಹೆಂಡತಿಯನ್ನೇ ಹಾಕಿಕೊಂಡು ಚಿತ್ರ ನಿರ್ಮಿಸುವ ಸಾಹಸವನ್ನು ಮಾತ್ರ ರಾಮು ಬಿಡುತ್ತಿಲ್ಲ ಎಂಬುದೇ ಅಚ್ಚರಿಯ ಸಂಗತಿಯಾಗಿದೆ!

ವಿಪರ್ಯಾಸದ ಸಂಗತಿ ಯಾವುದೆಂದರೆ, ಪುತ್ರವಾತ್ಸಲ್ಯದಿಂದ ಕೈಸುಟ್ಟುಕೊಂಡಿರುವವರು, ಗಂಡನಿಗಾಗಿ ತಮ್ಮ ಹಣವನ್ನೆಲ್ಲ ಸುರಿದಿರುವವರು, ಹೆಂಡತಿಗಾಗಿ ಅಪಾರ ನಷ್ಟವನ್ನೇ ಅನುಭವಿಸಿರುವವರು... ಇವರಿಗೆಲ್ಲ ಸುಹಾಸಿನಿ ಮತ್ತು ಮಣಿರತ್ನಮ್ ಅವರ ಹೊಸ ಪ್ರಸಂಗದ ಬಗ್ಗೆ ಹೇಳಿದರೆ "ನೋಡಿ, ಮಣಿರತ್ನಮ್‌ರಂತಹ ನಿರ್ದೇಶಕನಿಗೆ ಸ್ತ್ರೀ ಸ್ವಾತಂತ್ರ್ಯದ ಬಗ್ಗೆಯಾಗಲಿ, ತನ್ನ ಪತ್ನಿಯ ಪ್ರತಿಭೆಯ ಮೇಲಾಗಲೀ ನಂಬಿಕೆ ಇರಲಿಲ್ಲ ಎಂಬುದನ್ನು ಇದು ತೋರಿಸುತ್ತದೆ...!!" ಎಂದರೆ ಯಾರೂ ಆಶ್ಚರ್ಯ ಪಡಬೇಕಿಲ್ಲ!!!

■ ಶೆಣೈ

ಸಿನಿ Bits

■ ಅರುಣ್.ಜಿ

ರವಿಚಂದ್ರನ್ ತಮ್ಮ ಬಾಲಾಜಿ "ನಾನು ನಟಿಸಿರುವ 'ರಾಜಕುಮಾರಿ' ಚಿತ್ರ ಇನ್ನೂ ಬಿಡುಗಡೆಯೇ ಆಗಿಲ್ಲ, ಕೊಬ್ಬಿ ಮಂಜುನಾಥಸ್ವಾಮಿಗಳು ನನ್ನ ಬಗ್ಗೆ ಕರುಣೆಯನ್ನೇ ತೋರುತ್ತಿಲ್ಲ" ಎಂದು ಸಪ್ಪೆ ಮೋರೆ ಹಾಕಿ ಕುಳಿತಿರುವಾಗಲೇ ಆತನಿಗೆ ದಾಡಿ ಮಹೇಶನ ಅನುಗ್ರಹ ದೊರೆತಿದೆ!

ಈ ವರ್ಷದ ಹಿಟ್ ಚಿತ್ರಗಳ ಸಾಲಿಗೆ ಸೇರಿರುವ 'ಮುಸ್ಸಂಜೆ ಮಾತು' ಚಿತ್ರದ ನಿರ್ದೇಶಕ, ದಾಡಿ ಎಂದೇ ಫೇಮಸ್ ಆಗಿರುವ ಮಹೇಶ್ ತನ್ನ ನಿರ್ದೇಶನದ ಎರಡನೇ ಚಿತ್ರಕ್ಕೆ ಬಾಲಾಜಿಯನ್ನೇ ನಾಯಕನನ್ನಾಗಿ ಆಯ್ಕೆ ಮಾಡಿದ್ದಾರೆ.




ಅಣ್ಣ ರವಿಚಂದ್ರನ್‌ನಂತೆ ಅದೃಷ್ಟ ಹೊಂದಿಲ್ಲದ ಬಾಲಾಜಿ ಈಗ ಮಹೇಶ್ ನಿರ್ದೇಶನದಲ್ಲಿ ಮತ್ತೊಬ್ಬ ಲಕ್ಕಿ ಸ್ಟಾರ್ ಪೂಜಾ ಗಾಂಧಿಯೊಂದಿಗೆ ನಟಿಸುತ್ತಿದ್ದಾರೆ. ದಾಡಿ ಮಹೇಶ್ ಮತ್ತು ಪೂಜಾಳ ಅದೃಷ್ಟ ಈ ಬಾರಿಯಾದರೂ ಬಾಲಾಜಿಯ ಕೈ ಹಿಡಿಯಲಿ!

* * * * *

ಹಿರಿಯ ಪತ್ರಕರ್ತೆ ಹಾಗೂ ಖ್ಯಾತ ವಿಚಾರವಾದಿ ಡಾ. ವಿಜಯಮ್ಮನವರ ಪುತ್ರ ಬಿ. ಸುರೇಶ್ ಈಗ ಫುಲ್ ಟೈಂ ಆ್ಯಕ್ಟರ್ ಆಗುತ್ತಿದ್ದಾರೆ.

ರಂಗಭೂಮಿಯ ಹಿನ್ನೆಲೆಯಿಂದ ಬಂದಿರುವ ಸುರೇಶ್ ಮೊದಲಿನಿಂದಲೂ ಕಿರುತೆರೆ ನಿರ್ದೇಶಕರಾಗೇ ಹೆಚ್ಚು ಗುರುತಿಸಿಕೊಂಡವರು. ಇವರು ನಿರ್ದೇಶಿಸಿದ 'ತಕಧಿಮಿತಾ', 'ಸಾಕುತಂತಿ', 'ಸಾಧನೆ' ಧಾರಾವಾಹಿಗಳೇ ಇದಕ್ಕೆ ಸಾಕ್ಷಿ. ಈ ಮಧ್ಯೆ 'ಥಪ್ಪೋರಿ' ಎಂಬ ಸಿನಿಮಾವನ್ನೂ ನಿರ್ದೇಶಿಸಿದ್ದರು ಸುರೇಶ್.



ಇತ್ತೀಚೆಗೆ ಬಿಡುಗಡೆಗೊಂಡ 'ಸ್ಲಂ ಬಾಲ' ಚಿತ್ರದಲ್ಲಿ ವಿಲನ್ ರಾಜಕಾರಣಿಯ ಪಾತ್ರದಲ್ಲಿ ಸಖತ್ ಮಿಂಚಿದ ಸುರೇಶ್‌ಗೆ ಈಗ ಎಲ್ಲಿಲ್ಲದ ಡಿಮ್ಯಾಂಡು ಬಂದುಬಿಟ್ಟಿದೆ. ಚನ್ನೇಗೌಡರ ಮಗ ಮುರಳಿ ಅಭಿನಯಿಸುತ್ತಿರುವ 'ಮುರಾರಿ' ಚಿತ್ರದಲ್ಲಿ ಎನ್‌ಕೌಂಟರ್‌ಗಳನ್ನು ಮಾಡುವ ಟಫ್ ಪೊಲೀಸ್ ಆಫೀಸರ್ ಪಾತ್ರದಲ್ಲೂ ಸುರೇಶ್ ಕಾಣಿಸಿಕೊಳ್ಳುತ್ತಿದ್ದಾರೆ.

* * * * *



ಆಲ್‌ದಿ ಬೆಸ್ಟ್, ಸರೀರೀ ಸರಿ, ರಾಶಿಚಕ್ರದಂಥ ಹಾಸ್ಯ ನಾಟಕಗಳನ್ನು ಮಾಡಿ ದಾಖಲೆ ನಿರ್ಮಿಸಿರುವ ಯಶವಂತ ಸರದೇಶಪಾಂಡೆ ಈಗ 'ಐಡಿಯಾ ಮಾಡ್ಯಾರ'!


ಥೇಟು ಉತ್ತರ ಕರ್ನಾಟಕದ ಭಾಷೆಯಲ್ಲೇ ಇರುವ 'ಐಡಿಯಾ ಮಾಡ್ಯಾರ' ಎಂಬ ಚಿತ್ರ ಟಿಟ್ ಅಂಡ್ ಟಿಟ್ ಕಾಮಿಡಿ ಸಬ್ಜೆಕ್ಟ್ ಅಂತೆ.

ಇಷ್ಟು ದಿನ ಕಾಮಿಡಿ ಚಿತ್ರಗಳಿಗೆ ಸಂಭಾಷಣೆ ಬರೆಯುತ್ತಾ, ನಾಟಕಗಳಲ್ಲಿ ಅಭಿನಯಿಸುತ್ತಾ ಒಂದಿಷ್ಟು ಕಾಸು ಮಾಡಿಕೊಂಡಿದ್ದ ಸರದೇಶಪಾಂಡೆ ಈಗ ತಾವು ದುಡಿದಿರುವ ದುಡ್ಡನ್ನೆಲ್ಲಾ ಹಾಕಿ ತಮ್ಮದೇ 'ಗುರು ಸಂಸ್ಥೆ' ಮೂಲಕ ಸಿನಿಮಾ 'ಐಡಿಯಾ ಮಾಡ್ಯಾರ'.

'ಐಡಿಯಾ' ಕೈಕೊಟ್ಟು ಸರದೇಶಪಾಂಡೆ ಜೇಬಿಗೆ ಕತ್ತರಿ ಬೀಳದಿದ್ದರೆ ಸಾಕು!! ■

R B P LANKESH, Kannada Weekly Price Rs. 12/- 3-12-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B

ರಜನಿ ಜೊತೆ ವಿಷ್ಣು



ಮೂವರೂ ಮೂಲಭೂತವಾಗಿ ಕನ್ನಡಿಗರು. ಆದರೆ ಅವರಲ್ಲಿ ಒಬ್ಬರು ತಮಿಳಿನಲ್ಲಿ ಸೂಪರ್ ಸ್ಟಾರ್ ಆಗಿದ್ದರೆ, ಮತ್ತೊಬ್ಬರು ಕನ್ನಡದಲ್ಲಿ ಲೀಡಿಂಗ್ ಸ್ಟಾರ್ ಆಗಿದ್ದಾರೆ. ಹಾಗೆಯೇ ಮೂರನೆಯವರು ಹಿಂದಿ ಚಿತ್ರರಂಗ ದಲ್ಲಿ ಅತಿ ಬೇಡಿಕೆಯ ನಟಿಯಾಗಿದ್ದಾರೆ. ಈಗ ಈ ಮೂವರು ಒಂದು ತಮಿಳು ಚಿತ್ರದಲ್ಲಿ ಜೊತೆಯಾಗಿ ನಟಿಸುತ್ತಿದ್ದಾರೆ. ಯಾರಪ್ಪ ಈ ತ್ರಿಮೂರ್ತಿಗಳು ಅಂತೀರಾ?

ಅವರು ರಜನೀಕಾಂತ್, ವಿಷ್ಣುವರ್ಧನ್ ಮತು ಐಶ್ವರ್ಯ ರೈ.

ಚಿತ್ರದ ಹೆಸರು 'ಯಂದಿರನ್' (ರೋಬೋಟ್). ಶಂಕರ್ ನಿರ್ದೇಶಿಸುತ್ತಿರುವ ಈ ಚಿತ್ರದ ಬಡ್ಜೆಟ್ ಕೇವಲ 160 ಕೋಟಿ ರೂಪಾಯಿ. ಇದರಲ್ಲಿ ಐಶ್ ಬೇಬಿ ರಜನೀ ಜೊತೆ ನಾಯಕಿಯಾಗಿದ್ದರೆ ವಿಷ್ಣು ಅವರಿಗೆ ಮುಖ್ಯ ಪಾತ್ರ ಇದೆಯಂತೆ.

ವಿಷ್ಣುಗೆ ಪರಭಾಷೆಯ ನಂಟು

ಈ ಹಿಂದೆ ವಿಷ್ಣುವರ್ಧನ್ ಮಲೆಯಾಳಂ ಸೂಪರ್ ಸ್ಟಾರ್ ಮಮ್ಮುಟಿ ಜೊತೆ 'ಕೌರವರ್' ಎಂಬ ಚಿತ್ರದಲ್ಲಿ ಅಭಿನಯಿಸಿದ್ದರು. ಒಮ್ಮೆ ಅವರೇ ನಿರ್ಮಾಪಕರಾಗಿ, ನಾಯಕ ನಟನಾಗಿ ಹಿಂದಿ ಚಿತ್ರವೊಂದನ್ನೂ ಮಾಡಿದ್ದರು. ಹಾಗೆಯೇ ಹನ್ನೆರಡು ವರ್ಷಗಳ ಹಿಂದೆ ತಮಿಳಿನಲ್ಲಿ ಆರಂಭವಾದ 'ಮರುದನಾಯಗನ್' ಚಿತ್ರದಲ್ಲೂ ಒಬ್ಬ ಸುಲ್ತಾನನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಕಮಲ್‌ಹಾಸನ್ ನಿರ್ದೇಶಿಸುತ್ತಿದ್ದ ಮತ್ತು ನಾಯಕನಾಗಿ ನಟಿಸುತ್ತಿದ್ದ ಐತಿಹಾಸಿಕ ಕತೆಯನ್ನಾಧರಿಸಿದ್ದ ಈ ಚಿತ್ರದ ಮುಹೂರ್ತಕ್ಕೆ ಬ್ರಿಟನ್ ರಾಣಿ ಎಲಿಜಬೆತ್ ಚೆನ್ನೈಗೆ ಆಗಮಿಸಿ ಕ್ಲಾಪ್ ಮಾಡಿ ಹೋಗಿದ್ದರು. ಆದರೆ ನೂರಾರು ಕೋಟಿಯ ಬಂಡವಾಳದಲ್ಲಿ ಆರಂಭವಾದ ಈ ಚಿತ್ರ ಮಾತ್ರ ಇನ್ನೂ ಪೂರ್ಣಗೊಂಡಿಲ್ಲ, ಸದ್ಯ ಅರ್ಧಕ್ಕೇ ನಿಂತಿರುವ ಈ ಚಿತ್ರ ಪೂರ್ಣಗೊಳ್ಳಲು ಬೇಕಾಗಿರುವುದು ಕೇವಲ ಇನ್ನೂರು ಕೋಟಿ ಮಾತ್ರ!!

ರಜನಿಯೊಂದಿಗೆ ಮೂರನೇ ಚಿತ್ರ


ರಜನಿಯ ವೃತ್ತಿ ಜೀವನ ಆರಂಭವಾಗಿದ್ದೇ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಕನ್ನಡ ಸಿನಿಮಾ 'ಕಥಾಸಂಗಮ'ದಿಂದ. ಆನಂತರ ಅವರಿಗೆ ತಮಿಳಿನಲ್ಲಿ ಬಾಲಚಂದರ್ ಅವಕಾಶ ಕೊಟ್ಟು ರಜನಿ ಅಲ್ಲಿ ಸೂಪರ್‌ಸ್ಟಾರ್ ಆದರು. ಆದರೂ ಅದೇ ಸಮಯದಲ್ಲಿ ವಿಷ್ಣು ಕಾಂಬಿನೇಷನ್‌ನೊಂದಿಗೆ ಒಂದೆರಡು ಕನ್ನಡ ಚಿತ್ರಗಳಲ್ಲೂ ನಟಿಸಿದ್ದರು. ಆಗ ರಜನಿ-ವಿಷ್ಣು ನಟಿಸಿದ್ದ 'ಸಹೋದರರ ಸವಾಲ್' ಮತ್ತು 'ಗಲಾಟೆ ಸಂಸಾರ' ಚಿತ್ರಗಳು ಹಿಟ್ ಆಗಿದ್ದವು. ಆಫ್ ಕೋರ್ಸ್ ಆನಂತರ ರಜನಿ ತಮಿಳಿನಲ್ಲೇ ಬ್ಯುಸಿ ಆಗಿದ್ದರಿಂದ ಅವರು ಈ ಕಡೆ ಬಂದಿರಲಿಲ್ಲ,

ಈಗ 'ರೋಬೋಟ್' ವಿಷ್ಣು ಮತ್ತು ರಜನಿ ಜೊತೆಯಾಗಿ ನಟಿಸುತ್ತಿರುವ ಮೂರನೇ ಚಿತ್ರವಾಗಲಿದೆ.

ವಿಷ್ಣು ಅವರು ಈ ಕಾಲದಲ್ಲೂ ಭಾಷೆ ಮತ್ತು ರಾಜ್ಯದ ಗಡಿಗಳನ್ನು ದಾಟಿ ತಮ್ಮ ಕಲಾಭಿಮಾನವನ್ನು ವ್ಯಕ್ತಪಡಿಸುತ್ತಿರುವುದು ಅಭಿನಂದನೀಯ.

■ಅರುಣ್


ದುನಿಯಾ ವಿಜಿಗೆ ಲೂಸ್ ಮಾದ ಸಾಟಿಯೇ?



ಇಂಥದ್ದೊಂದು ಪ್ರಶ್ನೆ ಈಗ ಎಲ್ಲರ ಕಾಡುತ್ತಿದೆ ಎಂದರೆ ನಿಮಗೆ ಅಚ್ಚರಿಯಾಗಬಹು ಆದರೆ ಅತ್ತ ತನ್ನ ಸೋದರಮಾವ ವಿಜ ಸಿಕ್ಸ್ ಪ್ಯಾಕ್ಸ್ ದೇಹದಾರ್ಢ್ಯದಿಂದ ಮಿರ ಮಿಂಚುತ್ತಿದ್ದರೆ, ಇತ್ತ ಪಂಕ್ಚರ್ ಆದ ಟ್ಯೂಬಿನಂತಿರ ಲೂಸ್ ಮಾದ ಕೂಡಾ ಮಾವನಿಗಿಂತ ತಾನೇ ಕಮ್ಮಿ ಎಂದು ಸಿಕ್ಸ್ ಪ್ಯಾಕ್ಸ್ ಹೊಂದಲು ಕಸ ಆರಂಭಿಸಿದ್ದಾನಂತೆ.

ಸದ್ಯಕ್ಕೆ ಈ ವರ್ಷ 'ನಂದ ಲವ್ಸ್ ನಂದಿ ಎಂಬ ಹಿಟ್ ಚಿತ್ರದಲ್ಲಿ ಅಭಿನಯಿಸಿ, 'ಅಂಬಾ 'ಯೋಗಿ' ಮುಂತಾದ ಚಿತ್ರಗಳಲ್ಲಿ ಹೀರೋ ಮಿಂಚುತ್ತಿರುವ ಲೂಸ್ ಮಾದ ಅಲಿಯಾ ಯೋಗೇಶ ಎಂಬ ಕಡ್ಡಿ ಫೈಲ್ವಾನ ಸಿಕ್ಸ್ ಪಾ ಮೈಕಟ್ಟು ಹೊಂದುತ್ತಾನಾ ಅನ್ನೋದೇ ಡೌಟು!

ಮಿತ್ರರ ಮುನಿಸು



'ಆಪ್ತಮಿತ್ರ ಭಾಗ-2' ಚಿತ್ರದಲ್ಲಿ ಯಾವುದೇ ಕಾರಣಕ್ಕೂ ತಾನು ನಟಿಸುವುದಿಲ್ಲ ಎಂದು ದ್ವಾರಕೀಶ್ ಮೊನ್ನೆ ಘೋಷಿಸಿದರು.

ಎಲ್ಲರಿಗೂ ಗೊತ್ತಿರುವಂತೆ 'ಆಪ್ತಮಿತ್ರ ಭಾಗ-2' ಚಿತ್ರದ ನಾಯಕ ವಿಷ್ಣುವರ್ಧನ್. ಮಾತ್ರವಲ್ಲ ಅದು ಅವರ ಅಭಿನಯದ ಇನ್ನೂರನೇ ಚಿತ್ರ. 'ಆಪ್ತಮಿತ್ರ' ಚಿತ್ರ ನಿರ್ಮಾಣದ ಪಾಲುದಾರರಾದ ಕೃಷ್ಣಕುಮಾರ್ ಸ್ವತಂತ್ರವಾಗಿ ಈ ಚಿತ್ರ ನಿರ್ಮಿಸುತ್ತಿದ್ದಾರೆ.

ಈ ಚಿತ್ರದ ಬಗ್ಗೆ ಪ್ರಸ್ತಾಪಿಸಿ "ಅದರಲ್ಲಿ ನಟಿಸುವ ಆಫರ್ ನಿಮಗೆ ಬಂದರೆ....?" ಎಂದು ದ್ವಾರಕೀಶ್ ಅವರನ್ನು ಕೇಳಿದರೆ ಅವರು ಕೆಂಡಾಮಂಡಲವಾಗುತ್ತಾರೆ. "ಯಾವುದೇ ಕಾರಣಕ್ಕೂ, ಯಾರು ಎಷ್ಟೇ ಒತ್ತಡ ಹೇರಿದರೂ ನಾನು ಅದರಲ್ಲಿ ನಟಿಸುವುದಿಲ್ಲ" ಎಂದು ಕಡ್ಡಿ ತುಂಡಾಗುವಂತೆ ಆರ್ಭಟಿಸುತ್ತಾರೆ.

ಈ ಆರ್ಭಟ ವಿಷ್ಣುವರ್ಧನ್ ಮತ್ತು ದ್ವಾರಕೀಶ್ ನಡುವಿನ ಹಳೇ ಜಗಳದ ಹೊಸ ಅಧ್ಯಾಯ ಎಂದೇ ಗಾಂಧಿನಗರದವರು ವಿಶ್ಲೇಷಿಸುತ್ತಿದ್ದಾರೆ.

ಒಂದಾನೊಂದು ಕಾಲದಲ್ಲಿ ದ್ವಾರಕೀಶ್ ಮತ್ತು ವಿಷ್ಣು ಜೋಡಿ ಅತ್ಯಂತ ಯಶಸ್ವೀ ಸಿನಿಮಾಗಳನ್ನು ನೀಡಿತ್ತಲ್ಲದೆ, ಅವರಿಬ್ಬರು ನಿಜಜೀವನದಲ್ಲೂ ಆಪ್ತ ಮಿತ್ರರಾಗಿದ್ದರು. ಆದರೆ ಅದ್ಯಾವುದೋ ಕಾರಣಕ್ಕೆ ಇವರಿಬ್ಬರ ನಡುವೆ ಮನಸ್ತಾಪ ಉಂಟಾಗಿ ಇಬ್ಬರೂ ಬೇರೆ ಬೇರೆಯಾಗಿದ್ದರು. ಎಷ್ಟರಮಟ್ಟಿಗೆ ಅಂದರೆ ಒಮ್ಮೆ ಒಂದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾಗಲೂ, ಇನ್ನೊಮ್ಮೆ ಒಂದೇ ಲಿಫ್ಟ್‌ನಲ್ಲಿ ಮುಖಾಮುಖಿ ಆಗಿದ್ದಾಗಲೂ ಒಬ್ಬರನ್ನೊಬ್ಬರು ಮಾತನಾಡಿಸಿರಲಿಲ್ಲ. ಹಿಂದೆ ಇವರಿಬ್ಬರ ಸ್ನೇಹ ಎಷ್ಟು ಆಳವಾಗಿತ್ತೋ ಹಾಗೆಯೇ ಅವರ ದ್ವೇಷ ಕೂಡಾ ಅಷ್ಟೇ ಅಗಾಧವಾಗಿತ್ತು!



ವಿಷ್ಣು ಜೊತೆಗಿನ ಸಂಬಂಧ ಕೆಟ್ಟುಹೋದಾಗ "ನಾನು ಇನ್ನೊಬ್ಬ ವಿಷ್ಣುವರ್ಧನ್‌ನನ್ನು ಸೃಷ್ಟಿಸುತ್ತೇನೆ" ಎಂದು ದ್ವಾರಕೀಶ್ ಸವಾಲು ಹಾಕಿದ್ದರು. ಆನಂತರ 15 ವರ್ಷಗಳ ಕಾಲ ದ್ವಾರ್ಕಿಯ ಒಂದೇ ಒಂದು ಚಿತ್ರ ಹಿಟ್ ಆಗಲಿಲ್ಲ, ಸಾಲದ ಮೇಲೆ ಸಾಲ ಹೆಚ್ಚಾಗುತ್ತಾ ಅದು ಹದಿನೈದು ಕೋಟಿಗೆ ಬಂದು ತಲುಪಿತ್ತು, ಅದೇ ಹೊತ್ತಿಗೆ ವಿಷ್ಣು ಮಾತ್ರ ಹಿಟ್ ಚಿತ್ರಗಳನ್ನು ನೀಡುತ್ತಾ ಸಾಹಸಸಿಂಹನಾಗಿಯೇ ಮೆರೆಯುತ್ತಿದ್ದರು.

ಕೆಲ ವರ್ಷಗಳ ಹಿಂದೆ ದ್ವಾರಕೀಶ್ ಮಲೆಯಾಳಂನಲ್ಲಿ ಹಿಟ್ ಆಗಿದ್ದ ಚಿತ್ರವೊಂದರ ರೀಮೇಕ್ ಹಕ್ಕುಗಳನ್ನು ಪಡೆದು, ಮೂಲ ಚಿತ್ರದಲ್ಲಿನ ಗೆಸ್ಟ್ ಪಾತ್ರವನ್ನು ಹಿಗ್ಗಿಸಿ, ಆ ಪಾತ್ರದಲ್ಲಿ ತನ್ನ ಮಾಜಿ ಸ್ನೇಹಿತ ವಿಷ್ಣು ಅವರೇ ನಟಿಸಬೇಕೆಂದು ದುಂಬಾಲು ಬಿದ್ದರು. ಅದೇ ಹೊತ್ತಿಗೆ ವಿಷ್ಣು ಅವರ ಕೆಲ ಚಿತ್ರಗಲೂ ಫ್ಲಾಪ್ ಆಗಿದ್ದರಿಂದ ಅವರೂ ಇದಕ್ಕೆ ಒಪ್ಪಿದರು. ಹೀಗೆ ಕಳ್ಳ-ಕುಳ್ಳ ಮತ್ತೆ ಒಂದಾದರು. 'ಆಪ್ತಮಿತ್ರ' ಸೆಟ್ಟೇರಿ, ಸೂಪರ್ ಹಿಟ್ ಆಗಿ ಹಣದ ಸುರಿಮಳೆಯನ್ನೇ ಸುರಿಸಿತು. ದ್ವಾರಕೀಶ್ ಹಳೆಯ ಸಾಲಗಳನ್ನೆಲ್ಲಾ ತೀರಿಸಿ ಹೊಸ ಮನೆಯನ್ನು ಖರೀದಿಸಿ ಒಂದಿಷ್ಟು ಹಣವನ್ನು ಬ್ಯಾಂಕಿನಲ್ಲಿಟ್ಟು ಈಗ ಮತ್ತೆ ಐಶಾರಾಮಿ ಜೀವನ ನಡೆಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಒಂದು ವರ್ಷ ಕಾಲ ಪ್ರದರ್ಶನ ಕಂಡು ದಾಖಲೆ ನಿರ್ಮಿಸಿದ ಚಿತ್ರಗಳಲ್ಲಿ 'ಆಪ್ತಮಿತ್ರ' ಕೂಡ ಒಂದು. ಆದರೆ ಆ ಚಿತ್ರದ ಯಶಸ್ಸಿಗೆ ಕಾರಣ ಯಾರು ಎಂಬುದರ ಬಗೆಯೇ ಆ ಚಿತ್ರದ ತಂಡದಲ್ಲಿ ವಿವಾದಗಳು ಎದ್ದಿದ್ದವು. ದ್ವಾರಕೀಶ್ ಹಲವು ಗೆಳೆಯರ ಮುಂದೆ "ಆಪ್ತಮಿತ್ರ ಗೆದ್ದಿದ್ದು ಸೌಂದರ್ಯಾಳಿಂದ" ಎಂದು ಹೇಳಿದ್ದರಂತೆ. ಇನ್ನೂ ಕೆಲವರ ಬಳಿ "ಈ ಚಿತ್ರದ ಕಥೆಯೇ ಹೀರೋ" ಎಂದಿದ್ದರಂತೆ.

ಇದೆಲ್ಲ ವಿಷ್ಣು ಅವರ ಕಿವಿಗೆ ಬಿದ್ದಿತ್ತು.

ಪರಿಣಾಮವಾಗಿ 'ಆಪ್ತಮಿತ್ರ' ಒಂದು ವರ್ಷದ ಗಡಿ ದಾಟಿದಾಗ ಲೀ ಮೆರಿಡಿಯನ್ ಹೋಟೆಲ್‌ನಲ್ಲಿ ದ್ವಾರಕೀಶ್ ಒಂದು ಸಮಾರಂಭವನ್ನು ಏರ್ಪಡಿಸಿದರು. ಆದರೆ ಅದಕ್ಕೆ ವಿಷ್ಣುವರ್ಧನ್ ಅವರನ್ನು ಆಹ್ವಾನಿಸಿರಲಿಲ್ಲ, ಆನಂತರ ವಿಷ್ಣುವರ್ಧನ್ ನೇತೃತ್ವದಲ್ಲಿ ಮತ್ತೊಂದು ಸಮಾರಂಭ ಕ್ಯಾಪಿಟಲ್ ಹೋಟೆಲ್‌ನಲ್ಲಿ ನಡೆಯಿತು. ಅಲ್ಲಿ ಕುಳ್ಳನಿಗೆ ಎಂಟ್ರಿ ಇರಲಿಲ್ಲ,

ಇವರ ಜಗಳ ಈಗ ಇನ್ನೊಂದು ಹಂತಕ್ಕೆ ಬಂದು ನಿಂತಿದೆ. "ನಿಮ್ಮ ಮಾಜಿ ಆಪ್ತಮಿತ್ರನ ಇನ್ನೂರನೆ ಚಿತ್ರದಲ್ಲಿ ನೀವು ಯಾಕೆ ನಟಿಸುವುದಿಲ್ಲ?" ಎಂದು ಕೇಳಿದರೆ ದ್ವಾರಕೀಶ್ "ನಾನು ನನ್ನ ಜೀವನದ ಕೊನೆಯ ರೀಲ್‌ನಲ್ಲಿದ್ದೇನೆ. ಈ ಹಂತದಲ್ಲಿ ವಿಲನ್‌ಆಗಿ ಹೀರೋ ವಿರುದ್ಧ ಹೋರಾಡುವ ಸ್ಥಿತಿಯಲ್ಲಿ ನಾನಿಲ್ಲ" ಎಂದು ಮಾರ್ಮಿಕವಾಗಿ ಉತ್ತರಿಸುತ್ತಾರೆ.

ಆದರೆ ಯಾರಿಗೆ ಗೊತ್ತು? ಚಿತ್ರರಂಗವೂ ಒಂದು ರೀತಿಯಲ್ಲಿ ರಾಜಕೀಯ ರಂಗವಿದ್ದಂತೆ. ಹಾಗಾಗಿ ಮುಂದೊಂದು ದಿನ 'ಆಪ್ತಮಿತ್ರ ಭಾಗ-3' ಚಿತ್ರ ತಯಾರಾದರೆ ಅದರಲ್ಲಿ ಇವರಿಬ್ಬರೂ ಮತ್ತೆ ಒಟ್ಟಿಗೆ ನಟಿಸಿದರೂ ಆಶ್ಚರ್ಯವಿಲ್ಲ,

ಸದ್ಯಕ್ಕೆ ಮತ್ತೆ ಇಬ್ಬರೂ ಟೂ ಬಿಟ್ಟಿದ್ದಾರಷ್ಟೇ!

■ ಶೆಣೈ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial